# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜನವರಿ 15, 2023

ದಾವಣಗೆರೆ, ಚಿತ್ರದುರ್ಗ, ಹಾವೇರಿ, ಶಿವಮೊಗ್ಗ, ವಿಜಯನಗರ, ಚಿಕ್ಕಮಗಳೂರು, ತುಮಕೂರು, ಗದಗ ಜಿಲ್ಲೆಗಳಲ್ಲಿ ಪ್ರಸಾರ ಹೊಂದಿರುವ ಪ್ರಾದೇಶಿಕ ಪತ್ರಿಕೆ

ಸಂಪುಟ : 49 ಸಂಚಿಕೆ : 243 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 5.00 www.janathavani.com janathavani@mac.com


# ಪಂಚಮಸಾಲಿಗೆ ಸಿಕ್ಕೇ ಸಿಗುತ್ತೈತಿ ಮೀಸಲಾತಿ

## ಹರ ಜಾತ್ರೆಯಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಭರವಸೆ, ವಚನಾನಂದ ಶ್ರೀಗಳ ವಿಶ್ವಾಸ

**ಕೆ.ಎನ್. ಮಲ್ಲಿಕಾರ್ಜುನ ಮೂರ್ತಿ**

ದಾವಣಗೆರೆ, ಜ.14- ಯಾವ ಕಾರಣಕ್ಕೂ ಪಂಚಮಸಾಲಿ ಸಮಾಜಕ್ಕೆ ಅನ್ಯಾಯ ಮಾಡುವುದಿಲ್ಲ. ಸಾಮಾಜಿಕ ಬದ್ಧತೆಯ ನ್ಯಾಯವನ್ನು ಖಂಡಿತವಾಗಿಯೂ ಕೊಟ್ಟೇ ಕೊಡುತ್ತೇನೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಿಸಿದರು.

ಹರಿಹರದ ಹೊರ ವಲಯದಲ್ಲಿರುವ ಶ್ರೀ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಿಂದ ಆಯೋಜಿಸಲಾಗಿದ್ದ ಹರ ಜಾತ್ರಾ ಮಹೋತ್ಸವದಲ್ಲಿ 'ರೈತ ರತ್ನ ಸಮಾವೇಶ' ಉದ್ಘಾಟಿಸಿ ಅವರು ಮಾತನಾಡಿದರು.

'ಕೆಲವರು ಅವಸರದಲ್ಲಿ ನನ್ನ ಬಗ್ಗೆ ಮಾತನಾಡುತ್ತಾರೆ. ಯಾರು ಸರಿ? ಯಾರು ತಪ್ಪು? ಎಂದು ಅವರಿಗೆ ಸ್ವಲ್ಪ ದಿನದಲ್ಲಿಯೇ ಗೊತ್ತಾಗುತ್ತದೆ.' ನಾನು ಯಾರ ಬಗ್ಗೆಯೂ ವೈಯಕ್ತಿಕವಾಗಿ ಮಾತನಾಡುವುದಿಲ್ಲ. ನನ್ನ ಕಣ್ಮುಂದೆ ಕಾಣುವುದು ಬರೀ ಸಮಾಜ ಮಾತ್ರ, ವೈಯಕ್ತಿಕ ವ್ಯಕ್ತಿಗಳಲ್ಲ. ಯಾರು ನನ್ನ ಬಗ್ಗೆ ಏನೇ ಮಾತನಾಡಲಿ, ನಾನು ಮಾತ್ರ ನಿಮ್ಮ ವಿಶ್ವಾಸಕ್ಕೆ ಕೂದಲೆಳೆಯಷ್ಟೂ ಧಕ್ಕೆಯಾಗದಂತೆ ಮಾಡುತ್ತೇನೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಮೀಸಲಾತಿ ವಿಚಾರಕ್ಕೆ ಸಂಬಂಧಿಸಿದಂತೆ ಧನಾತ್ಮಕ ಭರವಸೆ ನೀಡಿದರು.

ಪ್ರವರ್ಗ 2 ಬೇಡಿಕೆಗೆ ಸಂಬಂಧಿಸಿದಂತೆ ಮೊದಲನೇ ಹೆಜ್ಜೆಯನ್ನು ಸರಿಯಾದ ದಾರಿಯಲ್ಲಿ ಇಟ್ಟಿದ್ದೇವೆ. 2ನೇ ಹೆಜ್ಜೆಯನ್ನೂ ಹೇಗೆ ಇಡಬೇಕೆಂಬ ಬಗ್ಗೆ ಪ್ರಕ್ರಿಯೆ ಆರಂಭವಾಗಿದೆ. ಪ್ರತಿ ಹೆಜ್ಜೆಯನ್ನೂ ವಿಚಾರ ಮಾಡಿ ಇಡಬೇಕಾಗುತ್ತದೆ. ಇದು ಕೇವಲ ಅವಸರ ಮಾಡುತ್ತಾ, ಗಡುವುಗಳನ್ನು ನೀಡಿದರೆ ಸಮಾಜಕ್ಕೆ ಶಾಶ್ವತವಾಗಿ ಅನ್ಯಾಯ ಮಾಡಿದಂತಾಗುತ್ತದೆ ಎಂದು ಎಚ್ಚರಿಸಿದರು.

ನ್ಯಾಯಾಲಯ ಪೂರ್ಣ ಪ್ರಮಾಣದ ತಡೆಯಾಜ್ಞೆ ಕೊಟ್ಟಿಲ್ಲ. ನಮ್ಮ ವಾದವನ್ನು ಪ್ರಬಲವಾಗಿ ಮಂಡಿಸಿ, ನಮ್ಮ ತೀರ್ಮಾನವನ್ನು ನ್ಯಾಯ ಸಮ್ಮತವಾಗಿ ಸಮರ್ಪಿಸಿ, ಮುಂದಿನ ಹೆಜ್ಜೆ ಇಡುತ್ತೇವೆ. ಅಂತಿಮ ವರದಿಯಲ್ಲೂ ಸಹ ಸೂಕ್ತ ಕ್ರಮ ತೆಗೆದುಕೊಂಡು ನಿಮ್ಮ ನಿರೀಕ್ಷೆಗೆ ನ್ಯಾಯ ಕೊಡಿಸುವ ಕೆಲಸ ಖಂಡಿತಾ ಮಾಡುತ್ತೇನೆ ಎಂದು ಹೇಳಿದರು.

ಸದಾಶಿವ ಆಯೋಗ ಒಂದು ವರದಿ ಸಲ್ಲಿಸಿ 10 ವರ್ಷವಾದರೂ ಯಾವುದೇ ಸರ್ಕಾರ ತೆರೆದು ನೋಡಿರಲಿಲ್ಲ. ಕಾಂತರಾಜ್ ಸಮಿತಿ (2ನೇ ಪುಟಕ್ಕೆ)

### ಬಿಜಾಪುರದಲ್ಲೊಂದು ನಾಟಕ ಕಂಪನಿ ಇದೆ: ನಿರಾಣಿ

'ಬಿಜಾಪುರದಲ್ಲಿ ಒಂದು ನಾಟಕ ಕಂಪನಿ ಇದೆ. ಅದು ಯಾವಾಗ ಯಾರಿಗೆ ಬಯ್ಯುತ್ತೋ ಗೊತ್ತಿಲ್ಲ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ಆರ್. ನಿರಾಣಿ ಹೇಳಿದರು. ಹರಜಾತ್ರಾ ಮಹೋತ್ಸವದಲ್ಲಿ 'ರೈತ ರತ್ನ ಸಮಾವೇಶ'ದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಅವರದ್ದು ಎಲುಬಿಲ್ಲದ ನಾಲಿಗೆ. ಸುಸಂಸ್ಕೃತ ಪಂಚಮ ಸಾಲಿ ಸಮಾಜದಲ್ಲಿ ಇಂತವರೂ ಇದ್ದಾರೆ ಎಂದು ಬಿಜಾಪುರ ಹಾಗೂ ಹುನಗುಂದದ (2ನೇ ಪುಟಕ್ಕೆ)



## ವಾಲ್ಮೀಕಿ-ಕಾಗಿನೆಲೆ ಶ್ರೀ ಹಾದಿಯಲ್ಲಿ ನಮ್ಮ ಮೀಸಲಾತಿ ಹೋರಾಟ

**ಎಂ.ಚಿದಾನಂದ ಕಂಚಿಕೇರಿ**

ಹರಿಹರ, ಜ. 14 – ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಯನ್ನು ಶಾಂತಿಯುತವಾಗಿ ಪಡೆಯಬೇಕೇ ಹೊರತು ದೌರ್ಜನ್ಯ ಹಾಗೂ ದಬ್ಬಾಳಿಕೆ ಮಾಡುವುದರ ಮೂಲಕ ಅಲ್ಲ ಎಂದು ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅಭಿಪ್ರಾಯ ಪಟ್ಟಿದ್ದಾರೆ.

ನಗರದ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ನಡೆಯುತ್ತಿರುವ ಹರ ಜಾತ್ರಾ ಮಹೋತ್ಸವದ ಬೃಹತ್ ಜನಜಾಗೃತಿ ಸಮಾವೇಶದ ದಿವ್ಯಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸಾಮಾಜಿಕ ನ್ಯಾಯ ಒದಗಿಸುತ್ತಾರೆ ಎಂಬ ಅಚಲವಾದ ನಂಬಿಕೆ ಇದೆ. ಕಾನೂನು ತೊಡಕುಗಳು ಬಾರದಂತೆ ಅವರು ಮೀಸಲಾತಿ ಸೌಲಭ್ಯ ಒದಗಿಸಲಿದ್ದಾರೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಸ್ವಾಮೀಜಿ ತಾಳ್ಮೆಯಿಂದ ತಮ್ಮ ಸಮುದಾಯಕ್ಕೆ ಮೀಸಲಾತಿ ಪಡೆದುಕೊಂಡು ಬಂದರು. ಕಾಗಿನೆಲೆ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಅವರು ದೊಡ್ಡ ಹೋರಾಟ ಮಾಡಿ ತಾಳ್ಮೆಯಿಂದ ಮೀಸಲಾತಿ ಪಡೆಯುವತ್ತಾ ಹೆಜ್ಜೆ ಹಾಕುತ್ತಿದ್ದಾರೆ. ನಾವೂ ಸಹ ಅವರ ಹಾದಿಯಲ್ಲಿ ಸಾಗಿ ಮೀಸಲಾತಿ ಸೌಲಭ್ಯ ಪಡೆಯೋಣ ಎಂದರು.

ವಾಲ್ಮೀಕಿ ಗುರುಪೀಠದ ಜಗದ್ಗುರು ಶ್ರೀ ಪ್ರಸನ್ನಾನಂದ ಮಹಾಸ್ವಾಮಿಗಳು ಮಾತನಾಡಿ, ಯಾವುದೇ ಸಮುದಾಯಕ್ಕೆ ಅನ್ಯಾಯ ಆಗದ ರೀತಿಯಲ್ಲಿ ಎಲ್ಲಾ ವರ್ಗದವರಿಗೂ ಸರ್ಕಾರ ನ್ಯಾಯ ಒದಗಿಸಬೇಕಿದೆ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಪಂಚಮಸಾಲಿ ಸಮುದಾಯಕ್ಕೆ 2ಡಿ ಮೀಸಲಾತಿ ಘೋಷಣೆ ಮಾಡಿರುವುದನ್ನು ಸ್ವಾಗತಿಸುವುದಾಗಿ ಹೇಳಿದರು.

ಕಾಗಿನಲೆ ಕನಕ ಗುರುಪೀಠದ ಜಗದ್ಗುರು ಶ್ರೀ ನಿರಂಜನಾನಂದಪುರಿ ಮಹಾಸ್ವಾಮಿಗಳು ಮಾತನಾಡಿ, ಪಂಚಮಸಾಲಿ ಸಮಾಜ ಮತ್ತು ಹಾಲಮತ ಸಮಾಜದವರು ತಾಯಿ ಮಕ್ಕಳ ಸಂಬಂಧ ಹೊಂದಿರುವ ಸಮಾಜಗಳಾಗಿವೆ ಎಂದರು.

ಪಂಚಮಸಾಲಿ ಸಮಾಜದ ರಾಜ್ಯಾಧ್ಯಕ್ಷ ಜಿ.ಪಿ. ಪಾಟೀಲ್ ಮಾತನಾಡಿ, ಸಮಾಜದಲ್ಲಿ ಸಂಘಟನೆಯ ಕೊರತೆ ಇದೆ. 20 ರಿಂದ 22 ಲಿಂಗಾಯತ ಶಾಸಕರು ಇದ್ದಾರೆ. ಆದರೆ ಸರ್ಕಾರದಲ್ಲಿ ಪ್ರಭಾವ ಬೀರುವ ಕೆಲಸ ನಮ್ಮ ಸಮಾಜದಿಂದ ಆಗುತ್ತಿಲ್ಲ ಎಂದರು.

ಈ ಸಂದರ್ಭದಲ್ಲಿ (2ನೇ ಪುಟಕ್ಕೆ)



## ಜಗತ್ತು ನಡೆಯುತ್ತಿರುವುದೇ ನಂಬಿಕೆ-ವಿಶ್ವಾಸದ ಮೇಲೆ

### ಮುಖ್ಯಮಂತ್ರಿಗಳು ನ್ಯಾಯ ಕೊಡಿಸುವ ವಿಶ್ವಾಸವಿದೆ: ವಚನಾನಂದ ಶ್ರೀ

ದಾವಣಗೆರೆ, ಜ.14- ಜಗತ್ತು ನಡೆಯುತ್ತಿರುವುದೇ ನಂಬಿಕೆ, ವಿಶ್ವಾಸದ ಮೇಲೆ. ನಂಬಿಕೆಯೇ ಇಲ್ಲ ಎಂದರೆ ಹೇಗೇ? ಇಂದು ನಮ್ಮ ಸಮುದಾಯಕ್ಕೆ ಬೇಕಿರುವುದು ಮೀಸಲಾತಿ. ಅದು ನಮ್ಮ ಹಕ್ಕು. ಅದನ್ನು ಪಡೆಯಬೇಕಾದರೆ ಸಾಮಾಜಿಕವಾಗಿ, ಸಂವಿಧಾನಾತ್ಮಕಾಗಿ ಮಾನ್ಯತೆಯಾಗಬೇಕು. ಬೇರಾವುದೇ ಸಮುದಾಯಕ್ಕೆ ಅನ್ಯಾಯವಾಗದಂತೆ ಸಾಮಾಜಿಕ ನ್ಯಾಯವನ್ನು ಬೊಮ್ಮಾಯಿ ಕೊಡುತ್ತಾರೆಂಬ ಸಂಪೂರ್ಣ ವಿಶ್ವಾಸವಿದೆ ಎಂದು ಹರಿಹರ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಹೇಳಿದರು.

ಶ್ರೀ ಪೀಠದಿಂದ ಆಯೋಜಿಸಿದ್ದ ಹರ ಜಾತ್ರಾ ಮಹೋತ್ಸವದಲ್ಲಿ 'ರೈತ ರತ್ನ ಸಮಾವೇಶ'ದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಕೇಂದ್ರದಲ್ಲಿ ಒಬಿಸಿ, ರಾಜ್ಯದಲ್ಲಿ 2ಎ ಸಿಗಬೇಕೆಂದು ಕಾನೂನಾತ್ಮಕವಾಗಿ ಹಾಗೂ ಸಂವಿಧಾನಾತ್ಮಕವಾಗಿ ಹೋರಾಟ ನಡೆಸುತ್ತಿದ್ದೇವೆ. ಮೀಸಲಾತಿ ಪಡೆಯಲು ನಮಗೆಲ್ಲಾ ಆಧಾರ ಹಿಂದುಳಿದ ವರ್ಗದ ಆಯೋಗ ಕೊಡುವ ವರದಿ. ಅದರ ಆಧಾರದ ಮೇಲೆ ಸರ್ಕಾರ 2ಡಿ, 2ಸಿ ಪ್ರವರ್ಗದಲ್ಲಿ ಸೇರಿಸುವ ಬಗ್ಗೆ ಹೇಳಿದೆ.

ನಾವು ಸರ್ಕಾರದ ಈ ನಿರ್ಧಾರವನ್ನು ಸ್ವಾಗತಿಸಲೂ ಇಲ್ಲ, ವಿರೋಧಿಸಲೂ ಇಲ್ಲ. ಆದರೆ ಅದರ ಬಗ್ಗೆ ಸ್ಪಷ್ಟತೆ ಕೊಡುವಂತೆ ಹೇಳಿದ್ದೆವು. 2ಎ ಮೀಸಲಾತಿಯ (2ನೇ ಪುಟಕ್ಕೆ)

#### ಪೀಠ ಬಯಸಿ ಬಂದವನಲ್ಲ: ವಚನಾನಂದ ಶ್ರೀ

**ನಾವು ಪಂಚಮಸಾಲಿ ಪೀಠಾಧ್ಯಕ್ಷರಾಗಲು ಬಯಸಿ ಬಂದವರಲ್ಲ. ಶ್ರೀ ಮಹಾಂತ ಸ್ವಾಮೀಜಿ ಅವರು ಲಿಂಗೈಕ್ಯರಾದ ಮೇಲೆ ಉಮಾಪತಿ ಅವರು ಅನೇಕ ಬಾರಿ ನನ್ನನ್ನು ಭೇಟಿಯಾಗಿದ್ದರು. ನಾನು ಶ್ರೀಮಠಕ್ಕೆ ಕೆಲವರ ಹೆಸರುಗಳನ್ನು ಸೂಚಿಸಿದ್ದೆ. ಆದರೆ ಸಮಾಜದ ಮುಖಂಡರ ಒತ್ತಾಯಕ್ಕೆ ಮಣಿದು ಪೀಠಾಧ್ಯಕ್ಷರಾಗಿದ್ದೇವೆ. ಘಟದಿಂದ ಮಠ ಬೆಳೆಯಬೇಕು. ಮಠದಿಂದ ಘಟ ಬೆಳೆಯಬಾರದು ಎನ್ನುವ ಮಾತಿನಂತೆ ನಾವು ಘಟದಿಂದ ಮಠ ಕಟ್ಟುತ್ತಿದ್ದೇವೆ ಎಂದು ವಚನಾನಂದ ಶ್ರೀಗಳು ಹೇಳಿದರು.**

## ಮಹಿಳೆ ಸ್ವತಂತ್ರವಾಗಿ ಗೃಹ ನಿರ್ವಹಿಸಲು ಆರ್ಥಿಕ ನೆರವು

ಬೆಂಗಳೂರು, ಜ. 14 - ಕೋವಿಡ್ ಹಾಗೂ ಪ್ರವಾಹದ ಕಾರಣದಿಂದ ಸಂಕಷ್ಟದಲ್ಲಿರುವ ದುಡಿಯುವ ವರ್ಗಕ್ಕೆ ಸಹಾಯ ಹಾಗೂ ಹೆಣ್ಣು ಮಕ್ಕಳಿಗೆ ಸಹಾಯ ಮಾಡುವ ಯೋಜನೆಗಳನ್ನು ಸರ್ಕಾರ ರೂಪಿಸುತ್ತಿದೆ. ಒಂದು ಕುಟುಂಬದ ಮಹಿಳೆ ಸ್ವತಂತ್ರವಾಗಿ ಕನಿಷ್ಠ ಮನೆ ನಿರ್ವಹಣೆಗೆ ಅಗತ್ಯವಿರುವ ಆರ್ಥಿಕ ನೆರವು ನೀಡಲಾಗುವ ಯೋಜನೆಯನ್ನು ಮುಂದಿನ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಘೋಷಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರತೀ ಕುಟುಂಬಕ್ಕೆ ಮನೆ ನಡೆಸಲು ವಿಶೇಷ ಕಾರ್ಯಕ್ರಮವನ್ನು ಹೆಣ್ಣು ಮಕ್ಕಳಿಗೆ ನೀಡಲಾಗುವುದು. ಸ್ತ್ರೀ ಸಾಮರ್ಥ್ಯದ ಜೊತೆಗೆ ಸ್ತ್ರೀ ಶಕ್ತಿ ಯೋಜನೆಯಡಿ ಮನೆ ನಡೆಸಲು, ಕೋವಿಡ್ ಉಪಚಾರ, ಆರೋಗ್ಯ, (2ನೇ ಪುಟಕ್ಕೆ)

## ಕೊವಿಶೀಲ್ಡ್ ಪೂರೈಕೆ ಆರಂಭ

ನವದೆಹಲಿ, ಜ. 14 – ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್.ಐ.ಐ.) 80 ಲಕ್ಷ ಡೋಸ್ ಕೊವಿಶೀಲ್ಡ್ ಲಸಿಕೆಯನ್ನು ಸರ್ಕಾರಕ್ಕೆ ಉಚಿತವಾಗಿ ಪೂರೈಸುವುದು ಆರಂಭವಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ. ಎಸ್.ಐ.ಐ. ಇದುವರೆಗೂ ಸರ್ಕಾರಕ್ಕೆ 170 ಕೋಟಿ ಡೋಸ್ ಲಸಿಕೆಗಳನ್ನು ಪೂರೈಸಿದೆ. 410 ಕೋಟಿ ರೂ. ಮೌಲ್ಯದ ಎರಡು ಕೋಟಿ ಡೋಸ್ ಲಸಿಕೆಯನ್ನು ಉಚಿತವಾಗಿ ನೀಡುವುದಾಗಿ ಎಸ್.ಐ.ಐ. ತಿಳಿಸಿತ್ತು. ಸರ್ಕಾರ 80 ಲಕ್ಷ ಡೋಸ್ ಲಸಿಕೆಗಳನ್ನು ಮಾತ್ರ ಪಡೆದುಕೊಳ್ಳುತ್ತಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

## ಚುನಾವಣೆಗೂ ಮೊದಲೇ ಆಪರೇಷನ್ ಕಮಲ

**ಬಿಜೆಪಿ ಮುಖಂಡ ಯೋಗೇಶ್ವರ್ ಸಂಭಾಷಣೆಯ ಆಡಿಯೋ ವೈರಲ್**

ಬೆಂಗಳೂರು, ಜ.14- ಸಂಕ್ರಾಂತಿ ಹಬ್ಬದ ನಂತರ ರಾಜ್ಯ ರಾಜಕಾರಣದಲ್ಲಿ ಭಾರೀ ಬದಲಾವಣೆ ಯಾಗಲಿದ್ದು, ಚುನಾವಣೆಗೂ ಮುನ್ನವೇ ಆಪರೇಷನ್ ಕಮಲ ನಡೆಸುತ್ತೇವೆ ಎಂದು ಮಾಜಿ ಸಚಿವ ಹಾಗೂ ವಿಧಾನಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಹೇಳಿರುವ ಆಡಿಯೋ ಈಗ ಸಂಚಲನ ಸೃಷ್ಟಿಸಿದೆ.

ಬಿಜೆಪಿ ಮುಖಂಡ ಯೋಗೇಶ್ವರ್ ಸಂಭಾಷಣೆಯ ಆಡಿಯೋ ವೈರಲ್ ಆಗಿದ್ದು, ಕಾಂಗ್ರೆಸ್ ಮತ್ತು ಜೆಡಿಎಸ್‌ನ ಅನೇಕ ನಾಯಕರು ಬಿಜೆಪಿ ಸೇರಲು ತುದಿಗಾಲಲ್ಲಿ ನಿಂತಿದ್ದಾರೆ. ಸಂಕ್ರಾಂತಿ ಹಬ್ಬದ ನಂತರ ರಾಜ್ಯ ರಾಜಕಾರಣ ದಲ್ಲಿ ಭಾರೀ ಬದಲಾವಣೆಯಾಗಲಿದೆ ಕಾದು ನೋಡಿ ಎಂದು ಹೇಳಿದ್ದಾರೆ. ಆದರೆ ತಮ್ಮ ಭಾಷಣದಲ್ಲಿ ಯಾರು ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ ಎಂಬುವರ ಹೆಸರುಗಳನ್ನು ಯೋಗೇಶ್ವರ್ ಬಹಿರಂಗಪಡಿಸಿಲ್ಲ. ಚನ್ನಪಟ್ಟಣದಲ್ಲಿ ನಮ್ಮದೇನು (2ನೇ ಪುಟಕ್ಕೆ)

## ಕುಂದುವಾಡದ ಹಂಚಿನಮನೆ ಸಿದ್ದಪ್ಪ ನಿಧನ



ದಾವಣಗೆರೆ ನಿಜಲಿಂಗಪ್ಪ ಬಡಾವಣೆ ವಾಸಿ
ಶ್ರೀ ಜಗದೀಶ ಹೆಚ್.ಎಸ್ ಇವರ ತಂದೆಯವರಾದ
**ಶ್ರೀಯುತ ಹಂಚಿನಮನೆ ಸಿದ್ದಪ್ಪ**
ಅವರು ದಿನಾಂಕ 14.1.2023ರ ಶನಿವಾರ ಸಂಜೆ ಸುಮಾರು 4 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ಮೃತರಿಗೆ ಸುಮಾರು 95 ವರ್ಷ ವಯಸ್ಸಾಗಿತ್ತು.
ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ, ಸಹೋದರರು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ
ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.1.2023ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಗ್ಲಾಸ್ ಹೌಸ್ ಹತ್ತಿರ ಇರುವ ಶಾಮನೂರಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ
ವಿರೂಪಾಕ್ಷಪ್ಪ ಮತ್ತು ಸಹೋದರರು, ಕುಂದುವಾಡ
ಮೊಬೈಲ್ : 94492 50065, 91645 20990




**ಹುಟ್ಟು ಹಬ್ಬದ ಶುಭಾಶಯಗಳು**

ದಿನಾಂಕ 16.1.2023ರಂದು ಜನ್ಮ ದಿನವನ್ನು ಆಚರಿಸಿಕೊಳ್ಳುತ್ತಿರುವ
ನಮ್ಮೆಲ್ಲರ ಆತ್ಮೀಯ ಮಿತ್ರ ಸ್ನೇಹ, ಪ್ರೀತಿಯ ಸಂಕೇತ
**ಎಸ್.ವಿ ರಾಮಚಂದ್ರ**
(ಜನಪ್ರಿಯ ಶಾಸಕರು ಜಗಳೂರು ವಿಧಾನಸಭಾ ಕ್ಷೇತ್ರ ಹಾಗೂ ಶ್ರೀ ಮಹರ್ಷಿ ವಾಲ್ಮೀಕಿ ಪರಿಶಿಷ್ ಪಂಗಡದ ಅಭಿವೃದ್ಧಿ ನಿಗಮದ ಅಧ್ಯಕ್ಷರು)
ಇವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು

: ಶುಭ ಕೋರುವವರು :
- ಎಂ.ಶಶಿಶೇಖರ್
- ಎಸ್.ರವೀಂದ್ರನಾಥ್
- ಎಂ.ಹೆಚ್. ವಹೀದ್ ಅಹಮದ್
- ಟಿ.ಎಂ. ಪ್ರೇಮನಾಥ್
- ಎಂ.ಎಲ್ ಸತೀಶ್ ಹಾಗೂ ಸ್ನೇಹಿತರು



**ಚಿರಸ್ಮರಣೆ**



**ಶ್ರೀಮತಿ ಪ್ರೀತಿ ರವಿಕುಮಾರ್**
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಆರೈಕೆ ಆಸ್ಪತ್ರೆ, ಹದಡಿ ರಸ್ತೆ, ದಾವಣಗೆರೆ.
ನಿಧನ : 15.01.2021
ನೀವು ನಮ್ಮನ್ನಗಲಿ ಎರಡು ವರ್ಷಗಳಾದವು. ಸದಾ ನಿಮ್ಮ ಸ್ಮರಣೆಯಲ್ಲಿ...

ಆರೈಕೆ ಆಸ್ಪತ್ರೆ ಮತ್ತು ಸಿಬ್ಬಂದಿ ವರ್ಗ
ಆರೈಕೆ ಆಗ್ರೋ ಫುಡ್ ಇಂಡಸ್ಟ್ರೀಸ್ ಮತ್ತು ಸಿಬ್ಬಂದಿ ವರ್ಗ
ಆರೈಕೆ ಸಮೂಹ ಸಂಸ್ಥೆಗಳು ಮತ್ತು ಬಂಧು-ಮಿತ್ರರು.

# ಪಂಚಮಸಾಲಿಗೆ ಸಿಕ್ಕೇ ಸಿಗುತ್ತೈತಿ ಮೀಸಲಾತಿ

**(1ನೇ ಪುಟದಿಂದ)** ವರದಿ ಸಲ್ಲಿಸಿ, ಸಾಮಾಜಿಕ ಸರ್ವೇ ನಡೆಸಿ 6 ವರ್ಷವಾಗಿದ್ದರೂ ಯಾವುದೇ ಕ್ರಮ ಕೈಗೊಳ್ಳಲಿಲ್ಲ. ಆದರೆ ಜಯಪ್ರಕಾಶ್ ನೇತೃತ್ವದ ವರದಿ ಒಂದು ವಾರದಲ್ಲಿಯೇ ನಿರ್ಣಾಯಕ ಹೆಜ್ಜೆ ಇಟ್ಟು ದಾಖಲೆ ನಿರ್ಮಿಸಿದ ಸರ್ಕಾರ ನಮ್ಮದು. ಇದು ನಮ್ಮ ಬದ್ಧತೆಗೆ ಸಾಕ್ಷಿ. ಮುಂದೆಯೂ ಇನ್ನೊಬ್ಬರಿಗೆ ಅನ್ಯಾಯವಾಗದ ರೀತಿಯಲ್ಲಿ ಶಾಶ್ವತವಾಗಿ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಸರ್ಕಾರ ದಿಟ್ಟ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದರು.

ದೇಶದಲ್ಲಿ 30 ಕೋಟಿ ಜನ ಸಂಖ್ಯೆ ಇದ್ದಾಗ ಅನ್ನ ಇರಲಿಲ್ಲ. ಈಗ 130 ಕೋಟಿ ಜನಸಂಖ್ಯೆಯಾದಾಗ ರೈತ ಅನ್ನ ಕೊಡುತ್ತಿದ್ದಾನೆ. ಆದರೆ ರೈತನ ಸ್ಥಿತಿ ಮಾತ್ರ ಹಿಂದೆ ಹೇಗಿತ್ತೋ ಹಾಗೆಯೇ ಇದೆ. ರೈತರ ಮನೆಗಳು ಹಂಚಿನ ಮನೆಗಳಾಗಿಯೇ ಉಳಿದಿವೆ. ಭೂಮಿ ಅಷ್ಟೇ ಇದೆ. ಆದರೆ ಅವಲಂಬಿತ ರೈತರ ಸಂಖ್ಯೆ ಹೆಚ್ಚಾಗಿದೆ. ಭೂಮಿ ತುಂಡಾಗುತ್ತಾ ಒಬ್ಬರಿಗೆ ಎರಡು ಎಕರೆ ಬಂದಿರುವ ಪರಿಸ್ಥಿತಿ ಇದೆ. ಕೃಷಿ ಲಾಭದಾಯಕ ವಾಗಿಲ್ಲ ಎಂದಾಗ, ಬೇರೆ ವೃತ್ತಿಗೆ ಹೋಗಬೇಕು. ಅದಕ್ಕಾಗಿ ಶಿಕ್ಷಣ ಮುಖ್ಯ. ಈ ಹಿನ್ನೆಲೆಯಲ್ಲಿಯೇ ರೈತರ ಮಕ್ಕಳಿಗೆ ವಿದ್ಯಾನಿಧಿ ಯೋಜನೆ ಘೋಷಣೆ ಮಾಡಿದ್ದೇನೆ. 11 ಲಕ್ಷಕ್ಕಿಂತ ಹೆಚ್ಚು ಮಕ್ಕಳಿಗೆ ರೈತ ವಿದ್ಯಾನಿಧಿ ತಲುಪುತ್ತಿದೆ ಎಂದರು.

ಪ್ರಧಾನಿ ಮಂತ್ರಿಯವರ ಕೃಷಿ ಸಮ್ಮಾನ್ ಯೋಜನೆ 6 ಸಾವಿರ ರೂ.ಗಳಿಗೆ 4 ಸಾವಿರ ರೂ. ಸೇರಿಸಿ ನೀಡಲಾಗುತ್ತಿದೆ. ಈ ವರ್ಷ 30 ಲಕ್ಷಕ್ಕೂ ಹೆಚ್ಚು ರೈತರಿಗೆ ಸಾಲ ನೀಡಿದ್ದೇವೆ. ಕಳೆದ ವರ್ಷ ಕೇವಲ 20 ಲಕ್ಷ ನೀಡಲಾಗಿತ್ತು. ಈ ಬಾರಿ 3 ಲಕ್ಷ ಹೊಸ ರೈತರಿಗೆ ಸಾಲ ನೀಡಿದ್ದೇವೆ. ಕೃಷಿಗೆ ಬೇಕಾದ ಎಲ್ಲಾ ಬೆಂಬಲವನ್ನೂ ಕೊಟ್ಟಿದ್ದೇವೆ. ರಾಜ್ಯದ ಇತಿಹಾಸದಲ್ಲಿಯೇ ರೈತರ ನೆರವಿಗೆ ಬಂದ ಸರ್ಕಾರ ನಮ್ಮದು ಎಂದು ಹೇಳಿದರು.

ಮೀಸಲಾತಿ ಕುರಿತು ಪಂಚಮಸಾಲಿಯ ಇಬ್ಬರೂ ಗುರುಗಳು ನಮಗೆ ಮನವರಿಕೆ ಮಾಡಿಕೊಟ್ಟಿದ್ದಾರೆ. ಆದರೆ ನಾನು ಜವಾಬ್ದಾರಿ ಸ್ಥಾನದಲ್ಲಿದ್ದು, ಇತರರಿಗೆ ಅನ್ಯಾಯ ಮಾಡದಂತೆ ಸಮಾಜಕ್ಕೆ ನ್ಯಾಯ ಕೊಡಬೇಕಿದೆ. ಸಂವಿಧಾನ ಹಾಗೂ ಕಾನೂನು ಚೌಕಟ್ಟಿನಲ್ಲಿ ನಿರ್ಣಯವಾಗಬೇಕು. ಇಲ್ಲದಿದ್ದರೆ ನ್ಯಾಯಾಲಯದಲ್ಲಿ ಉತ್ತರಿಸಬೇಕಾಗುತ್ತದೆ. ಗುಜರಾತ್, ಹರಿಯಾಣ, ರಾಜಸ್ಥಾನ, ಮಹಾರಾಷ್ಟ್ರದಲ್ಲಿ ಅವಸರವಾಗಿ ತೆಗೆದುಕೊಂಡು ನಿರ್ಣಯಗಳು ವಿಫಲವಾಗಿರುವುದು ನಮ್ಮ ಕಣ್ಮುಂದೆ ಇದೆ ಎಂದರು.

**ವಚನಾನಂದ ಶ್ರೀಗಳ ಕಾರ್ಯ ಶ್ಲಾಘಿಸಿದ ಸಿಎಂ:** ಪಂಚಮಸಾಲಿ ಮಠದ ಅಭಿವೃದ್ಧಿ ಅರ್ಧಕ್ಕೆ ನಿಂತಿತ್ತು. ಬಂದವರಿಗೆ ಸ್ಥಳ, ವ್ಯವಸ್ಥೆ ಇರಲಿಲ್ಲ. ಮಠಕ್ಕೆ ಬಂದಾಗ ಅನ್ನ, ಜ್ಞಾನ ದಾಸೋಹ ಮಾಡುವಂತಹ ಪರಂಪರೆ ನಮ್ಮದು. ಈ ಕಾರಣಕ್ಕಾಗಿಯೇ ಶ್ರೀಮಠಕ್ಕೆ ಸರ್ಕಾರದಿಂದ ಸಹಾಯ ಮಾಡಲಾಗಿತ್ತು. ಇದರಲ್ಲಿ ಯಾವ ತಪ್ಪೂ ಇಲ್ಲ. ಅನಗತ್ಯವಾಗಿ ಟೀಕಿಸುವುದು ಸರಿಯಲ್ಲ. ಮಠಗಳ ಅಭಿವೃದ್ಧಿಯಾದರೆ ಸಾವಿರಾರು ವಿದ್ಯಾರ್ಥಿಗಳು, ಬಡವರಿಗೆ ಅನುಕೂಲವಾಗುತ್ತದೆ ಎಂಬ ಉದ್ದೇಶದಿಂದ ನಮ್ಮ ಸರ್ಕಾರ ಎಲ್ಲಾ ಮಠಗಳನ್ನೂ ಸರಿ ಸಮಾನವಾಗಿ ನೋಡುತ್ತಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

## ಬಿಜಾಪುರದಲ್ಲೊಂದು ನಾಟಕ ಕಂಪನಿ ಇದೆ: ನಿರಾಣಿ

**(1ನೇ ಪುಟದಿಂದ)** ನಾಟಕ ಕಂಪನಿಯವರು ತೋರಿಸಿಕೊಟ್ಟಿದ್ದಾರೆ ಎಂದು ಬಸವನಗೌಡ ಪಾಟೀಲ ಯತ್ನಾಳರ ತಂಡವನ್ನು ಪರೋಕ್ಷವಾಗಿ ಟೀಕಿಸಿದರು. ಪಂಚಮಸಾಲಿ ಸಮಾಜಕ್ಕೆ ಸಿಗಬೇಕಾದ ಮೀಸಲಾತಿಗೆ ತೊಡಕಾಗಬಾರದು ಎಂಬ ಉದ್ದೇಶದಿಂದ ನಾವು ಕಳೆದ ಎರಡು ವರ್ಷಗಳಿಂದ ಅವರು ಏನು ಮಾತನಾಡಿದರೂ ಸುಮ್ಮನಿದ್ದೇವೆ. ಸುಮ್ಮನಿರುವುದು ನಮ್ಮ ವೀಕ್ನೆಸ್ ಅಲ್ಲ. ನೀವು ಮಾತನಾಡುವುದಕ್ಕಿಂತ ನೂರು ಪಟ್ಟು ಶಬ್ಧಗಳು ನಮ್ಮಲ್ಲೂ ಇವೆ ಎಂದು ತಿರುಗೇಟು ನೀಡಿದರು.

ಬೇರೆ ಸಮುದಾಯದವರು ಶಾಂತ ರೀತಿಯಲ್ಲಿ ಹೋರಾಟ ನಡೆಸಿ ಮೀಸಲಾತಿ ಪಡೆದಿದ್ದಾರೆ. ಆದರೆ ಕೂಡಲ ಸಂಗಮ ದವರು ಹಾಗೂ ಬಿಜಾಪುರ ಕಂಪನಿಯವರು ಸೇರಿ ದೊಂಬರಾಟ ನಡೆಸುತ್ತಿದ್ದಾರೆ. ಸಿಗುವ ಮೀಸಲಾತಿಗೆ ಕಲ್ಲು ಹಾಕಿದರೆ ಆ ಪಾಪ ನಿಮ್ಮನ್ನು ಬಿಡುವುದಿಲ್ಲ ಎಂದರು.

ಲೋಕೋಪಯೋಗಿ ಇಲಾಖೆ ಸಚಿವ ಸಿ.ಸಿ. ಪಾಟೀಲ್ ಮಾತನಾಡುತ್ತಾ, ಸರ್ಕಾರ ಮೀಸಲಾತಿಗೆ ಪೂರಕವಾದ ಹೆಜ್ಜೆ ಇಡುತ್ತಿದೆ. ಒಡಕಿ ಮಾತು, ಮುಖ್ಯಮಂತ್ರಿಗಳ ಬಗೆಗಿನ ಟೀಕೆ, ಟಿಪ್ಪಣಿಗಳಿಗೆ ಯಾರೂ ತಲೆ ಕೆಡಿಸಿಕೊಳ್ಳಬಾರದು ಎಂದು ಹೇಳಿದರು.

ಮತ್ತೊಬ್ಬರ ಬಗ್ಗೆ ಹಗುರುವಾಗಿ ಮಾತನಾಡುವುದು ಸರಿಯಲ್ಲ. ವಾಕ್ ಸ್ವಾತಂತ್ರ್ಯ ಇದೆ ಎಂದು ಏನು ಬೇಕಾದರೂ ಮಾತನಾಡುವುದು ಸರಿಯಲ್ಲ. ಎಲ್ಲರೂ ತಾಳ್ಮೆಯಿಂದ ಇರೋಣ. ಆದಷ್ಟು ಶೀಘ್ರ ಸಿಹಿ ಸುದ್ದಿ ಸಮಾಜಕ್ಕೆ ತಲುಪಲಿ ಎಂದು ಆಶಿಸಿದರು.

ಇದೇ ಸಂದರ್ಭದಲ್ಲಿ ಸಂಕ್ರಾಂತಿ ಸಂಭ್ರಮ ಉದ್ಘಾಟಿಸಲಾಯಿತು. ವಚನಾನಂದ ಶ್ರೀಗಳು ಮುಖ್ಯಮಂತ್ರಿ ಸೇರಿದಂತೆ ಸಚಿವರು, ಶಾಸಕರಿಗೆ ಎಳ್ಳು ಬೆಲ್ಲ ತಿನ್ನಿಸಿದರು.

ಶ್ರೀಪೀಠದ ಧರ್ಮದರ್ಶಿ ಚಂದ್ರಶೇಖರ್ ಪೂಜಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಅಧ್ಯಕ್ಷತೆ ವಹಿಸಿದ್ದರು. ಸಿದ್ಧರಹಳ್ಳಿ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮೀಜಿ, ಶ್ರೀ ಮಹಾಂತ ಶಿವಾಚಾರ್ಯ ಸ್ವಾಮೀಜಿ, ಸಂಸದ ಜಿ.ಎಂ. ಸಿದ್ದೇಶ್ವರ, ಕೃಷಿ ಸಚಿವ ಬಿ.ಸಿ. ಪಾಟೀಲ್, ಸಕ್ಕರೆ ಮತ್ತು ಜವಳಿ ಖಾತೆ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ, ಶಾಸಕರುಗಳಾದ ಎಂ.ಪಿ. ರೇಣುಕಾಚಾರ್ಯ, ಎಸ್.ವಿ. ರಾಮಚಂದ್ರ, ಜಿ.ಕರುಣಾಕರ ರೆಡ್ಡಿ, ಪ್ರೊ.ಎನ್. ಲಿಂಗಣ್ಣ, ಮಹಾಂತೇಶ್ ದೊಡ್ಡಗೌಡರ, ದೊಡ್ಡನಗೌಡ ಪಾಟೀಲ, ಮುಖಂಡರುಗಳಾದ ಬಾವಿ ಬೆಟ್ಟಪ್ಪ, ಬಸವರಾಜ ದಿಂಡೂರು ಇತರರು ವೇದಿಕೆ ಮೇಲೆ ಉಪಸ್ಥಿತರಿದ್ದರು. ಪಂಚಮಸಾಲಿ ಸಂಘದ ಮಹಿಳಾ ಘಟಕದ ರಾಜ್ಯ ಉಪಾಧ್ಯಕ್ಷೆ ಶ್ರೀಮತಿ ವಸಂತ ಬಿ.ಹುಲ್ಲತ್ತಿ ಸ್ವಾಗತಿಸಿದರು. ಶಿಕ್ಷಕ ಹಾರಕಬಾವಿ ಬಸವರಾಜ್ ನಿರೂಪಿಸಿದರು. ಮಹೇಶ್ ಹಾವೇರಿ ವಂದಿಸಿದರು.

# ಪಥ ಬದಲಿಸಿದ ಕಾಂಗ್ರೆಸ್ ಆಕಾಂಕ್ಷಿಗಳು



**ರಾಣೇಬೆನ್ನೂರು**

ರಾಣೇಬೆನ್ನೂರು, ಜ. 14- 2023 ರ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷದ ಬಲವಾದ ಟಿಕೆಟ್ ಆಕಾಂಕ್ಷಿ ಎಂದು ಜಿಲ್ಲೆ, ರಾಜ್ಯದ ಮುಖಂಡರ ಹಾಗೂ ಕ್ಷೇತ್ರದ ಜನರ ಬಳಿ ಅಲೆದಾಡಿದ ಆರು ಜನ ಆಕಾಂಕ್ಷಿಗಳು ಸಂಕ್ರಮಣದ ಇಂದು ಕಾಂಗ್ರೆಸ್ ಕಚೇರಿಯಲ್ಲಿ ಕರೆದಿದ್ದ ಮಾಧ್ಯಮ ಗೋಷ್ಠಿಯಲ್ಲಿ ತಮ್ಮ ಪಥ ಬದಲಿಸಿ ಒಗ್ಗಟ್ಟಿನ ಮಂತ್ರ ಜಪಿಸುವ ಮಾತುಗಳನ್ನಾಡಿದರು.

ಹತ್ತಾರು ವರ್ಷಗಳಿಂದ ಪಿಕೆಕೆ ಇನಿಷಿಯೇಟೀವ್ ಮೂಲಕ ಉದ್ಯೋಗ ಮೇಳ, ಕಲೆ, ಕ್ರೀಡೆಗಳಿಗೆ ಪ್ರೋತ್ಸಾಹಿಸಿದ ಕೋಳಿವಾಡರ ಜೊತೆಯಲ್ಲಿಯೇ ಸಂಚರಿಸುತ್ತಿದ್ದ ಕೃಷ್ಣಪ್ಪ ಕಂಬಳಿ, ಮಕ್ಕಳ ವೈದ್ಯರಾಗಿ ಜನರಿಗೆ ಚಿರಪರಿಚಿತರಾಗಿದ್ದು, ಸಿದ್ದರಾಮಯ್ಯರ ಮೊಟ್ಟೆ ಘಟನೆಯ ನಂತರ ಫೀಲ್ಡ್‌ಗೆ ಬಂದ ಡಾ. ಪ್ರವೀಣ ಖನ್ನೂರ, ನಾಲ್ಕಾರು ತಿಂಗಳಿನಿಂದ ಕ್ರೀಡೆ, ಹುಟ್ಟಿದ ಹಬ್ಬ, ಪ್ರತಿಭಾ ಪುರಸ್ಕಾರದ ಮೂಲಕ ಜನರ ಹತ್ತಿರ ತೆರಳುತ್ತಿದ್ದ ಜಟ್ಟೆಪ್ಪ ಕರೇಗೌಡ್ರ, ನಗರಸಭೆ ಸದಸ್ಯ ನಿಂಗರಾಜ ಕೋಡಿಹಳ್ಳಿ ಮತ್ತು ನಾಗರಾಜ ಕುಡಪಲಿ ಟಿಕೆಟ್ ಆಕಾಂಕ್ಷಿಗಳು.

ಈ ತಿಂಗಳು ನಡೆಯಲಿರುವ ಪ್ರಿಯಾಂಕ ಗಾಂಧಿ ಅವರ ಮಹಿಳೆಯರ ಸಬಲೀಕರಣ, ನಾಯಕತ್ವ ಗುಣವೃದ್ಧಿಯ ನಾ ನಾಯಕಿ ಹಾಗೂ ಪ್ರಜಾಧ್ವನಿ ಕಾರ್ಯಕ್ರಮಗಳನ್ನು ಅತ್ಯಂತ ಯಶಸ್ವಿಯಾಗಿ ನಡೆಸುವ ಪಕ್ಷದ ಆದೇಶ ಮತ್ತು ಕಾಂಗ್ರೆಸ್ ಸರ್ಕಾರ ರಚಿಸಿ ಜನಕಲ್ಯಾಣ ಸದುದ್ದೇಶವನ್ನು ಹೊಂದಿ ಒಂದಾಗಿದ್ದಾರೆ. ಪಕ್ಷ ಸೂಚಿಸಿದ ಅಭ್ಯರ್ಥಿಯ ಜಯಕ್ಕೆ ಶ್ರಮಿಸಲಿದ್ದಾರೆ ಎಂದು ಗೋಷ್ಠಿಯಲ್ಲಿ ತಾಲ್ಲೂಕು ಅಧ್ಯಕ್ಷ ಮಂಜನಗೌಡ ಪಾಟೀಲ, ನಗರ ಅಧ್ಯಕ್ಷ ಶೇರು ಕಾಬೂಲಿ ಹೇಳಿದರು.

ಅಧ್ಯಕ್ಷರ ಮಾತುಗಳನ್ನೇ ಪುನರುಚ್ಚರಿಸಿದ ಆಕಾಂಕ್ಷಿಗಳು. ಬಿಜೆಪಿ ಸರ್ಕಾರ ಬೇಸರ ತರಿಸಿದ್ದು, ಜನರು ಕಾಂಗ್ರೆಸ್ ಸರ್ಕಾರವನ್ನು ಬಯಸುತ್ತಿದ್ದಾರೆ. ಪಕ್ಷದ ಆದೇಶಕ್ಕೆ ಬದ್ಧರಾಗಿ ಚುನಾವಣೆ ಮಾಡುತ್ತೇವೆ. ಜಿಲ್ಲೆಯಲ್ಲಿ ಎಲ್ಲಾ ಆರು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳೇ ಗೆಲ್ಲಲಿದ್ದಾರೆ. ಈ ದಿಶೆಯಲ್ಲಿ ನಾವೆಲ್ಲರೂ ಶ್ರಮಿಸುತ್ತೇವೆ ಎಂದರು.

## ವಾಲ್ಮೀಕಿ-ಕಾಗಿನೆಲೆ ಶ್ರೀ ಹಾದಿಯಲ್ಲಿ ಮೀಸಲಾತಿ ಹೋರಾಟ

**(1ನೇ ಪುಟದಿಂದ)** ಅಲಗೂರು ಪಂಚಮಸಾಲಿ ಮಠದ ಶ್ರೀ ಮಹಾದೇವ ಶಿವಾಚಾರ್ಯ ಮಹಾಸ್ವಾಮಿಗಳು, ಶ್ರೀ ಸಂಗನಬಸವ ಮಹಾಸ್ವಾಮಿಗಳು, ಶ್ರೀ ಮಹಾಂತ ಮಹಾಸ್ವಾಮಿಗಳು ಹಗರಿಬೊಮ್ಮನಹಳ್ಳಿ, ಶಾಸಕರಾದ ಅರುಣ್ ಕುಮಾರ್ ಪೂಜಾರ, ವಿರುಪಾಕ್ಷಪ್ಪ ಬಳ್ಳಾರಿ, ಎಂ.ಎಲ್.ಸಿ. ಮೋಹನ್ ಲಿಂಬೆಕಾಯಿ, ಎಂ.ಪಿ. ನಾಡಗೌಡ, ಹರ ಜಾತ್ರಾ ಮಹೋತ್ಸವ ಸಮಿತಿಯ ಅಧ್ಯಕ್ಷ ಪ್ರಕಾಶ್ ಪಾಟೀಲ್, ವಕೀಲ ಜಿ.ಎಸ್. ಪಾಟೀಲ್, ಪಂಚಮಸಾಲಿ ಸಮಾಜದ ಧರ್ಮದರ್ಶಿ ಬಿ.ಸಿ. ಉಮಾಪತಿ. ಚಂದ್ರಶೇಖರ್ ಪೂಜಾರ್, ಬಾವಿ ಬೆಟ್ಟಪ್ಪ, ಬಸವರಾಜ್ ದಿಂಡೂರು ಮಹಿಳಾ ಘಟಕದ ರಾಜ್ಯ ಅಧ್ಯಕ್ಷೆ ಮಂಗಳಾ ಬಸವರಾಜ್, ಹೆಚ್.ಎಸ್. ನಾಗರಾಜ್ ಮತ್ತಿತರರು ಉಪಸ್ಥಿತರಿದ್ದರು.

# ಜಗತ್ತು ನಡೆಯುತ್ತಿರುವುದೇ ನಂಬಿಕೆ-ವಿಶ್ವಾಸದ ಮೇಲೆ

**(1ನೇ ಪುಟದಿಂದ)** ಎಲ್ಲಾ ಸವಲತ್ತುಗಳೂ 2ಡಿ ಯಲ್ಲಿ ಇರುತ್ತದಾ? ಎಷ್ಟು ಪರ್ಸೆಂಟ್ ಮೀಸಲಾತಿ ಸಿಗುತ್ತದೆ ಎಂದು ಸ್ಪಷ್ಟೀಕರಣ ಕೊಟ್ಟರೆ, ಕಾನೂನು ಸಲಹೆ ಪಡೆದು, ಸಮಾಜದ ಮುಖಂಡರ ಜೊತೆ ಚರ್ಚಿಸಿ, ನಿರ್ಧಾರ ತೆಗೆದುಕೊಳ್ಳುತ್ತೇವೆ.

ನಿಧಾನವಾಗಿ, ಯಾರಿಗೂ ನೋವು ಮಾಡ ದಂತೆ, ಮೀಸಲಾತಿ ಪಡೆಯುವ ಪೀಠ ನಮ್ಮದು. ನಮ್ಮ ದಾರಿಗೆ ಮುಳ್ಳು ಚೆಲ್ಲಿದರೆ, ಅವರ ದಾರಿಗೆ ಹೂ ಚೆಲ್ಲೋಣ, ದ್ವೇಷದಿಂದ ಒಬ್ಬರನ್ನು ಗೆಲ್ಲುವು ದಕ್ಕಿಂತ ಪ್ರೀತಿಯಿಂದ ಸೋತು ಜಗವನ್ನೇ ಗೆಲ್ಲಬಹುದೆಂಬ ವಿಶ್ವಾಸ ನಮ್ಮ ಪೀಠದ್ದು. ಸರ್ಕಾರ ಒಳ್ಳೆಯ ಹೆಜ್ಜೆ ಇಟ್ಟಿದೆ ಎಂದರು.

ಪಂಚಮಸಾಲಿ ಸಂಸ್ಕಾರವಂತ ಸಮಾಜ, ಯಾರನ್ನೋ ಗುರಿಯಾಗಿಟ್ಟುಕೊಂಡು ವೈಯಕ್ತಿಕವಾಗಿ ಮಾತನಾಡುವುದು ಸಮಾಜಕ್ಕೆ ಶೋಭೆ ತರುವುದಿಲ್ಲ ಎಂದ ಶ್ರೀಗಳು, ಯಾವೊಂದು ಸಮುದಾಯಕ್ಕೂ ಅನ್ಯಾಯವಾಗದಂತೆ ಮುಖ್ಯಮಂತ್ರಿಗಳು ನಮ್ಮ ಸಮಾಜಕ್ಕೆ ನ್ಯಾಯ ಕೊಡಬೇಕು ಎಂದರು.

**ಸಿದ್ದೇಶ್ವರ ಶ್ರೀಗಳ ಸಲಹೆ:** ಹರಜಾತ್ರೆ ನಡೆಸು ವಂತೆ ವಿಜಯಪುರದ ಸಿದ್ದೇಶ್ವರ ಶ್ರೀಗಳೇ ಸಲಹೆ ನೀಡಿದ್ದರು ಎಂದು ವಚನಾನಂದ ಶ್ರೀಗಳು ಹೇಳಿ ದರು. ಹರ ಜಾತ್ರೆಗೆ ಚಾಲನೆ ನೀಡಿದ್ದೂ ಸಹ ಸಿದ್ದೇಶ್ವರ ಶ್ರೀಗಳು. ಅವರ ಕಲ್ಪನೆ ಇಂದು ಹೆಮ್ಮರವಾಗಿ ಬೆಳೆಯುತ್ತಿದೆ ಎಂದು ಹೇಳಿದರು.

**ಹಣಕಾಸಿನ ವ್ಯವಹಾರದಿಂದ ಮುಕ್ತ:** ಬಸವ ರಾಜ ಬೊಮ್ಮಾಯಿ ಅವರು ಮೊದಲಿನಿಂದಲೂ ಪೀಠದ ಬಗ್ಗೆ ಗೌರವ ಇದ್ದವರು. ಶ್ರೀಮಠದಲ್ಲಿನ ಲಿಂ.ಮಹಾಂತ ಸ್ವಾಮೀಜಿ ಅವರ ಧ್ಯಾನ ಮಂದಿರವನ್ನು ಕಟ್ಟಿಸಿದವರು ಬೊಮ್ಮಾಯಿ ಅವರು.

2020ರಲ್ಲಿ ಬಸವರಾಜ ಬೊಮ್ಮಾಯಿ ಅವರು ಮಠಕ್ಕೆ ಬಂದಿದ್ದರು. ಅಂದು ಗೃಹ ಸಚಿವರಾಗಿದ್ದ ಅವರು, ಈ ಮಠ ದೊಡ್ಡದಾಗಿ ಬೆಳೆಯಬೇಕು. ಸುತ್ತೂರು, ಸಿದ್ಧಗಂಗಾ, ಸಿರಿಗೆರೆ ಮಠದಂತೆ ಬೆಳೆದು ಸಾವಿರಾರು ಮಕ್ಕಳಿಗೆ ಅಧ್ಯಯನಕ್ಕೆ ಅನುಕೂಲವಾಗ ಬೇಕು. ಅದಕ್ಕೆ ಬೇಕಾದ ಸಹಾಯ ಮಾಡುವುದಾಗಿ ಹೇಳಿದ್ದರು. ಯಡಿಯೂರಪ್ಪನವರಿಗೆ ಹೇಳಿ 10 ಕೋಟಿ ರೂ. ಕೊಡಿಸಿದ್ದು ಬೊಮ್ಮಾಯಿ ಅವರು. ಹಾಗೂ ಕಾಗಿನೆಲೆ ಮಠಕ್ಕೆ 10 ಕೋಟಿ ರೂ. ಕೊಡಿಸಿದ್ದು ಬೊಮ್ಮಾಯಿ. ಪಂಚಮ ಸಾಲಿ ಜಗದ್ಗುರು ಪೀಠದ ಟ್ರಸ್ಟ್‌ಗೆ ಹಣ ಕೊಡಲಾಗಿತ್ತು. ನಾವು ಪೀಠಕ್ಕೆ ಬಂದು ಐದು ವರ್ಷಗಳಾದರೂ ಇಂದಿಗೂ ವ್ಯಕ್ತಿಗತವಾಗಿ ಒಂದು ರೂಪಾಯಿ ಸಹ ಖರ್ಚಿಗೆಂದು ಪಡೆದಿಲ್ಲ. ಯಾವುದೇ ಚೆಕ್‌ಗೆ ಸಹಿ ಮಾಡುವುದಿಲ್ಲ. ಆರ್ಥಿಕ ಹಣಕಾಸಿನ ವ್ಯವಹಾರ ದಿಂದ ಮುಕ್ತವಾಗಿದ್ದೇವೆ ಎಂದು ಹೇಳಿದರು.


## ಹನ್ನೊಂದನೇ ವರ್ಷದ ಪುಣ್ಯಸ್ಮರಣೆ



ನಿಧನ : 15.01.2012

**ಡಾ|| ಹೆಚ್.ವಿ. ನಾಯ್ಕ,** M.B.B.S.,

ಸಂಸ್ಥಾಪಕರು, ನವೋದಯ ಆಸ್ಪತ್ರೆ

ಸಾಯಿ ನಿವಾಸ, ಎಂ.ಸಿ.ಸಿ. "ಎ" ಬ್ಲಾಕ್, ದಾವಣಗೆರೆ.

ನೀವು ನಮ್ಮನ್ನಗಲಿ ಇಂದಿಗೆ ಹನ್ನೊಂದು ವರ್ಷಗಳಾದವು
ನಿಮ್ಮ ಆದರ್ಶಗಳೇ ನಮಗೆ ದಾರಿದೀಪ. ನೀವು ಹಾಕಿಕೊಟ್ಟ ಸನ್ಮಾರ್ಗದಲ್ಲೇ
ನಡೆಯುತ್ತಾ ಸದಾ ನಿಮ್ಮ ಸ್ಮರಣೆಯಲ್ಲಿರುವ....

ಪತ್ನಿ : ಶ್ರೀಮತಿ ಪದ್ಮಾವತಿ ನಾಯ್ಕ
ತಮ್ಮ: ಸೇವಾನಾಯ್ಕ, ಮಕ್ಕಳು, ಅಳಿಯಂದಿರು, ಸೊಸೆಯಂದಿರು
ಮೊಮ್ಮಕ್ಕಳು ಮತ್ತು ಸಿಬ್ಬಂದಿ ವರ್ಗ.

* ನವೋದಯ ಆಸ್ಪತ್ರೆ * ನವೋದಯ ಮೆಡಿಕಲ್ & ಜನರಲ್ ಸ್ಟೋರ್
* ನಾಯ್ಕ ನರ್ಸಿಂಗ್ ಹೋಂ
* ಶ್ರೀ ನವೋದಯ ಆಗ್ರೋ ಫುಡ್ ಪ್ರೊಸೆಸಿಂಗ್ ಇಂಡಸ್ಟ್ರಿಯಲ್ ಕಾರ್ಪೋರೇಷನ್.


# 2.68 ಕೋಟಿ ಅಂಗವಿಕಲರಿಗೆ ಸಲಕರಣೆ ವಿತರಣೆ

## ಹೂವಿನಹಡಗಲಿ ಕಾರ್ಯಕ್ರಮದಲ್ಲಿ ರಾಜ್ಯ ಸಚಿವ ಎ.ನಾರಾಯಣಸ್ವಾಮಿ



ಹೂವಿನಹಡಗಲಿ, ಜ.14- ದೇಶದಲ್ಲಿ ಒಟ್ಟು 2. 68 ಕೋಟಿ ದಿವ್ಯಾಂಗರು ಇದ್ದಾರೆ. ಅವರಿಗೆಲ್ಲ ಸಲಕರಣೆಗಳನ್ನು ಕೇಂದ್ರ ಸರ್ಕಾರ ವಿತರಿಸಲು ಮುಂದಾಗಿ, ಇವತ್ತು ದೇಶದಾದ್ಯಂತ 68 ಕಡೆ ಸಾಮಾಜಿಕ ಅಧಿಕಾರಿತ ಶಿಬಿರಗಳನ್ನು ಆಯೋಜಿಸಲು ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಪರಿಕಲ್ಪನೆಯಿಂದ ಸಾಧ್ಯವಾಗಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಸಚಿವಾಲಯದ ರಾಜ್ಯ ಸಚಿವ ಎ. ನಾರಾಯಣಸ್ವಾಮಿ ಹೇಳಿದರು.

ಇಂದಿಲ್ಲಿ ಏರ್ಪಾಡಾಗಿದ್ದ ಕಾರ್ಯಕ್ರಮದಲ್ಲಿ ಅಂಗವಿಕಲರಿಗೆ ವಿವಿಧ ಸಲಕರಣೆಗಳನ್ನು ವಿತರಿಸಿ ಅವರು ಮಾತನಾಡುತ್ತಿದ್ದರು.

1972 ರಲ್ಲಿ ಅಲ್ಮಕೊವನ್ನು ಪ್ರಾರಂಭಿಸಿದ್ದರೂ, ಮೋದಿಯವರು ಪ್ರಧಾನಿಯಾದ ಮೇಲೆ ಅದು ಚುರುಕುಗೊಂಡಿತು ಎಂದು ಹೇಳಿದ ಸಚಿವರು ಇವತ್ತು ಏಕಕಾಲಕ್ಕೆ ದೇಶದಾದ್ಯಂತ 50,000 ದಿವ್ಯಾಂಗರಿಗೆ ಸಲಕರಣೆಗಳನ್ನು ವಿತರಿಸಲಾಗುತ್ತದೆ. ಇಲಾಖೆಯ ಗುರುತಿನ ಚೀಟಿಗಳನ್ನು ವಿತರಿಸಲಾಗಿದೆ. ಆದರೆ ಮೌಢ್ಯದ ಪರಿಣಾಮದ ಕಾರಣದಿಂದ ಅಂಗವಿಕಲತೆಯನ್ನು ಘೋಷಿಸಲು ಹೊರಟಿರುವುದು ಖಂಡನೆಗೆ ಕಾರಣವಾಗಿದೆ.

ಇಲಾಖೆಯಿಂದ ತಲಾ ಒಬ್ಬ ಅಂಗವಿಕಲನಿಗೆ ರೂ. 7 ಲಕ್ಷದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಲಾಗುತ್ತದೆ. ಈಗಾಗಲೇ 4,500 ಜನ ಅಂಗವಿಕಲರಿಗೆ ನೆರವನ್ನು ಕಲ್ಪಿಸಲಾಗಿದೆ. ಕೆಲವು ವೈದ್ಯರ ನಿರ್ಲಕ್ಷ್ಯದಿಂದ ಗರ್ಭಿಣಿಯರು ಹೆರಿಗೆಗೆ ಹೋದ ಸಂದರ್ಭದಲ್ಲಿ ಜಾಗೃತಿ ವಹಿಸದ ಕಾರಣದಿಂದ ಅಂಗವಿಕಲ ಮಕ್ಕಳು ಜನಿಸುವಂತೆ ಆಗಿದೆ ಎಂದು ಬೇಸರ ವ್ಯಕ್ತಪಡಿಸಿದ್ದರು.

ಅಂಗವಿಕಲತೆ ಶಾಪವಲ್ಲ. ಅನುಕಂಪದ ಬದಲು ಅವಕಾಶವನ್ನು ಒದಗಿಸಿಕೊಡಬೇಕು. ವಿಜಯನಗರ ಜಿಲ್ಲಾಡಳಿತ ಡಿ. ಎಂ .ಎಫ್. ನಿಧಿಯಿಂದ ಅಂಗವಿಕಲರಿಗೆ ಅಂತರರಾಷ್ಟ್ರೀಯ ಗುಣಮಟ್ಟದ ಸಲಕರಣೆಗಳನ್ನ ಕೊಡಲು ಮುಂದಾಗಬೇಕೆಂದು ಅವರು ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಸದರಾದ ವೈ. ದೇವೇಂದ್ರಪ್ಪ ಮಾತನಾಡಿದರು. ವೇದಿಕೆ ಮೇಲೆ ಸಫಾಯಿ ಕರ್ಮಚಾರಿ ನಿಗಮದ ಮಾಜಿ ಅಧ್ಯಕ್ಷ ಹೆಚ್. ಹನುಮಂತಪ್ಪ, ಬಿಜೆಪಿ ಮುಖಂಡರಾದ ಪೂಜಪ್ಪ. ಈ ಟಿ ಲಿಂಗರಾಜ್, ಅಧ್ಯಕ್ಷರಾದ ಎಸ್ ಸಂಜೀವ ರೆಡ್ಡಿ, ಎಂ. ಪಿ .ಸುಮಾ ಭಾಗವಹಿಸಿದ್ದರು.

# ಮಹಿಳೆ ಸ್ವತಂತ್ರವಾಗಿ ಗೃಹ ನಿರ್ವಹಿಸಲು ಆರ್ಥಿಕ ನೆರವು


**(1ನೇ ಪುಟದಿಂದ)** ಮುಂತಾದವುಕ್ಕೆ ಸಹಾಯವಾಗುವ ವಿಶೇಷ ಯೋಜನೆ ಇದಾಗಿದೆ. ಸ್ತ್ರೀ ಸಾಮರ್ಥ್ಯ ಯೋಜನೆಯನ್ನು ಮೊದಲು ಚಾಲನೆಗೊಳಿಸಿ ಅದನ್ನು ಅನುಷ್ಠಾನಗೊಳಿಸಿ, ಪ್ರತಿ ಮನೆಗೆ ಸ್ತ್ರೀಯರ ಹೆಸರಿನಲ್ಲಿ ಸಹಾಯ ನೀಡಲಾಗುವುದು ಎಂದರು.

ಜನಕಲ್ಯಾಣ ಕಾರ್ಯಕ್ರಮಕ್ಕೆ ಹೆಚ್ಚಿನ ಒತ್ತು ನೀಡುವ ಯೋಜನೆಗಳ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ. ದುಡಿಯುವ ವರ್ಗಕ್ಕೆ ಹೆಚ್ಚಿನ ಅನುಕೂಲ ಮಾಡುವ ಚಿಂತನೆ ಮಾಡಲಾಗುತ್ತಿದೆ. ರೈತರು, ಕಾರ್ಮಿಕರು, ಮಹಿಳೆಯರು ಪರಿಶಿಷ್ಟ ಜಾತಿ, ಪಂಗಡ ಮತ್ತು ಒಬಿಸಿ ಜನಾಂಗದವರ ಶ್ರೇಯೋಭಿವೃದ್ಧಿಗೆ ಕಾರ್ಯಕ್ರಮ ಗಳನ್ನು ರೂಪಿಸಲಾಗುತ್ತಿದೆ ಎಂದು ಹೇಳಿದರು.

ಯುವಕರಿಗೆ ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ, 5 ಲಕ್ಷ ಯುವಕರಿಗೆ ಸ್ವಯಂ ಉದ್ಯೋಗ ಕ್ಕೆ ಒಂದು ಲಕ್ಷ ನೀಡಿ, ಬ್ಯಾಂಕ್ ಜೋಡಿಸಿ ಅವರನ್ನು ಸ್ವಾವಲಂಬಿ ಮಾಡಲು ಎಂಡ್ ಟು ಎಂಡ್ ಅಪ್ರೋಚ್‌ವುಳ್ಳ ಕಾರ್ಯಕ್ರಮ ಇದಾಗಿದೆ. ಸ್ತ್ರೀ ಸಾಮರ್ಥ್ಯ ಯೋಜನೆಯನ್ನು ಇದೇ ತಿಂಗಳು ಪ್ರಾರಂಭ ಮಾಡಲಾಗುತ್ತಿದೆ. ಪ್ರತಿ ಗ್ರಾಮದಲ್ಲಿ 2 ಸ್ತ್ರೀ ಶಕ್ತಿ ಸಂಘಕ್ಕೆ 5 ಲಕ್ಷ ರೂ.ವರೆಗೆ ಸಹಾಯಧನ ನೀಡಲಾಗುವುದು. ಜನವರಿ ಅಂತ್ಯ ಹಾಗೂ ಫೆಬ್ರವರಿ ಪ್ರಾರಂಭದಲ್ಲಿ ಚಾಲನೆ ನೀಡಲಾಗುವುದು. ಯುವಕರಿಗೆ, ಮಹಿಳೆಯರಿಗೆ ಶಕ್ತಿ ತುಂಬುವ ಕಾರ್ಯಕ್ರಮ ರೂಪಿಸಲಾಗಿದೆ ಎಂದು ಹೇಳಿದರು.

ಸಚಿವ ಸಂಪುಟದಲ್ಲಿ ವಿಧಾನಸಭೆಯ ಜಂಟಿ ಅಧಿವೇಶನ ಕ್ಕೆ ದಿನಾಂಕ ಗೊತ್ತು ಮಾಡಲಾಗುವುದು. ಬಜೆಟ್ ಅಧಿವೇಶನವನ್ನು ಫೆ. 17 ನೇ ತಾರೀಖು ಮಾಡುವ ಸಾಧ್ಯತೆ ಇದೆ. ಅದಕ್ಕೆ ಪೂರ್ವಭಾವಿಯಾಗಿ ಎಲ್ಲಾ ಸಿದ್ಧತೆಗಳನ್ನು ಪ್ರಾರಂಭ ಮಾಡಿದ್ದೇವೆ. ಈಗಾಗಲೇ ಡಿಸೆಂಬರ್ ವರೆಗೆ ನಮ್ಮ ರಾಜ್ಯದ ಆದಾಯವು ಮೂರು ಪಟ್ಟು ಹೆಚ್ಚಾಗಿದೆ. ಇದನ್ನು ಇನ್ನಷ್ಟು ಹೆಚ್ಚು ಮಾಡಲು ಗುರಿಗಳನ್ನು ಹೆಚ್ಚು ಮಾಡಲು ಸೂಚನೆ ನೀಡಲಾಗಿದೆ. ಜನಪರ ಆಯವ್ಯಯ ನೀಡಲು ತೀರ್ಮಾನ ಮಾಡಲಾಗಿದೆ ಎಂದು ಹೇಳಿದರು.


## ಹತ್ತನೇ ವರ್ಷದ ಪುಣ್ಯಸ್ಮರಣೆ



**ಹಾಲಪ್ಪ ಶೆಟ್ಟೆಪ್ಪನವರ, B.Sc. (Agri)**
ನಿವೃತ್ತ ಸಹಾಯಕ ಕೃಷಿ ನಿರ್ದೇಶಕರು

ನೀವು ನಮ್ಮನ್ನಗಲಿ 15.1.2023 ಇಂದಿಗೆ ಹತ್ತು ವರ್ಷಗಳಾದವು. ನೀವು ನಮ್ಮಿಂದ ದೂರವಾದರೂ ನೀವು ಹಾಕಿಕೊಟ್ಟ ಮಾರ್ಗದರ್ಶನ ನಮಗೆ ದಾರಿದೀಪವಾಗಿದೆ. ಸದಾ ನಿಮ್ಮ ಸ್ಮರಣೆಯಲ್ಲಿರುವ

**ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು.**


## ಮೊದಲೇ ಆಪರೇಷನ್ ಕಮಲ

**(1ನೇ ಪುಟದಿಂದ)** ನಡೆಯುವುದಿಲ್ಲ. ಅಲ್ಲಿ ಜೆಡಿಎಸ್ ಮತ್ತು ಮಾಜಿ ಮುಖ್ಯ ಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರದೇ ಎನ್ನುವ ಮೂಲಕ ಚುನಾವಣೆಗೂ ಮುನ್ನವೇ ಯೋಗೇಶ್ವರ್ ಸೋಲೊಪ್ಪಿಕೊಂಡಿದ್ದಾರೆ ಎನ್ನಲಾಗಿದೆ. ಸುಮಾರು 10 ನಿಮಿಷಗಳ ಈ ಆಡಿಯೋದಲ್ಲಿ ಹಲವಾರು ವಿಷಯಗಳನ್ನು ಪ್ರಸ್ತಾಪಿಸಲಾಗಿದೆ. ಕಾಂಗ್ರೆಸ್ ಮತ್ತು ಜೆಡಿಎಸ್ ನಾಯಕರ ಪಕ್ಷ ಸೇರ್ಪಡೆಗೆ ಹೈಕಮಾಂಡ್ ನಮಗೆ ಗ್ರೀನ್ ಸಿಗ್ನಲ್ ಕೊಟ್ಟಿಲ್ಲ. ಅವರು ಎಸ್ ಎಂದರೆ ಅನೇಕ ಪ್ರಮುಖರು ಬಿಜೆಪಿಗೆ ಬರಲಿದ್ದಾರೆ ಎಂದು ಪ್ರಸ್ತಾಪಿಸಿದ್ದಾರೆ. ತಮ್ಮ ಆಡಿಯೋ ಬಗ್ಗೆ ಪ್ರತಿಕ್ರಿಯೆ ನೀಡಿರುವ ಯೋಗೇಶ್ವರ್ ಇದು ನಕಲಿ ಆಡಿಯೋ. ಕೆಲವರು ಚಾರಿತ್ರ್ಯವಧೆ ಮಾಡಲು ಈ ರೀತಿ ಹರಿಬಿಟ್ಟಿದ್ದಾರೆ ಎಂದು ಗುಡುಗಿದ್ದಾರೆ.


## ಪ್ರಥಮ ವರ್ಷದ ಪುಣ್ಯಸ್ಮರಣೆ



**ಡಾ. ಬಿ.ಎಸ್. ಜಯಶಂಕರಪ್ಪ**
(ನಿವೃತ್ತ ಮನೋತಜ್ಞರು, ಬಿಳಿಚೋಡು ಶೆಟ್ರು ಕುಟುಂಬದವರು)
ನಿಧನ : *15-01-2022*

ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು. ಸದಾ ನಿಮ್ಮ ಸ್ಮರಣೆ ಮತ್ತು ನೀವು ತೋರಿದ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಿರುವ....

**ಶೆಟ್ರು ಕಲಿವೀರಪ್ಪ ಮತ್ತು ಚನ್ನಬಸಪ್ಪ ಮನೋಳಿ ಟ್ರಸ್ಟ್, ದಾವಣಗೆರೆ. ಮೊ. 94481 14075**


## ಮಲೇಬೆನ್ನೂರು ಪಟ್ಟಣದ ಅಂಗಡಿ ಶಾಂತಮ್ಮ ನಿಧನ



ಹರಿಹರ ತಾಲ್ಲೂಕು ಮಲೇಬೆನ್ನೂರು ಪಟ್ಟಣದ ಜಿಗಳಿ ರಸ್ತೆಯ ವಾಸಿ ದಿ. ಅಂಗಡಿ ಮಹೇಶ್ವರಪ್ಪನವರ ಧರ್ಮಪತ್ನಿ ಶ್ರೀಮತಿ ಶಾಂತಮ್ಮ (72) ಇವರು ದಿನಾಂಕ 14.1.2023ರ ಶನಿವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರು. ಮೂವರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಮತ್ತು ಸಹೋದರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.1.2023ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಮಲೇಬೆನ್ನೂರಿನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

## ಹೊಲಿಗೆ ಯಂತ್ರ ವಿತರಣೆಗೆ ಅರ್ಜಿ

ದಾವಣಗೆರೆ, ಜ.14- ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ದಿಂದ ಹಿಂದುಳಿದ ವರ್ಗದವರಿಗೆ ಹೊಲಿಗೆ ಯಂತ್ರ ವಿತರಿಸಲಾಗುವುದು. ಆನ್‌ಲೈನ್ ಮೂಲಕ ಫೆ.23 ವರೆಗೆ ಅರ್ಜಿ ಸಲ್ಲಿಸಬಹುದು.

ವೆಬ್‌ಸೈಟ್www.dbcdc. karnataka.gov.in ನಲ್ಲಿ ಮಾಹಿತಿ ಪಡೆಯಬಹುದು. ವಿವರಕ್ಕೆ ಸಂಪರ್ಕಿಸಿ : 080-22374832, 8050770004, 8050 770006, 7090400100/ 7090400900, ದೂರವಾಣಿ : 08192-230934.




**ದಿನಾಂಕ : 15.01.2023 ರಿಂದ 21.01.2023**
**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**
ಈ ಹಿಂದೆ ಕೆಲವರೊಂದಿಗೆ ಬಿಟ್ಟುಹೋಗಿದ್ದ ಸ್ನೇಹವು ಮತ್ತೆ ವೃದ್ಧಿಸಲಿದೆ. ಆದರೆ ಸ್ನೇಹದಲ್ಲಿ ವ್ಯವಹಾರವನ್ನು ತಂದು, ಅದು ಹಳಸದಂತೆ ಎಚ್ಚರ ವಹಿಸಿ. ಆಸ್ತಿ ಪಾಲುದಾರಿಕೆ ವಿಷಯವು ಅನಿರೀಕ್ಷಿತ ತಿರುವು ಪಡೆದು ಕೋರ್ಟ್ ಮೆಟ್ಟಿಲೇರಬಹುದು. ವೈಯಕ್ತಿಕವಾಗಿ ಹಲವು ವಿಷಯಗಳು ಸಮಸ್ಯೆಯನ್ನುಂಟು ಮಾಡಬಹುದು. ವಾಹನದಲ್ಲಿ ಎಚ್ಚರವಿರಲಿ. ಆದಾಯದ ಮೂಲ ಹೆಚ್ಚಿತೆಂದು ದುಂದುವೆಚ್ಚಕ್ಕೆ ಅವಕಾಶ ಕೊಡಬೇಡಿ. ಕುಲದೇವತಾ ದರ್ಶನಭಾಗ್ಯವಿದೆ. ಮಹಿಳೆಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಉತ್ತಮ ದಿನಗಳು. ಸೋಮ-ಮಂಗಳ-ಗುರು-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**
ನೀವು ಪ್ರಸಿದ್ಧ ಕೈಗಾರಿಕೋದ್ಯಮಿಗಳಾಗಿದ್ದಲ್ಲಿ ಸಾಕಷ್ಟು ಎಚ್ಚರದಿಂದಿರಿ, ಸಾಧ್ಯವಿದ್ದಲ್ಲಿ ಅಪರಾಧಿಗಳನ್ನು ಕಂಡುಹಿಡಿದು ಶಿಕ್ಷಿಸಿ. ರಾಜಕಾರಣಿಗಳು ತಮ್ಮ ಹಿಂಬಾಲಕರ ಬಗ್ಗೆ ಮತ್ತು ಅವರ ಮಾತುಗಳಿಗೆ ಲಗಾಮು ಹಾಕದೇ ಹೋದಲ್ಲಿ, ತಾವೇ ಉತ್ತರದಾಯಿಗಳಾಗ ಬೇಕಾದೀತು. ಯುವಕರು ಆತುರದಿಂದ ತಾವರಿಯದ ಕೆಲಸಗಳನ್ನು ಮಾಡಲು ಹೋಗಿ, ಗಂಡಾಂತರಕ್ಕೆ ಸಿಲುಕುವ ಸಂಭವವಿದೆ. ನಿರುದ್ಯೋಗಿ ಮಗನಿಗೆ ಸಾಧಾರಣ ವೇತನದ ನೌಕರಿ ದೊರೆಯಲಿದೆ, ಸದ್ಯದ ಪರಿಸ್ಥಿತಿಯಲ್ಲಿ ಅಲ್ಲಿಯೇ ಕೆಲಸ ಮಾಡುವುದು ಉತ್ತಮ. ಬುಧ-ಶುಕ್ರ-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**
ಆದ್ಯತೆಯ ಮೇರೆಗೆ ಕೆಲಸ ಮಾಡುವುದರಿಂದ ಒತ್ತಡವು ಕಡಿಮೆಯಾಗಲಿದೆ. ವಿದ್ಯಾರ್ಥಿಗಳು ಆತ್ಮವಿಶ್ವಾಸದೊಂದಿಗೆ ಪರೀಕ್ಷೆಯನ್ನು ಎದುರಿಸಲಿ. ಚಿಕ್ಕಮಕ್ಕಳ ಆರೋಗ್ಯದ ವಿಷಯದಲ್ಲಿ ತುಸು ಎಚ್ಚರದಿಂದಿರಿ. ವ್ಯಾಪಾರ, ವ್ಯವಹಾರಗಳಲ್ಲಿ ನಿಮ್ಮ ಪಾಲ್ಗೊಳ್ಳುವಿಕೆ ಇರಲಿ. ಸಂಗಾತಿಯ ಸಲಹೆಗಳು ಪ್ರಯೋಜನಕ್ಕೆ ಬರಲಿವೆ. ವಿದೇಶದಲ್ಲಿ ಸಂಶೋಧನೆ ಮಾಡಲಿಚ್ಛಿಸುವವರಿಗೆ ಸಮಾಜದಿಂದ ನೆರವು, ಆದಾಯದ ಮೂಲದಲ್ಲಿ ಕೊರೆತೆ ಸಹೋದ್ಯೋಗಿಗಳೊಂದಿಗೆ, ಸೌಹಾರ್ದತೆಯಿರಲಿ. ಗಣೇಶನನ್ನು ಗರಿಕೆಯಿಂದ ಆರಾಧಿಸಿ. ಭಾನು, ಸೋಮ, ಬುಧ, ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೊ.ಡ.ಡಿ.ಡು.ಡೆ.ಡೋ)**
ಗೆಳೆಯರನ್ನು ನಂಬಿ ಹೂಡಿಕೆ ಮಾಡಿದ್ದ ಹಣಕಾಸಿನ ವ್ಯವಹಾರದಲ್ಲಿ ಎಲ್ಲೋ ಒಂದು ಕಡೆ ನಿಮಗೆ ಮೋಸವಾಗುವ ಸಂಭವವಿದೆ. ಈ ವಿಷಯದಲ್ಲಿ ಸಾಕಷ್ಟು ಜಾಗ್ರತರಾಗಿರುವುದು ಉತ್ತಮ. ಮೇಲಾಧಿಕಾರಿಗಳ ವಿರುದ್ಧ ಪಿತೂರಿ ಮಾಡಲು ಹೋಗಿ ನೀವೇ ತೊಂದರೆಗೆ ಸಿಲುಕುವ ಪ್ರಸಂಗ ಬರಲಿದೆ. ಆದಾಯದ ಮೂಲದಲ್ಲಿ ಹೆಚ್ಚಳ, ಹೊಸ ಯೋಜನೆಗಳನ್ನು ಕಾರ್ಯರೂಪಕ್ಕೆ ತರಲು ಹೋಗಬೇಡಿ. ಸಾಂಸಾರಿಕ ಜಂಜಾಟ ದಲ್ಲಿ ಹೈರಾಣಾದ ನಿಮಗೆ ಒಬ್ಬ ಅಧ್ಯಾತ್ಮ ಗುರುವಿನ ಭೇಟಿಯಾಗಲಿದೆ. ಹಿರಿಯರ ಮಾರ್ಗದರ್ಶನದಂತೆ ನಡೆದಲ್ಲಿ ನಿಮ್ಮ ಹಲವು ಕೌಟುಂಬಿಕ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ವಿಷ್ಣು ಸಹಸ್ರನಾಮ ಪಠಿಸಿರಿ. ಸೋಮ-ಮಂಗಳ-ಶುಕ್ರ-ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**
ಒಂದು ವಿಷಯವನ್ನು ಹಲವು ರೀತಿಯಲ್ಲಿ ಯೋಚಿಸುವುದರಿಂದ ಗೊಂದಲಗಳೇ ಬಹಳ. ಆದ್ದರಿಂದ ಅನುಭವಿಗಳಾದ ಹಿರಿಯರ ಅನುಭವಯುಕ್ತ ಸಲಹೆಗಳನ್ನು ಪಡೆಯುವುದು ಲೇಸು. ಬಹಳಕಾಲದಿಂದ ಬಾಧಿಸುತ್ತಿದ್ದ ಅನಾರೋಗ್ಯ ಸಮಸ್ಯೆಗೆ ಈ ವಾರ ಪರಿಹಾರ ಕಂಡುಬರಲಿದೆ. ಕೆಲವೊಮ್ಮೆ ಅತಿಯಾದ ಕೆಲಸಕಾರ್ಯಗಳ ಒತ್ತಡ ದಿಂದಾಗಿ, ಮನೆಮಂದಿಯ ಮೇಲೆ ಕೋಪ ತಾಪಗಳನ್ನು ತೋರುವಿರಿ. ಸ್ತ್ರೀಯರ ನಯ ವಾದ ಮಾತುಗಳಿಂದಾಗಿ ಹಣಕಾಸಿನ ವಿಚಾರದಲ್ಲಿ ಮೋಸ ಹೋಗುವಿರಿ. ಸಂಗಾತಿಯ ಆದಾಯದಲ್ಲಿ ತಕ್ಕಮಟ್ಟಿಗೆ ಏರಿಕೆ ಕಂಡುಬರಲಿದೆ. ಕೃಷಿಕರ ಗಳಿಕೆಯಲ್ಲಿ ಹೆಚ್ಚಳ, ಧ್ಯಾನ ಯೋಗಗಳ ಅಭ್ಯಾಸ ಮಾಡುವುದು ಉತ್ತಮ. ಭಾನು-ಮಂಗಳ-ಗುರು-ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**
ರಾಜಕಾರಣಿಗಳಿಗೆ ಚರ್ಚಿಸಲು ಹೊಸದೊಂದು ವಿಷಯ ದೊರೆಯಲಿದೆ. ಅವಿವೇಕಿಗಳಿಗೆ ಬುದ್ಧಿವಾದ ಹೇಳಲು ಹೋಗಿ ನೀವೇ ಅವಮಾನಕ್ಕೆ ಗುರಿಯಾಗುವಿರಿ. ರೈತಾಪಿ ಜನರು ನಕಲಿ ಕೃಷಿ ಸಾಮಗ್ರಿಗಳನ್ನು ಖರೀದಿಸಿ ತೊಂದರೆಗೆ ಸಿಲುಕುವ ಪ್ರಸಂಗ, ವ್ಯಾಪಾರ-ವ್ಯವಹಾರಗಳಲ್ಲಿ ಮಾತಿಗಿಂತ ಕೃತಿಯ ಕಡೆಗೆ ಗಮನವಿಡುವುದು ಮೇಲು. ಹಣಕಾಸಿನ ಮೂಲವನ್ನು ಹೆಚ್ಚಿಸಿಕೊಳ್ಳಲು ಬೇರೆ ಮಾರ್ಗ ಹುಡುಕುವಿರಿ. ಅವಿವಾಹಿತರಿಗೆ ಕಂಕಣಭಾಗ್ಯ ಇಷ್ಟರಲ್ಲೇ ಕೂಡಿಬರಲಿದೆ. ಅರಿವಿಲ್ಲದ ವಿಷಯದಲ್ಲಿ ಸರ್ವಜ್ಞನಂತೆ ವರ್ತಿಸಬೇಡಿ. ಗುರುಗಳ ಆರಾಧನೆ ಮಾಡಿ. ಮಂಗಳ-ಬುಧ-ಶುಕ್ರ-ಶುಭ ದಿನಗಳು

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**
ನೀವು ವೃತ್ತಿಯಲ್ಲಿ ನೈಪುಣ್ಯವನ್ನು ಪಡೆದವರಾಗಿದ್ದಲ್ಲಿ ಎಲ್ಲಾ ಕಡೆಯಿಂದ ಹೆಚ್ಚಿನ ಬೇಡಿಕೆ ಬರಲಿದೆ. ಬೇರೆಯವರ ಕಷ್ಟಕ್ಕೆಂದು ಅವರ ಸಾಲಕ್ಕೆ ಜಾಮೀನಾಗಿದ್ದ ನಿಮಗೆ, ಸಾಲ ಕೊಟ್ಟವರಿಂದ ಕಿರುಕುಳ, ವ್ಯರ್ಥವಾದ ಅಲೆದಾಟದಿಂದಾಗಿ ಆರೋಗ್ಯದಲ್ಲಿ ವ್ಯತ್ಯಾಸವಾಗುವ ಸಂಭವವಿದೆ. ಹೂಡಿಕೆ ವ್ಯವಹಾರದಲ್ಲಿ ಮೈಮರೆಯುವುದು ಒಳ್ಳೇದಲ್ಲ. ಮಕ್ಕಳ ದುಂದುವೆಚ್ಚದಿಂದಾಗಿ ಗಳಿಕೆಯೊಂದಿಗೆ ಉಳಿತಾಯದಗಂಟೂ ಕರಗಬಹುದು. ಖಾಸಗಿ ಕಂಪನಿ ನೌಕರರಿಗೆ ಮುಂಬಡ್ತಿಯೊಂದಿಗೆ ವೇತನದಲ್ಲಿ ಹೆಚ್ಚಳವಾಗಲಿದೆ. ವಿದೇಶದಿಂದ ಅತಿಥಿಗಳ ಆಗಮನವಾಗಲಿದೆ. ಸೋಮ-ಶುಕ್ರ-ಶನಿ-ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**
ಆಗಬೇಕಾಗಿರುವ ಕೆಲಸ, ಕಾರ್ಯಗಳಿಗೆ ಬೇರೆಯರನ್ನು ನೆಚ್ಚಿಕೊಳ್ಳು ವುದಕ್ಕಿಂತ ನೀವೇ ತೊಡಗಿಕೊಳ್ಳುವುದು ಮೇಲು. ಮನೆಯ ಆಗುಹೋಗುಗಳ ಕಡೆ ತುಸು ಹೆಚ್ಚಿನ ಗಮನ ವಿರಲಿ, ಸ್ಥಿರ ಆಸ್ತಿಯನ್ನುಕೊಳ್ಳಲು ಅಥವಾ ಉಳಿಸಿಕೊಳ್ಳಲು ಹರ ಸಾಹಸಪಡುವಿರಿ. ಕೆಲಸ ಕಾರ್ಯಗಳ ಸೂಕ್ಷ್ಮತೆಯನ್ನು ಮತ್ತೊಬ್ಬರೊಂದಿಗೆ ಹಂಚಿಕೊಳ್ಳಲು ಹೋಗಬೇಡಿ. ಇಲ್ಲವಾದಲ್ಲಿ ಇದರ ಲಾಭ ಬೇರೆಯರ ಪಾಲಾದೀತು. ಆರ್ಥಿಕ ಪರಿಸ್ಥಿತಿ ಕ್ರಮೇಣ ಸುಧಾರಿಸುವುದರಿಂದ ಅವಸರಬೇಡ. ಮಕ್ಕಳ ವಿದ್ಯಾಭ್ಯಾಸದ ಕಡೆ ಹೆಚ್ಚಿನ ಗಮನಕೊಡಿ. ಕುಲದೇವತಾರಾಧನೆ ಮಾಡಿ. ಭಾನು-ಸೋಮ-ಮಂಗಳ-ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಢ, ಉತ್ತರಾಷಾಢ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**
ಮಹಿಳೆಯ ಎಲ್ಲಾ ಕೋರಿಕೆಗಳನ್ನು ಈಡೇರಿಸುವ ಸಲುವಾಗಿ ತುಸು ಹೆಚ್ಚೇ ಎನ್ನಬಹುದಾದ ಖರ್ಚು ಅನಿವಾರ್ಯವಾಗಬಹುದು. ಅಲಂಕಾರಿಕ ವಸ್ತುಗಳ ತಯಾರಿಕೆ ಹಾಗು ಮಾರಾಟ ಜೋರಾಗಿಯೇ ನಡೆಯಲಿದೆ. ವಿದೇಶಗಳಲ್ಲೂ ವಹಿವಾಟು ಹೆಚ್ಚಿ, ಲಾಭಾಧಿಕ್ಯವಾಗಲಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಅದರಲ್ಲೂ ಯಂತ್ರಗಳ ಮುಂದೆ ಕೆಲಸ ಮಾಡು ವವರು, ಸಾಕಷ್ಟು ಮುಂಜಾಗ್ರತೆಯಿಂದಿರುವುದು ಮೇಲು. ಆರ್ಥಿಕ ಸ್ಥಿತಿಗತಿ ನಿರೀಕ್ಷಿತ ಮಟ್ಟದಲ್ಲಿರುವುದರಿಂದ ಚಿಂತೆಬೇಡ. ಮನೆಯಲ್ಲಿ ಹಿರಿಯರ ಆರೋಗ್ಯದ ಕಡೆ ಗಮನ ವಿಡಿ. ಪ್ರಯಾಣ ಮುಂದೂಡುವುದು ಉತ್ತಮ. ಬುಧ-ಗುರು-ಶುಕ್ರ-ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**
ಖಾಸಗಿ ಕಂಪನಿಯಲ್ಲಿರುವ ನೌಕರರು ಹೊಸ ಕಂಪನಿಗಳಲ್ಲಿ ಹೆಚ್ಚಿನ ವೇತನ ಪಡೆಯುವ ಅವಕಾಶ ಬರಲಿದೆ. ಆರ್ಥಿಕವಾಗಿ ಹೆಚ್ಚಿನ ಚೇತರಿಕೆಯಾಗಲಿದ್ದು, ಹೊಸ ಯೋಜನೆಗಳಿಗೆ ಸಹಾಯವಾಗಲಿದೆ. ಕಾರ್ಯಸೂಚಿಗನುಗುಣವಾಗಿ ಆಗಲೇಬೇಕಾಗಿರುವ ಕೆಲಸಗಳತ್ತ ಗಮನಹರಿಸುವುದು ಮೇಲು. ಚಿಲ್ಲರೆ ವ್ಯಾಪಾರಿಗಳು ಗ್ರಾಹಕರೊಂದಿಗೆ ಸೌಜನ್ಯದಿಂದ ವರ್ತಿಸಿ, ಪ್ರಾಯಕ್ಕೆ ಬಂದ ಮಕ್ಕಳನ್ನು ಹೊಸ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವುದರಿಂದ ನಿಮಗೇ ತುಸು ವಿಶ್ರಾಂತಿ. ಮಂಗಳ ಕಾರ್ಯಗಳ ಸಿದ್ಧತೆ ಜೋರಾಗಿಯೇ ನಡೆಯಲಿದೆ.ದುರ್ಗಾರಾಧನೆ ಮಾಡಿರಿ.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**
ಹೊಸದಾಗಿ ನೌಕರಿಗೆ ಸೇರಿದ ಯುವಕರು, ತಮ್ಮ ಸಂಸ್ಥೆಯಲ್ಲಿ ಗುಂಪುಗಾರಿಕೆ ಮಾಡಲು ಹೋಗಿ ತೊಂದರೆಗೆ ಸಿಲುಕುವ ಪ್ರಸಂಗ ಬರಬಹುದು. ಸೋದರನೊಂದಿಗೆ ಸೌಹಾರ್ದಭಾವದಿಂದ ನಡೆದುಕೊಳ್ಳಿ. ಇದರಿಂದ ನಿಮ್ಮ ಘನತೆ ಹೆಚ್ಚಲಿದೆ. ದೈನಂದಿನ ಜೀವನದಲ್ಲಿ ಉತ್ಸಾಹ ಮೂಡಲಿದೆ. ವೈಯಕ್ತಿಕ ವ್ಯವಹಾರದ ನಿಮಿತ್ತ ದೂರದೂರಿಗೆ ಪ್ರಯಾಣ ಮಾಡಲೇಬೇಕಾದ ಸಂದರ್ಭ ಬರಲಿದೆ. ಕೊಟ್ಟ ಸಾಲವನ್ನು ಕೇಳದೇ ಹೋದಲ್ಲಿ ನಷ್ಟವಾಗಬಹುದು. ಶಸ್ತ್ರಚಿಕಿತ್ಸಾ ವೈದ್ಯರಿಗೆ ಬೇಡಿಕೆ ಹೆಚ್ಚಲಿದೆ. ವಿದ್ಯಾರ್ಥಿಗಳ ಉನ್ನತಾಧ್ಯಯನಕ್ಕೆ ಸಮಾಜದ ಗಣ್ಯಾತಿಗಣ್ಯರಿಂದ ಹಣಕಾಸಿನ ನೆರವು ದೊರೆಯಲಿದೆ.ಪುಣ್ಯಕ್ಷೇತ್ರಗಳ ದರ್ಶನ ಭಾಗ್ಯ ನಿಮ್ಮದಾಗಲಿದೆ. ಸೋಮ-ಬುಧ-ಶನಿ-ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**
ಇಷ್ಟುದಿನ ಬಹಳ ಗೌಪ್ಯತೆಯಿಂದ ಕಾಪಾಡಿಕೊಂಡು ಬಂದಿದ್ದ ಹಣಕಾಸಿನ ಅಥವಾ ಆಸ್ತಿ ವಿವರಗಳ ಕಾಗದ ಪತ್ರಗಳು ಸರ್ಕಾರದ ಕೈಸೇರಿ, ಲೆಕ್ಕಪತ್ರಗಳ ತಪಾಸಣೆ ಯಾಗಲಿದೆ. ಚಾಡಿಮಾತನ್ನು ಕೇಳಿ, ಬಂಧುಗಳೊಂದಿಗಿರುವ ವಿಶ್ವಾಸವನ್ನು ಕಳೆದುಕೊಳ್ಳಬೇಡಿ.ಇದಾಗದಂತೆ ಎಚ್ಚರವಹಿಸುವುದು ಉತ್ತಮ. ತಾಯಿಯ ಆರೋಗ್ಯದಲ್ಲಿ ತೀವ್ರ ವ್ಯತ್ಯಾಸವಾಗುವ ಸಂಭವವಿದ್ದು, ಸೂಕ್ತ ವೈದ್ಯರ ಸಂಪರ್ಕದಲ್ಲಿರುವುದು ಮೇಲು. ವ್ಯಾಪಾರ ಕ್ಷೇತ್ರದಲ್ಲಿ ಪ್ರತಿಸ್ಪರ್ಧಿಗಳ ಕಾಟ ಹೆಚ್ಚಾಗಲಿದೆ. ಮಕ್ಕಳ ವಿದ್ಯಾಭ್ಯಾಸವನ್ನು ಅಲಕ್ಷಿಸುವುದರಲ್ಲಿ ಅರ್ಥವಿಲ್ಲ. ಖರ್ಚಿನ ಮೇಲೆ ಕಡಿವಾಣಹಾಕಿ. ಭಾನು-ಸೋಮ-ಗುರು-ಶುಭ ದಿನಗಳು.

**ವಿಶೇಷ ದಿನಗಳು :**
**ದಿನಾಂಕ: 15.01.2023 ಭಾನುವಾರ, ಉತ್ತರಾಯಣ ಪರ್ವಕಾಲ, ಮಕರ ಸಂಕ್ರಮಣ, ಸೂರ್ಯೋದಯದಾರಭ್ಯ ಮಧ್ಯಾಹ್ನ 2.18 ರ ವರೆಗೆ ಪುಣ್ಯಕಾಲ, ಕರಿ ದಿನ, ಗೋಪಾಲ ದಾಸರ ಪುಣ್ಯತಿಥಿ.**
**ದಿನಾಂಕ: 21.01.2023 ನೇ ಶನಿವಾರ ಪುರಂದರ ದಾಸರ ಪುಣ್ಯತಿಥಿ.**

# ಬೀದಿ ಮಾತಿನ ಮಟ್ಟಕ್ಕೆ ಬಂದಿರುವ ಪಂಚಮಸಾಲಿ ಹೋರಾಟ

ಬೆಂಗಳೂರು, ಜ. 14 - ಪಂಚಮಸಾಲಿ ಹೋರಾಟ ಆಡಳಿತಾರೂಢ ಸಚಿವ ಹಾಗೂ ಶಾಸಕರಲ್ಲಿ ಬೀದಿ ಮಾತುಗಳಿಗೆ ಎಡೆಮಾಡಿಕೊಟ್ಟಿದೆ.

ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವ ಸಂಬಂಧ ನಾಲಿಗೆ ಹರಿಬಿಟ್ಟು ಮಾತನಾಡಿದರೆ ನಾಲಿಗೆ ಕತ್ತರಿಸುವ ಕೆಲಸ ಮಾಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸ್ವಪಕ್ಷದ ಹಿರಿಯ ಸದಸ್ಯ ಬಸನಗೌಡ ಪಾಟೀಲ್ ಯತ್ನಾಳ್ ಅವರ ಹೆಸರು ಪ್ರಸ್ತಾಪಿಸದೇ, ವಿಜಯಪುರ ದವರು ಒಬ್ಬರಿದ್ದಾರೆ. ಅವರದು ಎಲುಬಿಲ್ಲದ ನಾಲಿಗೆ, ಅಪ್ಪನಿಗೆ ಹುಟ್ಟಿದವರು ಈ ರೀತಿ ಮಾತನಾಡುವುದಿಲ್ಲ ಎಂದರು.

ಪದೇ ಪದೇ ಒಬ್ಬರನ್ನು ಹಿಯ್ಯಾಳಿಸಿ ಮಾತನಾಡುವುದು, ಬಾಯಿಗೆ ಬಂದಂತೆ ಟೀಕೆ ಮಾಡುವುದು ಅವರಿಗೆ ಅಭ್ಯಾಸವಾಗಿಬಿಟ್ಟಿದೆ. ಬಾಯಿ ಮುಚ್ಚಿಕೊಂಡು ಸುಮ್ಮನಿದ್ದರೆ ಒಳ್ಳೆಯದು. ಇಲ್ಲದಿದ್ದರೆ ನಾವು ಕೂಡ ಅದೇ ದಾಟಿಯಲ್ಲಿ ಮಾತನಾಡಬೇಕಾಗುತ್ತದೆ. ನಾಲಿಗೆ ಉದ್ದ ಇದೆ ಎಂದು ಚಾಚಿದರೆ ಕತ್ತರಿಸುವ ಕೆಲಸವೂ ನಮಗೆ ಗೊತ್ತಿದೆ ಎಂದು ಎಚ್ಚರಿಕೆ ನೀಡಿದರು.

ಪಿಂಪ್ ಬಗ್ಗೆ ಮಾತನಾಡುವ ಕೆಲಸ ಮಾಡಿದ್ದಾರೆ. ಆ ಸಂಸ್ಕೃತಿಯಲ್ಲಿ ಇದ್ದವರೇ ಈ ರೀತಿ ಮಾತನಾಡುವುದು. ಒಳ್ಳೆಯ ಕುಟುಂಬದ ಹಿನ್ನೆಲೆ, ಸಂಸ್ಕಾರದಿಂದ ಬಂದವರು ಈ ರೀತಿ ಮಾತನಾಡುವುದಿಲ್ಲ ಎಂದೂ ನಿರಾಣಿ ಕಿಡಿ ಕಾರಿದ್ದಾರೆ.

ಬಿಜೆಪಿಗೆ ಬಂದ ಮೇಲೆ ಮುಸ್ಲಿಮರ ವಿರುದ್ಧ ಮಾತನಾಡುವುದು, ಹಿಂದುತ್ವದ ಬಗ್ಗೆ ಮಾತನಾಡುವುದು ಇವರಿಗೆ ಅಭ್ಯಾಸವಾಗಿದೆ. ಒಂದು ರಾಜಕೀಯ ಪಕ್ಷಕ್ಕೆ ಸೇರಿದ ಮೇಲೆ ಆ ಪಕ್ಷದ ಶಿಸ್ತು, ಚೌಕಟ್ಟಿಗೆ ಬದ್ಧರಾಗಿರಬೇಕು ಎಂದರು.



ಜೆಡಿಎಸ್‌ಗೆ ಹೋದಾಗ ಟಿಪ್ಪು ಟೋಪಿ ಹಾಕುತ್ತಾರೆ. ಬಿಜೆಪಿಗೆ ಬಂದಾಗ ಅದೇ ಟಿಪ್ಪು ಟೋಪಿಯನ್ನು ವಿರೋಧಿಸುತ್ತಾರೆ. ಇವರಿಗೆ ಯಾವ ಬದ್ದತೆ ಇದೆ? ಇಂಥವರಿಂದ ನಾವು ನೈತಿಕತೆ ಪಾಠ ಕಲಿಯಬೇಕೆ? ಎಂದು ಪ್ರಶ್ನಿಸಿದರು.

ಇನ್ನೊಬ್ಬರ ಚಾರಿತ್ರ್ಯದ ಬಗ್ಗೆ ಮಾತನಾಡುವ ಈ ಮಹಾನುಭಾವರು ನ್ಯಾಯಾಲಯದಲ್ಲಿ ಏಕೆ ತಡೆಯಾಜ್ಞೆ ತಂದಿದ್ದಾರೆ. ತಾಕತ್ತಿದ್ದರೆ ಮೊದಲು ತಡೆಯಾಜ್ಞೆಯನ್ನು ತೆರವುಗೊಳಿಸಲಿ ಎಂದು ಸವಾಲು ಹಾಕಿದರು.

ಯಾರ ಬಗ್ಗೆಯೂ ವೈಯಕ್ತಿಕವಾಗಿ ನಿಂದನೆ ಮಾಡುವುದು ಶೋಭೆ ತರುವುದಿಲ್ಲ. ಸ್ಥಾನಮಾನಕ್ಕೆ ತಕ್ಕಂತೆ ಗೌರವ ಕೊಟ್ಟು ಮಾತನಾಡುವುದನ್ನು ಕಲಿಯಲಿ. ಒಂದು ವೇಳೆ ಆಗದಿದ್ದರೆ ಪಕ್ಷ ಬಿಟ್ಟು ಹೋಗಲು ಸ್ವತಂತ್ರರು ಎಂದು ಹೇಳಿದರು.

ನಾವು ಪಕ್ಷದ ನಿಯಮವನ್ನು ಮೀರಿ ಮಾತನಾಡಬಾರದು. ಪಕ್ಷ ತಾಯಿ ಸಮಾನ. ಎಷ್ಟೇ ಅಸಮಾಧಾನವಿದ್ದರೂ ಬಾಯಿ ಮುಚ್ಚಿಕೊಂಡು ಇರಬೇಕು ಎಂದು ಮುಖ್ಯಮಂತ್ರಿ ಸೂಚನೆ ನೀಡಿದ್ದಾರೆ. ಒಂದು ವೇಳೆ ಪಕ್ಷದಲ್ಲಿರಲು ಸಾಧ್ಯವಿಲ್ಲ ಎಂದಾದರೆ ರಾಜೀನಾಮೆ ಕೊಟ್ಟು ಹೊರಗೆ ಹೋಗಿ ಪ್ರತಿಭಟನೆ ಮಾಡಲಿ. ಈ ದೊಂಬರಾಟಕ್ಕೆ ವಿಜಯಪುರದ ಜನ ಉತ್ತರ ಕೊಡುತ್ತಾರೆ ಎಂದು ಎಚ್ಚರಿಸಿದರು.

## ಸ್ವಾಮೀಜಿ 100 ಪರ್ಸೆಂಟ್ ರಾಜಕೀಯ



### ಮುಖ್ಯಮಂತ್ರಿ, ಸಚಿವರಿಂದ ತರಾಟೆ

ಬೆಂಗಳೂರು, ಜ. 14 - ಪಂಚಮಸಾಲಿ ಮೀಸಲಾತಿ ವಿಷಯ ಈಗ ಮುಖ್ಯಮಂತ್ರಿ, ಸಚಿವರು ಹಾಗೂ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿ ನಡುವಿನ ಚಕಮಕಿಗೆ ಕಾರಣವಾಗಿದೆ.

ನಿನ್ನೆಯಷ್ಟೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕ್ಷೇತ್ರವಾದ ಶಿಗ್ಗಾವಿಯಲ್ಲಿ ಬೀದಿಗಿಳಿದು ಪ್ರತಿಭಟನೆ ಮಾಡಿದ್ದ ಸ್ವಾಮೀಜಿ ವಿರುದ್ಧ ಸಚಿವರಾದ ಮುರುಗೇಶ್ ನಿರಾಣಿ ಹಾಗೂ ಸಿ.ಸಿ. ಪಾಟೀಲ್ ಕಿಡಿ ಕಾರಿದ್ದಾರೆ.

ಪಂಚಮಸಾಲಿಗಳಿಗೆ 2ಎ ಮೀಸಲಾತಿ ಕೊಡಲೇಬಾರದು ಎಂದು 2016ರಲ್ಲಿ ಕಾಂತರಾಜ್ ಸಮಿತಿ ವರದಿ ನೀಡಿತ್ತು. ಆಗ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಇತ್ತು. ಆಗ ವಿಜಯಾನಂದ ಕಾಶಪ್ಪನವರ್ ಶಾಸಕರಾಗಿದ್ದರು. ಆಗ ಸ್ವಾಮೀಜಿ ಹಾಗೂ ಕಾಶಪ್ಪನವರ್ ಏಕೆ ಸುಮ್ಮನಿದ್ದರು? ಮೀಸಲಾತಿಗಾಗಿ ಏನು ಮಾಡಿದ್ದೀರ ಎಂದು ಸ್ವಾಮೀಜಿ ತಮ್ಮ ಅಕ್ಕಪಕ್ಕದಲ್ಲಿರುವವರಿಗೆ ಕೇಳಲಿ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದ್ದಾರೆ.

ಸ್ವಾಮೀಜಿ 100 ಪರ್ಸೆಂಟ್ ರಾಜಕೀಯ ಮಾಡುತ್ತಿದ್ದಾರೆ. ಮೀಸಲಾತಿ ಕೊಟ್ಟಂಥವರಿಗೆ ತಿರುಗಿ ಬೀಳುತ್ತಿದ್ದಾರೆ, ಮೀಸಲಾತಿ ಕೊಡಲಾಗದು ಎನ್ನುವವರ ಬಗ್ಗೆ ಸುಮ್ಮನಿದ್ದಾರೆ. ಕಾಂಗ್ರೆಸ್ ನಾಯಕರೊಬ್ಬರು 2ಎ ಕೊಡುವುದು ಸಾಧ್ಯವೇ ಇಲ್ಲ ಎಂದಾಗ ಸುಮ್ಮನಿದ್ದಾರೆ. ಇದನ್ನು ಜನ ಸೂಕ್ಷ್ಮವಾಗಿ ಅರ್ಥ ಮಾಡಿಕೊಳ್ಳುತ್ತಿದ್ದಾರೆ ಎಂದು ಸಚಿವ ನಿರಾಣಿ ಹೇಳಿದ್ದಾರೆ.

ಬೇರೆ ಸಮಾಜದ ಗುರುಗಳು ಶಾಂತಿಯುತ ಹೋರಾಟ ಮಾಡಿ, ಮನವಿ ಸಲ್ಲಿಸಿ ಮೀಸಲಾತಿ ಪಡೆದುಕೊಂಡಿದ್ದಾರೆ. ನಮ್ಮವರು ಬಾರ್ ಕೋಲ್ ಹೋರಾಟ, ಮುಖ್ಯಮಂತ್ರಿ ಮನೆಗೆ ಮುತ್ತಿಗೆ, ವಿಧಾನ ಸಭೆಗೆ ಮುತ್ತಿಗೆ ಹಾಕುತ್ತಾ ಸಚಿವ ಸಂಪುಟದಲ್ಲಿರುವವರ ಬಗ್ಗೆ ಬಾಯಿಗೆ ಬಂದಂತೆ ಮಾತನಾಡುತ್ತಿದ್ದಾರೆ. ಇದು ನೂರಕ್ಕೆ ನೂರು ರಾಜಕೀಯ ಎಂದು ನಿರಾಣಿ ಹೇಳಿದ್ದಾರೆ.

ಸಚಿವ ಸಿ.ಸಿ. ಪಾಟೀಲ್ ಮಾತನಾಡಿ, ಪದೇ ಪದೇ ಗಡುವು ಕೊಡುವುದು ಸ್ವಾಮೀಜಿ ಹವ್ಯಾಸ. ಆದರೆ, ಬೊಮ್ಮಾಯಿ ಅವರು ಗೃಹ ಸಚಿವರಾಗಿದ್ದಾಗ ಹಾಗೂ ಮುಖ್ಯಮಂತ್ರಿಯಾದ ಮೇಲೆ ಮೀಸಲಾತಿಗೆ ಸಹಕಾರ ನೀಡಿದ್ದಾರೆ. ಈ ಬಗ್ಗೆ ಸ್ವಾಮೀಜಿ ಅವಲೋಕನ ಮಾಡಿಕೊಳ್ಳಲಿ ಎಂದಿದ್ದಾರೆ.

ಮೀಸಲಾತಿ ವಿಷಯ ಈಗ ಅಂತಿಮ ಹಂತಕ್ಕೆ ಬಂದಿದೆ. ಈಗ ರಾಜಕೀಯ ಪ್ರೇರಿತವಾಗಿ ಮುಖ್ಯಮಂತ್ರಿ ಮನೆಗೆ ಮುತ್ತಿಗೆ ಹಾಕುತ್ತಿದ್ದಾರೆ. ಎಷ್ಟು ಬಾರಿ ಮುತ್ತಿಗೆ ಹಾಕುತ್ತೀರಿ? **(4ನೇ ಪುಟಕ್ಕೆ)**

# ಮೀಸಲಾತಿ ಮಧ್ಯಂತರ ವರದಿಗೆ ವಾರದಲ್ಲೇ ಒಪ್ಪಿಗೆ

## ಇದಕ್ಕಿಂತ ವೇಗದ ಕ್ರಮ ಯಾರಿಂದಲೂ ಸಾಧ್ಯವಿಲ್ಲ : ಬೊಮ್ಮಾಯಿ

ಬೆಂಗಳೂರು, ಜ. 14 - ಪಂಚಮಸಾಲಿ ಮೀಸಲಾತಿಗೆ ಈಗ ಹೋರಾಟ ಮಾಡುತ್ತಿದ್ದವರು, ಕಾಂತರಾಜ್ ಆಯೋಗದ ವರದಿ ಮೀಸಲಾತಿ ತಿರಸ್ಕರಿಸಿದಾಗ ಏನು ಮಾಡುತ್ತಿದ್ದರು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ಮೀಸಲಾತಿಗಾಗಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿರುವಾಗ, ವಿಸ್ಮಯ ವಾತಾವರಣ ಮಾಡುವುದು ಸರಿಯಲ್ಲ ಎಂದು ಅವರು ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ಶ್ರೀ ಜಯಮೃತ್ಯುಂಜಯ ಸ್ವಾಮೀಜಿಗೆ ನೇರವಾಗಿ ತಿಳಿಸಿದ್ದಾರೆ.

ಸದಾಶಿವ ಆಯೋಗದ ವರದಿ 10 ವರ್ಷಗಳಾದರೂ ಜಾರಿಗೆ ಬಂದಿಲ್ಲ. ಕಾಂತರಾಜ ಆಯೋಗದ ವರದಿ 5-6 ವರ್ಷಗಳಾದರೂ ಜಾರಿಗೆ ಬಂದಿಲ್ಲ. ಆದರೆ, ನಾವು ಹಿಂದುಳಿದ ವರ್ಗಗಳ ಆಯೋಗದ ಮಧ್ಯಂತರ ವರದಿಗೆ ವಾರದಲ್ಲೇ ಒಪ್ಪಿಗೆ ಕೊಟ್ಟಿದ್ದೇವೆ ಎಂದು ಬೊಮ್ಮಾಯಿ ಹೇಳಿದರು.

2016ರಲ್ಲಿ ಕಾಂಗ್ರೆಸ್ ಸರ್ಕಾರ ಇದ್ದಾಗ ಪಂಚಮಸಾಲಿಗಳಿಗೆ 2ಎ ಮೀಸಲಾತಿ ನೀಡಬಾರದು ಎಂದು ಕಾಂತರಾಜ್ ಸಮಿತಿ ವರದಿ ನೀಡಿತ್ತು. ಆಗ ಸಿದ್ದರಾಮಯ್ಯ



ಮುಖ್ಯಮಂತ್ರಿಯಾಗಿದ್ದು. ವಿಜಯಾನಂದ ಕಾಶಪ್ಪನವರ್ ಶಾಸಕರಾಗಿದ್ದರು. ಆಗ ಏಕೆ ಸುಮ್ಮನಿದ್ದರು? ನಂತರ 2016-18ರವರೆಗೆ ಕಾಂಗ್ರೆಸ್ - ಜೆಡಿಎಸ್ ಸಮ್ಮಿಶ್ರ ಸರ್ಕಾರ ಇದ್ದಾಗ ಏಕೆ ಸುಮ್ಮನಿದ್ದರು? ಎಂದು ಬೊಮ್ಮಾಯಿ ಪ್ರಶ್ನಿಸಿದರು.

ಆಗ ಕೇಳದೇ ಇರುವವರಿಗೆ ಈಗ ಸಮಯದ ಗಡುವು ನೀಡಲು ಯಾವ ನೈತಿಕ ಹಕ್ಕಿದೆ? ಕಾಂಗ್ರೆಸ್ ಪಕ್ಷದವರು ಜಾತಿ ರಾಜಕೀಯದಲ್ಲಿ ರೊಟ್ಟಿ ಬೇಯಿಸುವ ಕೆಲಸ ಮಾಡುತ್ತಿದ್ದಾರೆ ಎಂದವರು ತರಾಟೆಗೆ ತೆಗೆದುಕೊಂಡರು.

ನಿಮ್ಮ ಅಕ್ಕ ಪಕ್ಕ ಇರುವವರು ತಾವು ಅಧಿಕಾರದಲ್ಲಿದ್ದಾಗ ಮೀಸಲಾತಿಗಾಗಿ ಏನು ಮಾಡಿದ್ದರು ಎಂಬ ಸಣ್ಣ ಪ್ರಶ್ನೆಯನ್ನು ಜಯಮೃತ್ಯುಂಜಯ ಸ್ವಾಮೀಜಿ ಕೇಳಲಿ ಎಂದೂ ಬೊಮ್ಮಾಯಿ ಹೇಳಿದ್ದಾರೆ.

ನಾನೇನೂ ಮೀಸಲಾತಿ ಈಡೇರಿಕೆಗೆ ಯಾವುದೇ ಗಡುವು ಕೊಟ್ಟಿಲ್ಲ. ಅವರೇ ಇಷ್ಟು ದಿನಗಳಲ್ಲಿ ಮೀಸಲಾತಿ ಜಾರಿಗೆ ತನ್ನಿ ಎನ್ನುತ್ತಿದ್ದರು. ಇದಕ್ಕಿಂತ ವೇಗವಾಗಿ ಯಾರೂ ಮೀಸಲಾತಿ ನೀಡಲು ಸಾಧ್ಯವಿಲ್ಲ ಎಂದು ಮುಖ್ಯಮಂತ್ರಿ ಸ್ಪಷ್ಟವಾಗಿ ಹೇಳಿದ್ದಾರೆ.

ನಮ್ಮ ಮೇಲೆ ದೊಡ್ಡ ಜವಾಬ್ದಾರಿ ಇದೆ. ಎಲ್ಲಾ ಸಮುದಾಯವನ್ನು ಸಮನಾಗಿ ನೋಡಬೇಕು ಹಾಗೂ ನ್ಯಾಯ ನೀಡಬೇಕು. ಯಾವುದೇ ಸಮುದಾಯಕ್ಕೆ ಅನ್ಯಾಯವಾಗ ಬಾರದು ಎಂದವರು ತಿಳಿಸಿದರು.

ಹಿಂದುಳಿದ ವರ್ಗದ ಆಯೋಗ ನೀಡಿರುವ ಮಧ್ಯಂತರ ವರದಿಯನ್ನು ಒಂದು ವಾರದಲ್ಲಿ ಸಂಪುಟದಲ್ಲಿಟ್ಟು, ತಾತ್ವಿಕ ಒಪ್ಪಿಗೆ ನೀಡಿದ್ದೇವೆ. ಬೇಡಿಕೆ ಇಟ್ಟವರನ್ನು ಗಮನಿಸಿ, ಪ್ರವರ್ಗ 2ರಲ್ಲಿ ಸೇರಿಸಲು ನಾವು ಘೋಷಣೆ ಮಾಡಿದ್ದೇವೆ. ಇದು ನಮ್ಮ ಬದ್ಧತೆ ಎಂದು ತಿಳಿಸಿದರು.

ಸರ್ವೋಚ್ಚ ನ್ಯಾಯಾಲಯದ ಆದೇಶಕ್ಕೆ ಅನುಗುಣವಾಗಿ ಮೀಸಲಾತಿ ನಿಗದಿ ಮಾಡಬೇಕಾಗುತ್ತದೆ. ದತ್ತಾಂಶ ಸಂಗ್ರಹ ಮಾಡಿ ಹಿಂದುಳಿದ ವರ್ಗಗಳ ಆಯೋಗದ ಅಂತಿಮ ವರದಿ ನೀಡಲಾಗುವುದು ಎಂದಿದ್ದಾರೆ. ಆದಷ್ಟು ಬೇಗ ನೀಡಲು ತಿಳಿಸಲಾಗಿದೆ ಎಂದೂ ಅವರು ಹೇಳಿದರು.

# ಹರಿಹರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ನ್ಯಾಕ್ 'ಬಿ' ಮಾನ್ಯತೆ

ಹರಿಹರ, ಜ. 14 - ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿಗೆ ರಾಷ್ಟ್ರೀಯ ಮೌಲ್ಯಂಕನ ಮತ್ತು ಮಾನ್ಯತಾ ಪರಿಷತ್ ನ 2 ನೇ ಆವೃತ್ತಿಯಲ್ಲಿ (ನ್ಯಾಕ್) 2.7 ಸಿಜಿಪಿಎ ಅಂಕಗಳೊಂದಿಗೆ ಬಿ ಪ್ಲಸ್ ಶ್ರೇಣಿ ಮಾನ್ಯತೆ ದೊರಕಿದೆ. ಇದು ಮುಂದಿನ ಐದು ವರ್ಷದ ಅವಧಿವರೆಗೆ ಮಾನ್ಯವಾಗಿರುತ್ತದೆ.

ಇತ್ತೀಚಿಗೆ ರಾಷ್ಟ್ರೀಯ ಮೌಲ್ಯಂಕನ ಮತ್ತು ಮಾನ್ಯತಾ ಪರಿಷತ್ (ನ್ಯಾಕ್) ತಂಡವು ಕಾಲೇಜಿಗೆ ಭೇಟಿ ನೀಡಿ ಶೈಕ್ಷಣಿಕ ವಿಭಾಗಗಳು, ಸಂಶೋಧನಾ ಚಟುವಟಿಕೆಗಳು, ಕಾಲೇಜಿನ ವಿವಿಧ ಸಮಿತಿಗಳ ಪ್ರಗತಿಯನ್ನು ಅದರೊಂದಿಗೆ ಕಾಲೇಜಿನ ಸೌಲಭ್ಯಗಳು ಸೇರಿದಂತೆ ಕ್ರೀಡಾಂಗಣ ಮತ್ತು ಗ್ರಂಥಾಲಯಗಳನ್ನು ಸಂಪೂರ್ಣವಾಗಿ ಪರಿಶೀಲಿಸಿತ್ತು.

ನ್ಯಾಕ್‌ನ ಈ ಶ್ರೇಯಾಂಕ ಪಡೆಯುವಲ್ಲಿ ಶ್ರಮಿಸಿದ ಕಾಲೇಜಿನ ಎಲ್ಲರಿಗೂ ಹಾಗೂ ಕಾಲೇಜು ಅಭಿವೃದ್ಧಿ ಸಮಿತಿಯವರಿಗೂ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಆರ್. ವಿರೂಪಾಕ್ಷಪ್ಪ ಅವರು ಅಭಿನಂದಿಸಿದ್ದಾರೆ.

# ಹತ್ಯೆ ಯತ್ನ : ಸಂಸದನ ಅನರ್ಹತೆ

ನವದೆಹಲಿ, ಜ. 14 - ಹತ್ಯೆ ಯತ್ನ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿರುವ ಲಕ್ಷದ್ವೀಪದ ಸಂಸದ ಮೊಹಮ್ಮದ್ ಫೈಜಲ್ ಅನರ್ಹತೆಗೆ ಲೋಕಸಭಾ ಕಾರ್ಯಾಲಯ ಆದೇಶ ಹೊರಡಿಸಿದೆ.

ಜನವರಿ 11ರಿಂದ ಜಾರಿಗೆ ಬರುವಂತೆ ಲೋಕಸಭೆಯಿಂದ ಫೈಜಲ್ ಅನರ್ಹಗೊಳಿಸಿರುವುದಾಗಿ ತಿಳಿಸಲಾಗಿದೆ. ಲಕ್ಷದ್ವೀಪದ ಕವರಟ್ಟಿ ನ್ಯಾಯಾಲಯ ಶಿಕ್ಷೆ ವಿಧಿಸಿದ ದಿನದಿಂದ ಅನರ್ಹಗೊಳಿಸಲಾಗಿದೆ.

ಹತ್ಯೆ ಯತ್ನ ಪ್ರಕರಣ ಸಾಬೀತಾದ ನಂತರ ಫೈಜಲ್ ಸೇರಿದಂತೆ, ನಾಲ್ವರಿಗೆ ಲಕ್ಷದ್ವೀಪ ನ್ಯಾಯಾಲಯ ಹತ್ತು ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು.

2009ರ ಲೋಕಸಭಾ ಚುನಾವಣೆ ವೇಳೆ ಮಾಜಿ ಕೇಂದ್ರ ಸಚಿವ ಪಿ.ಎಂ. ಸಯೀದ್ ಅವರ ಅಳಿಯ ಮೊಹಮ್ಮದ್ ಸಲೀಹ್ ಹತ್ಯೆ ಯತ್ನದ ಪ್ರಕರಣದಲ್ಲಿ ಶಿಕ್ಷೆಯಾಗಿದೆ. ಎಲ್ಲಾ ದೋಷಿಗಳು ಸಂಬಂಧಿಗಳಾಗಿದ್ದಾರೆ.

# ಯೋಗಥಾನ್‌ನಲ್ಲಿ 10 ಲಕ್ಷ ಜನ ಭಾಗಿ

ಬೆಂಗಳೂರು,ಜ.14 - ಐತಿಹಾಸಿಕ, ವಿಶ್ವ ದಾಖಲೆಯ ಯೋಗಥಾನ್‌ಗೆ ವೇದಿಕೆ ಸಜ್ಜಾಗಿದ್ದು, ನಾಳೆ 10ಲಕ್ಷಕ್ಕೂ ಹೆಚ್ಚು ಜನರು ಏಕಕಾಲದಲ್ಲಿ ಯೋಗಾಚರಣೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಕ್ರೀಡಾ ಸಚಿವ ಡಾ.ನಾರಾಯಣಗೌಡ ತಿಳಿಸಿದ್ದಾರೆ.




ರಾಜ್ಯಾದ್ಯಂತ ನಾಳೆ ಏಕಕಾಲದಲ್ಲಿ ಜಿಲ್ಲಾ ಕ್ರೀಡಾಂಗಣಗಳಲ್ಲಿ ಯೋಗ ಕಾರ್ಯಕ್ರಮ ಹಮ್ಮಿಕ್ಕೊಳ್ಳಲಾಗಿದೆ. ಏಕಕಾಲದಲ್ಲಿ ಸುಮಾರು 5 ಲಕ್ಷ ಜನರು ಯೋಗ ಮಾಡುವ ಮೂಲಕ ವಿಶ್ವ ದಾಖಲೆ ನಿರ್ಮಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಆದರೆ, ನಿರೀಕ್ಷೆಗೂ ಮೀರಿದ ಬೆಂಬಲ ವ್ಯಕ್ತವಾಗಿದ್ದು, ಈಗಾಗಲೇ ಶಾಲಾ-ಕಾಲೇಜುಗಳು, ಸಂಘ ಸಂಸ್ಥೆಗಳು, ಯೋಗ ಪಟುಗಳು, ತರಬೇತುದಾರರು, ಶಿಕ್ಷಕರು, ಯೋಗ ಸಂಸ್ಥೆಗಳು ಸ್ವಯಂ ಸೇವಕರು ಸೇರಿದಂತೆ 13 ಲಕ್ಷಕ್ಕೂ ಹೆಚ್ಚು ಜನರು ನೋಂದಣಿ ಮಾಡಿಸಿದ್ದಾರೆ.

ಈಗಾಗಲೇ ಎಲ್ಲಾ ಸ್ಥಳಗಳಲ್ಲಿ ತಾಲೀಮು ಮಾಡಲಾಗಿದೆ ಎಂದು ಹೇಳಿದರು. ನಾಳೆ ಬೆಂಗಳೂರಿನ ಕಂಠೀರವ ಕ್ರೀಡಾಂಗಣ ದಲ್ಲಿ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು, ಸಚಿವ ಡಾ. ನಾರಾಯಣಗೌಡ ಅವರು ಯೋಗಥಾನ್ ಉದ್ಘಾಟಿಸಲಿದ್ದಾರೆ ಎಂದು ಹೇಳಿದರು.

## ನಗರದಲ್ಲಿ ನಾಳೆ ಕುರಿ - ಮೇಕೆ ಸಾಕಾಣಿಕೆ ತರಬೇತಿ

ದಾವಣಗೆರೆ, ಜ.14- ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ನಾಡಿದ್ದು ದಿನಾಂಕ 16 ಮತ್ತು 17 ರಂದು ಎರಡು ದಿನಗಳ ಕಾಲ ಕುರಿ ಮತ್ತು ಮೇಕೆ ತರಬೇತಿ ನಡೆಯಲಿದೆ. ವಿವರಕ್ಕೆ ಸಂಪರ್ಕಿಸುವ ದೂರವಾಣಿ: 08192-233787.

## ಜೋಡೋ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಸಂಸದ ಚೌಧರಿ ನಿಧನ



ಚಂಡೀಘಡ, ಜ. 14 - ಭಾರತ್ ಜೋಡೋ ಯಾತ್ರೆಯಲ್ಲಿ ಪಾಲ್ಗೊಂಡಿದ್ದ ಕಾಂಗ್ರೆಸ್ ಸಂಸದ ಸಂತೋಷ್ ಸಿಂಗ್ ಚೌಧರಿ ಅವರು ಹೃದಯಾಘಾತದಿಂದ ನಿಧನರಾಗಿದ್ದಾರೆ. ಅವರಿಗೆ 76 ವರ್ಷ ವಯಸ್ಸಾಗಿತ್ತು. ಎರಡು ಬಾರಿ ಸಂಸದರಾಗಿದ್ದ ಅವರು, ರಾಹುಲ್ ಗಾಂಧಿ ನೇತೃತ್ವದ ಪಾದಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಜಲಂಧರ್‌ನಿಂದ ಅವರು ಯಾತ್ರೆಯಲ್ಲಿ ಪಾಲ್ಗೊಂಡಿದ್ದರು. ಯಾತ್ರೆಯ ವೇಳೆ ಅವರಿಗೆ ಹೃದಯಾಘಾತವಾಗಿದೆ.

ತಕ್ಷಣವೇ ಅವರನ್ನು ಫಗ್ವಾರಾದಲ್ಲಿರುವ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ, ಆಸ್ಪತ್ರೆಗೆ ತಲುಪುವಷ್ಟರಲ್ಲೇ ಅವರು ಮೃತಪಟ್ಟಿದ್ದರು. ರಾಹುಲ್ ಗಾಂಧಿ ಅವರು ಮೃತರ ಮನೆಗೆ ತೆರಳಿ ಕುಟುಂಬದವರಿಗೆ ಸಾಂತ್ವನ ತಿಳಿಸಿದ್ದಾರೆ.


**SBI Life** Apne liye. Apno ke liye. **ಬೇಕಾಗಿದ್ದಾರೆ**
**ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಲೈಫ್ ಮಿತ್ರ ಹುದ್ದೆಗೆ**
ಸೂಕ್ತ ಅಭ್ಯರ್ಥಿಗಳು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ ಅಥವಾ ಅದಕ್ಕಿಂತ ಮೇಲ್ಪಟ್ಟ ತರಗತಿಯಲ್ಲಿ ಪಾಸಾದ, 21 ವರ್ಷ ಮೇಲ್ಪಟ್ಟವರು ಅರ್ಜಿ ಸಲ್ಲಿಸಲು ಅರ್ಹರು. ಗೃಹಿಣಿಯರು, ಪಿಗ್ಮಿ ಏಜೆಂಟರು, ಸಹಕಾರ ಬ್ಯಾಂಕ್ ಉದ್ಯೋಗಿಗಳು, ರಿಯಲ್ ಎಸ್ಟೇಟ್ ಏಜೆಂಟರು, ಖಾಸಗಿ ಶಾಲೆ ಶಿಕ್ಷಕ, ಶಿಕ್ಷಕಿಯರು, ಸೇಲ್ಸ್ ಎಕ್ಸಿಕ್ಯೂಟಿವ್, ಲೈಫ್ & ಜನರಲ್ ಇನ್ಶೂರೆನ್ಸ್ ಏಜೆಂಟರು ಹಾಗೂ ಇತರರು ಅರ್ಜಿ ಸಲ್ಲಿಸಬಹುದು.
**ಆಯ್ಕೆ ವಿಧಾನ : ಸಂದರ್ಶನ ಮತ್ತು ಆನ್‌ಲೈನ್ ಪರೀಕ್ಷೆ ನಡೆಸಲಾಗುವುದು**
Aadhar Card, Pan Card, Bank Pass Book, SSLC Marks Card, 2 Pass Port Size Photo ಇವುಗಳೊಂದಿಗೆ ಸಂಪರ್ಕಿಸಿರಿ :
ಮೊಬೈಲ್ : **89717 43663**



**REQUIRED**
*A progressive "Agro Based Food Processing Industry" seek the following employment.*
**H.R. Manager : MSW**
Experienced Candidates with computer knowledge and good communication skills, salary will commensurate with the qualification.
*The manager, HR*
**Green Agro Pack Pvt Ltd.,**
P.B. Road, Hebbalu Village, Davanagere (T&D)
Green AgroPack PRIVATE LIMITED
**Ph-8197446931, 99162 60574**
*EMail:hr@greenagro.com*








**ಸಂಕ್ರಾಂತಿ ಹಬ್ಬದ ಶುಭಾಶಯಗಳು**
ನಮ್ಮೆಲ್ಲಾ ಆತ್ಮೀಯ ಬಂಧು - ಮಿತ್ರರಿಗೂ, ಸರ್ವ ನಾಗರಿಕರಿಗೂ ಸಂಕ್ರಾಂತಿ ಹಬ್ಬದ ಹಾರ್ದಿಕ ಶುಭಾಶಯಗಳು...
**ಡಿ. ಕೆ. ಸಂಗಮೇಶ್ ಎಲಿಗಾರ್**
ಪತ್ರ ಬರಹಗಾರರು, ಸಬ್ ರಿಜಿಸ್ಟ್ರಾರ್ ಕಚೇರಿ ಆವರಣ, ಪಿ. ಬಿ. ರಸ್ತೆ, ದಾವಣಗೆರೆ. ಮೊ. : 98440 65710






**ಮಕರ ಸಂಕ್ರಾಂತಿ ಹಬ್ಬದ ಶುಭಾಶಯಗಳು**
ನಗರದ ಸರ್ವ ನಾಗರಿಕರಿಗೂ, ಆತ್ಮೀಯ ಬಂಧು-ಮಿತ್ರರಿಗೂ "ಸಂಕ್ರಾಂತಿ ಹಬ್ಬದ" ಹಾರ್ದಿಕ ಶುಭಾಶಯಗಳು...
**ಪರಶುರಾಮಪ್ಪ ಪೂಜಾರ್,** ಜಿಲ್ಲಾ ಪತ್ರ ಬರಹಗಾರರು, ಉಪ ನೋಂದಣಿ ಕಛೇರಿ ಆವರಣ, ದಾವಣಗೆರೆ. ಮೊ. : 89703 96509



**JOB Opportunity** TATA
Age limit - 35 to 60 Years. Work from anywhere in India
ಹಿರಿಯ ನಾಗರಿಕರಿಗೆ ಮತ್ತು ನಿವೃತ್ತಿ ಹೊಂದಿದವರಿಗೆ ಹಾಗೂ ಮಹಿಳೆಯವರಿಗೆ ವಿಶೇಷ ಆಹ್ವಾನ
**NEW BRANCH OPENED @ DAVANAGERE.**



- Enjoy unlimited earning opportunity
- Work from home / Part Time/ Full time or consulting Basis
- Zero intial capital investment
- Travel abroad to our conventions
- with Fixed salary Medical Benefits and incentives



No Registration Fee
Limited Seat Only
***Start your Journey from home maker to Business women***
***Start your second Innings of your life with a unique business opportunity***
Now you can earn an income even if you are retired, here is your unique opportunity to be self-reliant
**ಸುವರ್ಣಾವಕಾಶ**
ಹಿರಿಯ ನಾಗರಿಕರಿಗೆ, ಉದ್ಯಮಿಗಳಿಗೆ/ ಅನಿವಾಸಿ ಭಾರತೀಯರಿಗೆ/ಗೃಹಿಣಿಯರಿಗೆ ನಿವೃತ್ತ ರಾಜ್ಯ ಮತ್ತು ಕೇಂದ್ರ ಸರ್ಕಾರಿ ನೌಕರರಿಗೆ, ಖಾಸಗಿ ನೌಕರರು / ಶಿಕ್ಷಕರು / ವೈದ್ಯರು / ವಕೀಲರು / ನಿವೃತ್ತ ಬ್ಯಾಂಕ್ ನೌಕರರು ಮತ್ತು ಮಾಜಿ ರಕ್ಷಣಾಧಿಕಾರಿ ಇದೊಂದು ಸುವರ್ಣಾವಕಾಶ.
**9 8 4 4 7 4 5 8 5 6**

# ವಿಶ್ವಮಾನವ ಸಂದೇಶ ಸಾರುವ ಯೋಗಿ 'ವಿರಾಟಪುರ ವಿರಾಗಿ'




ಮನುಷ್ಯ ಮಹಾದೇವ ಆಗೋದು ಬೇಡ, ಮನುಷ್ಯನಾಗಿದ್ದರೆ ಸಾಕು. ಭೂಮಿ ಕೈಲಾಸ ಆಗೋದು ಬೇಡ, ಕಲ್ಯಾಣ ಆದರೆ ಸಾಕು. ವಿರಾಟಪುರ ವಿರಾಗಿ ಸಿನಿಮಾ ಹೇಗಿದೆ ಎನ್ನುವುದಕ್ಕೆ ಹಾನಗಲ್ಲ ಕುಮಾರಸ್ವಾಮಿಗಳು ಸಿನಿಮಾದಲ್ಲಿ ಆಡುವ ಈ ಮಾತೇ ಸಾಕೆನಿಸುತ್ತದೆ. ಸಮ ಸಮಾಜದ ಕನಸು ಕಂಡಿದ್ದ ಕುಮಾರ ಶ್ರೀಗಳ ಬದುಕಿನ ಕುರಿತಾದ ಈ ಸಿನಿಮಾ ಯಾವುದೇ ಉತ್ಪ್ರೇಕ್ಷೆ ಇಲ್ಲದೆ, ಅವರ ಸರಳ ಬದುಕನ್ನು ಪ್ರೇಕ್ಷಕನಿಗೆ ಸಲೀಸಾಗಿ ದಾಟಿಸುವಂತೆ ತಯಾರಾಗಿದೆ. ಮನುಷ್ಯ ಮನುಷ್ಯನ ನಡುವೆ ಕಂದಕವೇ ನಿರ್ಮಾಣವಾದ ಈ ಹೊತ್ತಿನಲ್ಲಿ, ಔಷಧಿ ರೂಪದಲ್ಲಿ ಬಂದಿದ್ದಾರೆ ಹಾನಗಲ್ಲ ಕುಮಾರಸ್ವಾಮಿಗಳು. ಹಾಗಾಗಿ ಇದೊಂದು ಕೇವಲ ಸಿನಿಮಾವಲ್ಲ, ನಮ್ಮೆಲ್ಲರ ಬದುಕಿಗೆ ಬೆಳಕು.

ಹಾನಗಲ್ಲ ಕುಮಾರಸ್ವಾಮಿಗಳ ಬದುಕಿನ ಕುರಿತಾದ ಸಿನಿಮಾ ಇದಾಗಿದ್ದರೂ, ಶ್ರೀಗಳ ಬದುಕನ್ನಷ್ಟೇ ಮುಖ್ಯವಾಗಿಸದೇ ಭಾರತದ ಅನನ್ಯತೆಯ ಬಹುತ್ವವನ್ನೂ ಈ ಸಿನಿಮಾ ಸಾರುತ್ತದೆ. ಬಡವ, ಶ್ರೀಮಂತ, ಜಾತಿ, ಧರ್ಮಗಳಾಚೆ ನಿಂತು, ಮಾನವ ಬಂಧುತ್ವದ ಆಶಯವನ್ನು ಸಾರುತ್ತದೆ. ಮಡಿ, ಮೈಲಿಗೆಯಾಚೆ ನಿಂತು ಮನದ ಮಂಗಳತ್ವಕ್ಕೆ ಹೊಸ ಭಾಷ್ಯ ಬರೆಯುತ್ತದೆ. ಈ ಕಾರಣಕ್ಕಾಗಿ ವಿರಾಟಪುರ ವಿರಾಗಿ ಸಿನಿಮಾ ನೋಡುವ ಜರೂರತ್ತು ಇದೆ.

ವಿರಾಟಪುರ ವಿರಾಗಿ ಇದೊಂದು ಸಾಮಾನ್ಯ ಸಿನಿಮಾವಲ್ಲ ಎನ್ನುವುದಕ್ಕೆ ಹಲವಾರು ಉದಾಹರಣೆಗಳನ್ನು ಕೊಡುತ್ತಾ ಹೋಗಬಹುದು. ಸ್ವಾಮಿಯೊಬ್ಬರ ಸಿನಿಮಾ ಅಂದಾಕ್ಷಣ, ಅಲ್ಲಿ ಪವಾಡಗಳು ಸೃಷ್ಟಿಯಾಗುತ್ತವೆ. ಪ್ರಭಾವಳಿಗಳು ಮಿಂಚುತ್ತವೆ. ಏನೆಲ್ಲ ನಂಬಿಸುವುದಕ್ಕೆ ಹೋಗುತ್ತೇವೆ. ಆದರೆ, ಈ ಸಿನಿಮಾದಲ್ಲಿ ನಿರ್ದೇಶಕ ಬಿ.ಎಸ್.ಲಿಂಗದೇವರು ಇದ್ಯಾವುದನ್ನೂ ಮಾಡುವುದಿಲ್ಲ. ಹಾನಗಲ್ಲ ಕುಮಾರಸ್ವಾಮಿಗಳು ಹೇಗೆ ಬದುಕಿದ್ದರೋ ಹಾಗೆಯೇ ತೋರಿಸಿದ್ದಾರೆ. ಪ್ರೇಕ್ಷಕನನ್ನು ಮೆಚ್ಚಿಸಲು ಅವಕಾಶವಿರುವ ಎಲ್ಲ ತಂತ್ರಗಳನ್ನು ಆಚೆ ಇಟ್ಟು, ನಿಜ ಸಂಗತಿಗಳನ್ನು ಹೇಳುತ್ತಾ ಹೋಗುತ್ತಾರೆ. ಈ ಕಾರಣದಿಂದಾಗಿ ವಿರಾಟಪುರ ವಿರಾಗಿ ಸಿನಿಮಾ ನಮಗೆ ಆಪ್ತವಾಗುತ್ತಾ ಹೋಗುತ್ತದೆ. ದೈವತ್ವದ ತುತ್ತ ತುದಿಯಲ್ಲಿ ನಿಲ್ಲಿಸುತ್ತದೆ. ಪಾತ್ರಗಳು ನಕ್ಕರೆ ನಾವೂ ನಗುತ್ತೇವೆ, ಅವುಗಳು ಅತ್ತರೆ ನಮ್ಮ ಕಣ್ಣುಗಳು ತೇವಗೊಳ್ಳುತ್ತವೆ. ಆ ರೀತಿಯಲ್ಲಿ ಇಡೀ ಸಿನಿಮಾ ಮೂಡಿ ಬಂದಿದೆ.

ಹಾನಗಲ್ಲ ಕುಮಾರಸ್ವಾಮಿಗಳ ಭವ್ಯ ಚರಿತ್ರೆ ಕೇವಲ ಆ ಕಾಲಕ್ಕೆ ಮಾತ್ರ ಸಲ್ಲುವಂಥದ್ದಲ್ಲ, ಈ ಕಾಲದಲ್ಲೂ ಪ್ರಚಲಿತವಿರುವಂಥದ್ದು. ಸಂನ್ಯಾಸಿಯೊಬ್ಬರು ಹೇಗಿರಬೇಕು, ಯೋಗಿಯಾದವನು ಯಾವ ರೀತಿಯಲ್ಲಿ ಬದುಕಬೇಕು, ಮಠಗಳ ಕೆಲಸವೇನು? ಸಮಾಜಕ್ಕೂ ಮತ್ತು ಮಠಗಳಿಗೂ ಇರುವ ವ್ಯತ್ಯಾಸವೇನು? ಗುರುವಾದವನ ಕೆಲಸ ಯಾವುದು? ಹೀಗೆ ಹತ್ತಾರ ವಿಷಯಗಳನ್ನು ಈ ಸಿನಿಮಾ ಚರ್ಚಿಸುತ್ತದೆ. ಈ ಹೊತ್ತಿನ ಮಠಗಳಿಗೆ ಮತ್ತು ಮಠಾಧೀಶರಿಗೆ ಒಂದು ಪಾಠದಂತೆ ಸಿನಿಮಾ ಅನುಭವ ಕೊಡುತ್ತದೆ. ಕೇವಲ ಮಠ ಹಾಗೂ ಮಠಾಧೀಶರಿಗೆ ಮಾತ್ರವಲ್ಲ, ಗುರು ಮತ್ತು ಶಿಷ್ಯ ಪರಂಪರೆಯ ಮಹತ್ವವನ್ನು ಇದು ತಿಳಿಸುತ್ತದೆ.

ಗಾಂಧಿ ಕಂಡ ಕನಸನ್ನು ಆಗಿನ ಕಾಲದಲ್ಲಿ ಹಾನಗಲ್ಲ ಕುಮಾರಸ್ವಾಮಿಗಳು ಜಾರಿಗೆ ತಂದಿದ್ದರಲ್ಲ ಅನ್ನುವುದೇ ಸೋಜಿಗ. ಥೇಟ್ ಗಾಂಧಿಯಂತೆಯೇ ಬದುಕಿದವರು ಶ್ರೀಗಳು, ಬಸವಣ್ಣನ ಕನಸುಗಳನ್ನು ಸಾಕಾರ ಮಾಡಿದವರು. ಹಾಗಾಗಿ ಹಾನಗಲ್ಲ ಕುಮಾರಸ್ವಾಮಿಗಳು ಏಕಕಾಲಕ್ಕೆ ಗಾಂಧಿಯಂತೆ, ಬಸವಣ್ಣನಂತೆ ಕಾಣುತ್ತಾ ಹೋಗುತ್ತಾರೆ. ಹಾಗೆ ಕಾಣುವಂತೆ ನಿರ್ದೇಶಕರು ದೃಶ್ಯಗಳನ್ನು ಕಟ್ಟುತ್ತಾ ಹೋಗುತ್ತಾರೆ.

ಹಾನಗಲ್ಲ ಕುಮಾರಸ್ವಾಮಿಗಳ ಜೀವನವನ್ನು ಬಾಲ್ಯದಿಂದ ಶುರು ಮಾಡದೇ, ಚಿತ್ರಕಥೆಯಲ್ಲಿ ತಿರುವು ಮುರುವಾಗಿ ಹೇಳಿ ಪ್ರೇಕ್ಷಕನಿಗೆ ಹೊಸ ಅನುಭವವನ್ನು ಕಟ್ಟಿಕೊಡುತ್ತಾರೆ ನಿರ್ದೇಶಕ ಲಿಂಗ ದೇವರು. ಕುಮಾರ ಶ್ರೀಗಳ ಪಾತ್ರ ಮಾಡಿದ ಸುಚೇಂದ್ರ ಪ್ರಸಾದ್ ಥೇಟ್ ಶ್ರೀಗಳಂತೆ ಕಾಣು ತ್ತಾರೆ. ಈ ಸಿನಿಮಾದ ಮತ್ತೊಂದು ಹೆಗ್ಗಳಿಕೆ ಅಂದರೆ, ಬಹುತೇಕ ಪಾತ್ರಗಳನ್ನು ಈ ಹೊತ್ತಿನ ನಿಜವಾದ ಪೀಠಾಧಿಪತಿಗಳೇ ನಿರ್ವಹಿಸಿದ್ದಾರೆ. ಅನುಭವಿ ಕಲಾವಿದರಂತೆ ಅವರುಗಳು ಪಾತ್ರ ಮಾಡಿದ್ದಾರೆ. ಪುಟ್ಟ ಪಾತ್ರದಿಂದ ಹಿಡಿದು ಮುಖ್ಯ ಪಾತ್ರಗಳ ತನಕ ಎಲ್ಲ ಕಲಾವಿದರು ಅಚ್ಚುಕಟ್ಟಾಗಿ ನಟಿಸಿದ್ದಾರೆ.

ಇದು ಭಕ್ತಿ ಪ್ರಧಾನ ಜೊತೆಗೆ ಸಂಗೀತ ಪ್ರಧಾನ ಸಿನಿಮಾ ಕೂಡ. ಸಿನಿಮಾದ ತೂಕವನ್ನು ಮತ್ತಷ್ಟು ಹೆಚ್ಚಿಸುವಂತೆ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ ಸಂಗೀತ ಸಂಯೋಜನೆ ಮಾಡಿದ್ದಾರೆ. ಹಾಡುಗಳು, ವಚನಗಳು ಸಿನಿಮಾದ ಮೆರಗನ್ನು ಮತ್ತಷ್ಟು ಹೆಚ್ಚಿಸಿವೆ. ಆ ಕಾಲ ಘಟ್ಟವನ್ನು ಅದ್ಭುತವಾಗಿ ಕಟ್ಟಿಕೊಟ್ಟಿದ್ದಾರೆ ಕಲಾ ನಿರ್ದೇಶಕರು. ಅಷ್ಟೇ ಸೊಗಸಾಗಿ ಅದನ್ನು ಸೆರೆ ಹಿಡಿದಿದ್ದಾರೆ ಸಿನಿಮಾಟೋಗ್ರಾಫರ್ ಅಶೋಕ್ ರಾಮನ್.

ಇದು ನಿಜಕ್ಕೂ ಸಿನಿಮಾವಲ್ಲ, ಬದುಕಿನ ಬೆಳಕು. ಈ ಬೆಳಕು ನಿಮ್ಮದಾಗಲು, ಕಡ್ಡಾಯವಾಗಿ ಸಿನಿಮಾ ನೋಡಲೇ ಬೇಕು. ದಾವಣಗೆರೆ ಗೀತಾಂಜಲಿ ಚಿತ್ರಮಂದಿರದಲ್ಲಿ ಪ್ರತಿದಿನ ರಾತ್ರಿ 8.30ಕ್ಕೆ ಪ್ರದರ್ಶನವಿದೆ.

-ವೀಕ್ಷಕ

## ಸ್ವಾಮೀಜಿ 100 ಪರ್ಸೆಂಟ್ ರಾಜಕೀಯ

**(3ನೇ ಪುಟದಿಂದ)** ಇದರಿಂದ ಸಮಾಜಕ್ಕೆ ತಪ್ಪು ಸಂದೇಶ ರವಾನೆಯಾಗುತ್ತದೆ ಎಂದಿದ್ದಾರೆ.

ಮೀಸಲಾತಿ ಬಗ್ಗೆ ಮುಖ್ಯಮಂತ್ರಿ ತೋರಿರುವ ಕಾಳಜಿಯನ್ನು ಅಭಿನಂದಿಸ ಬೇಕಿತ್ತು. ಆದರೆ, ತೆಗಳುತ್ತಿರುವುದು ಮನಸ್ಸಿಗೆ ನೋವಾಗಿದೆ. ನಿನ್ನೆ ಅವರು ಶಿಗ್ಗಾವಿಯಲ್ಲಿ ನಡೆಸಿದ ಹೋರಾಟವನ್ನು ಖಂಡಿಸುತ್ತೇನೆ ಎಂದಿದ್ದಾರೆ.

2014ರಲ್ಲಿ ಸಿದ್ದರಾಮಯ್ಯ ಅವರು ಮೀಸಲಾತಿ ಕೊಡಲೇ ಬಾರದು ಎಂದಿದ್ದರು. ಸಿದ್ದರಾಮಯ್ಯ ಅವರ ಬಾಯಿಂದ ಮೀಸಲಾತಿಯ ಒಂದು ಮಾತು ಬರಲಿ ಎಂದು ಸ್ವಾಮೀಜಿ ಏಕೆ ಒತ್ತಾಯಿಸುತ್ತಿಲ್ಲ? ಬಿಜೆಪಿಯನ್ನೇ ಏಕೆ ಗುರಿ ಮಾಡಲಾಗುತ್ತಿದೆ ಎಂದು ಪಾಟೀಲ್ ಪ್ರಶ್ನಿಸಿದ್ದಾರೆ.

ಈ ಟೀಕೆಗಳ ಬಗ್ಗೆ ಪ್ರತಿಕ್ರಿಯಿಸಿರುವ ಸ್ವಾಮೀಜಿ, ನಮ್ಮ ಪ್ರಾಮಾಣಿಕ ಹಾಗೂ ನಿಸ್ವಾರ್ಥ ಹೋರಾಟ ನೋಡಿ ಸಹಿಸಲಾಗದೇ ಟೀಕಿಸುತ್ತಿದ್ದಾರೆ. ಸಮಾಜವನ್ನು ನಿರ್ಲಕ್ಷಿಸುವುದು ಎಂದರೆ ತಾಯಿಗೆ ದ್ರೋಹ ಬಗೆದಂತೆ. ಹಾದಿ ಬೀದಿ ಟೀಕೆ ಮಾಡುವವರ ಬಗ್ಗೆ ಸಮಾಜ ಒಂದು ತೀರ್ಮಾನಕ್ಕೆ ಬರಲಿದೆ ಎಂದಿದ್ದಾರೆ.

ಸಮಾಜದ ಬಗ್ಗೆ ಪ್ರಾಮಾಣಿಕ ಹೋರಾಟ ಮಾಡುವವರೇ ಗುರುಗಳು ಹಾಗೂ ನಾಯಕರು ಎಂದು ಜನ ತೀರ್ಮಾನಿಸಿದ್ದಾರೆ. ಉಪದ್ವ್ಯಾಪಿ ಹೇಳಿಕೆಗಳಿಗೆ ತಕ್ಕ ಉತ್ತರ ಕೊಡಲಿದ್ದಾರೆ ಎಂದರು.

## ಉಗ್ರವಾದಿ ಸಂಘಟನೆಯ ನಾಲ್ವರಿಗೆ ಶಿಕ್ಷೆ

ನವದೆಹಲಿ, ಜ. 14 – ಉಗ್ರವಾದಿ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಜಮಾತ್-ಉಲ್ ಮುಜಾಹಿದ್ದೀನ್ ಬಾಂಗ್ಲಾ ದೇಶ್ ಸಂಘಟನೆಯ ನಾಲ್ವರಿಗೆ ಕರ್ನಾಟಕ ವಿಶೇಷ ನ್ಯಾಯಾಲಯ ಏಳು ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ ಎಂದು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್.ಐ.ಎ.) ತಿಳಿಸಿದೆ.

ಕಡೋರ್ ಕಾಜಿ, ಮುಸ್ತಫಿಜುರ್ ರಹಮಾನ್, ಆದಿಲ್ ಶೇಖ್ ಹಾಗೂ ಅಬ್ದುಲ್ ಕರೀಮ್ ಎಂಬುವವರಿಗೆ ಶಿಕ್ಷೆ ಹಾಗೂ ದಂಡ ವಿಧಿಸಲಾಗಿದೆ.

ಬೆಂಗಳೂರಿನಲ್ಲಿದ್ದ ಉಗ್ರವಾದಿ ಸಂಘಟನೆಯ ಅಡಗುತಾಣದಿಂದ ಇವರನ್ನು ಬಂಧಿಸಲಾಗಿತ್ತು. ಬಂಧಿತರಿಂದ ಬಾಂಬ್ ತಯಾರಿಸಲು ಬಳಸಲಾಗುವ ಸಾಮಗ್ರಿಗಳನ್ನು ವಶಪಡಿಸಿಕೊಳ್ಳಲಾಗಿತ್ತು.

ಈ ಬಗ್ಗೆ ಕರ್ನಾಟಕ ಪೊಲೀಸರು ಜುಲೈ 7, 2019ರಲ್ಲಿ ಪ್ರಕರಣ ದಾಖಲಿಸಿದ್ದರು. ಜುಲೈ 29ರಂದು ಪ್ರಕರಣವನ್ನು ಎನ್.ಐ.ಎ.ಗೆ ವರ್ಗಾಯಿಸಲಾಗಿತ್ತು.

ಬೆಂಗಳೂರಿನ ಹಲವೆಡೆ ಡಕಾಯಿತಿ ಮಾಡಿ ಉಗ್ರವಾದಕ್ಕೆ ಹಣ ಸಂಗ್ರಹಿಸುತ್ತಿದ್ದರು. ಉಗ್ರವಾದಿ ಚಟುವಟಿಕೆಗಳಿಗಾಗಿ ಸ್ಫೋಟಕಗಳನ್ನು ಸಂಗ್ರಹಿಸುವ ಜೊತೆಗೆ, ರಾಕೆಟ್ ಲಾಂಚರ್ ಒಂದನ್ನು ಪರೀಕ್ಷೆಗೆ ಒಳಪಡಿಸಿದ್ದರು ಎಂದು ಎನ್.ಐ.ಎ. ತಿಳಿಸಿತ್ತು. ಈ ಪ್ರಕರಣದಲ್ಲಿ ಒಟ್ಟು 11 ಜನರನ್ನು ಬಂಧಿಸಿ ಆರೋಪ ಪಟ್ಟಿ ದಾಖಲಿಸಲಾಗಿದೆ. ಇವರಲ್ಲಿ ಮೂವರಿಗೆ ಈ ಹಿಂದಿನ ಪ್ರಕರಣದಲ್ಲಿ ಶಿಕ್ಷೆಯಾಗಿದೆ.

## ಪತ್ರಿಕಾ ವಿತರಕ ಸುಧಾಕರ್‌ಗೆ ಸನ್ಮಾನ



ದಾವಣಗೆರೆ, ಜ. 14 - ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ಶಿವಯೋಗ ಮಂದಿರದಲ್ಲಿ ನಡೆದ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಪತ್ರಿಕಾ ವಿತರಕ ಸುಧಾಕರ್. ಆರ್. ಅವರನ್ನು ಸನ್ಮಾನಿಸಲಾಯಿತು.

ವೇದಿಕೆ ರಾಜ್ಯಾಧ್ಯಕ್ಷ ಟಿ.ಎ ನಾರಾಯಣ ಗೌಡ, ಜಿಲ್ಲಾಧ್ಯಕ್ಷ ರಾಮೇಗೌಡ ಮತ್ತು ಇತರರು ಉಪಸ್ಥಿತರಿದ್ದರು.

## ಪದವಾಣಿ-50

ರಚನೆ : ಮಮತಾ ರಾಧಾಕೃಷ್ಣ ದಾವಣಗೆರೆ.

| | | | | | | | | |
|---|---|---|---|---|---|---|---|---|
| 1 | | | 2 | ■ | 3 | | | 4 |
| | ■ | ■ | | ■ | | ■ | ■ | |
| | ■ | ■ | | ■ | | ■ | ■ | |
| 5 | | | | ■ | 6 | | | |
| ■ | ■ | ■ | ■ | ■ | ■ | ■ | ■ | ■ |
| 7 | | | 8 | ■ | 9 | | | 10 |
| | ■ | ■ | | ■ | | ■ | ■ | |
| | ■ | ■ | | ■ | | ■ | ■ | |
| 11 | | | | ■ | 12 | | | |

**ಎಡದಿಂದ ಬಲಕ್ಕೆ :**
1) ವಸಿಷ್ಠ ಮುನಿಯ ಪತ್ನಿ 4
3) ಸಿಖ್ಖರ ದೇವಾಲಯ 4
5) ಹಾಸ್ಯಗಾರ 4
6) ಅಡುಗೆ ಮನೆ 4
7) ಸತ್ಸಂಪ್ರದಾಯ ತಿರುಗಿ ಬಂದಿದೆ 4
9) ವಿಷ್ಣುವಿನ ಹಲವು ನಾಮಗಳಲ್ಲಿ ಒಂದು 4
11) ಹಿಂದೂ ಪಂಚಾಂಗದ ಹದಿಮೂರನೇ ದಿನ 4
12) ಮತ್ತು ಬರಿಸುವ ಕಾಳು 4

**ಮೇಲಿನಿಂದ ಕೆಳಕ್ಕೆ :**
1) ಥಟ್ ಅಂತ ಪದ್ಯ ಬರೆಯುವವ 4
2) ಎಳ್ಳುನೀರು 4
3) ಗುರುಗಳ ದಿನ 4
4) ರತಿಯ ಗಂಡನಾಗಿ ಮನ್ಮಥ 4
7) ಯುದ್ಧಕ್ಕೆ ರೂಪಿಸಿದ ನೀತಿ 4
8) ಪಟಾಕಿ ತಯಾರಿಕೆಗೆ ಹೆಸರಾದ ಊರು 4
9) ರಾಗವಲ್ಲ, ಮಾಣಿಕ್ಯ 4
10) ನಂಬಿಕೆ ಹೀಗೆ ಬಂದಿದೆ 4

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 49ರ ಉತ್ತರಗಳು :**

ಎಡದಿಂದ ಬಲಕ್ಕೆ: 1) ರಸನ 5) ಅತಿಶಯ 6) ಕಡುಕೋಪ 8) ನದಸ (ಸದನ) 9) ವಿಷ 10) ಏತ 11) ಸುಲಹೊ (ಹೊಲಸು) 13) ಮಮಕಾರ 15) ಸವಕಲು 17) ರುಜಿನ.

ಮೇಲಿನಿಂದ ಕೆಳಕ್ಕೆ: 1) ರಸಾಯನ 2) ನಪುಂಸಕ 3) ಕುಂತಿ 4) ತಿಕೋ (ಕೋತಿ) 5) ಅಲ್ಪವಿರಾಮ 7) ಪರ್ವತಸಾಲು 11) ಸುರತರು 12) ಹೊಸತನ 14) ಮದ್ದು 16) ಕಪ್ಪು.

**ಓದುಗರ ಗಮನಕ್ಕೆ** ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿ ಯಾಗುವುದಿಲ್ಲ. -ಜಾಹೀರಾತು ವ್ಯವಸ್ಥಾಪಕರು

**ಬಿಲ್ಡಿಂಗ್ ಬಾಡಿಗೆಗಿದೆ**
ಚಾಮರಾಜಪೇಟೆ ಸರ್ಕಲ್ ಹತ್ತಿರ, ಕಲ್ಲೇಶ್ವರ ಕಿರಾಣಿ ಅಂಗಡಿ ಮೇಲ್ಭಾಗದಲ್ಲಿ 3 ಮಹಡಿ ಇರುವ 10,000 ಚದುರ ಅಡಿ ವಿಶಾಲವಾದ ಜಾಗ ಇರುವ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ : ಮೊ.: 98453 17181

**ಬೇಕಾಗಿದ್ದಾರೆ**
ಪಿಯುಸಿ ಆಗಿರುವ ಹುಡುಗರು ಕೌಂಟರ್ ಸೇಲ್ಸ್‌ಮನ್ ಹುದ್ದೆಗೆ ಬೇಕಾಗಿದ್ದಾರೆ. ಆಸಕ್ತರು ಬಯೋಡಾಟಾ ಹಾಗೂ ಪರಿಚಯಸ್ಥರೊಂದಿಗೆ ಸಂಪರ್ಕಿಸಿ : ಆರ್ಚೀಸ್ ಗ್ಯಾಲರಿ, ಶರಾವತಿ ಲೇಡಿಸ್ ಹಾಸ್ಟೆಲ್ ಎದುರು, ಮಾಮಾಸ್ ಜಾಯಿಂಟ್ ರಸ್ತೆ, ದಾವಣಗೆರೆ. ಮೊ : 96324-33166. ಆಕರ್ಷಕ ವೇತನ ನೀಡಲಾಗುವುದು.

**ಕೆಲಸಕ್ಕೆ ಬೇಕಾಗಿದ್ದಾರೆ**
ದಾವಣಗೆರೆ ಶಾಖೆಯಲ್ಲಿ ರಿಕವರಿ & ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಶಿವಸಂಗಮ ಚಿಟ್ಸ್ ಪ್ರೈ.ಲಿ., ಶಿವಸಂಗಮ ಫೈನಾನ್ಸ್ (ರಿ.) ಸ್ಥಳ : ಡಾ|| ಬಿ.ಆರ್. ಶಿವಶಂಕರ್ ನಾಗರತ್ನಮ್ಮ ಸಂಕೀರ್ಣ, 4ನೇ ಮೇನ್, ಪಿ.ಜೆ. ಬಡಾವಣೆ, ರಾಂ & ಕೋ ಸರ್ಕಲ್ ಹತ್ತಿರ, ದಾವಣಗೆರೆ. ಶಾಖೆಗೆ ಸಂಪರ್ಕಿಸಿ : ಬೆಳಿಗ್ಗೆ 10 ರಿಂದ ಸಂಜೆ 6ರ ವರೆಗೆ 8197220933, 7353329440

**ಸೈಟು ಮಾರಾಟಕ್ಕಿದೆ**
ಶಾಮನೂರು ಬೈಪಾಸ್ ಪಕ್ಕ, ಸರ್ಕಾರಿ ನೌಕರರ ಬಡಾವಣೆ 'ಬಿ' ಬ್ಲಾಕ್‌ನಲ್ಲಿ ಪೂರ್ವಕ್ಕೆ 24x30 ಅಳತೆಯ ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ : 99021 13374

**ಮನೆ ಲೀಸ್‌ಗೆ ಇದೆ**
ಸರಸ್ವತಿ ಬಡಾವಣೆ 'ಬಿ' ಬ್ಲಾಕ್ ಕಾಳಿದಾಸ ಸರ್ಕಲ್ ಹತ್ತಿರ, ರತ್ನ ಡ್ರೈ ಕ್ಲೀನ್ ಪಕ್ಕ, ಪೂರ್ವ ದಿಕ್ಕಿನ 2 ಬೆಡ್ ರೂಮಿನ ಮನೆ ಲೀಸ್‌ಗಿದೆ. ಸಂಪರ್ಕಿಸಿ. 94482 33495

**1BHK ಮನೆ ಲೀಸ್‌ಗೆ ಇದೆ**
ಬನಶಂಕರಿ ಬಡಾವಣೆ ವಿದ್ಯಾನಗರದಲ್ಲಿ ವಿವೇಕಾನಂದ ಶಾಲೆ ಹತ್ತಿರ 1 BHK ಮನೆ ಲೀಸ್‌ಗೆ ಇದೆ. ಸಂಪರ್ಕಿಸಿ. 91485 64617

**ಮನೆ ಬಾಡಿಗೆಗೆ ಇದೆ**
ಎಂ.ಸಿ.ಸಿ. ಎ ಬ್ಲಾಕ್, ಲೂರ್ಡ್ಸ್‌ಬಾಯ್ಸ್ ಸ್ಕೂಲ್ ಹತ್ತಿರ, ಗ್ರೌಂಡ್ ಫ್ಲೋರ್, ದಾವಣಗೆರೆ. 2BHK ಮನೆ ಬಾಡಿಗೆಗೆ ಇದೆ. ಫೋ.: 97431 53997

**ಶ್ರೇಯಸ್ ಉದರ, ಲಿವರ್, ಕರುಳು ರೋಗಗಳ ಚಿಕಿತ್ಸಾ ಕೇಂದ್ರ**
ಡಾ. ಇ.ಆರ್. ಸಿದ್ದೇಶಿ
M.D. (MED), D.M. (Gastro), F.A.C.G. (USA), P.G.C.C. Diab. Care (Aust)
ಉದರ, ಲಿವರ್, ಕರಳು, ಪ್ಯಾನ್‌ಕ್ರಿಯಾಸ್, ಎಂಡೋಸ್ಕೋಪಿ, ಸಕ್ಕರೆ ಕಾಯಿಲೆ ತಜ್ಞರು
8th Main, 8th Cross, P.J. Extension, Davangere.
08192-237325, 94837 23166

**For Rent on P.B Road**
ಶ್ರೀಗಂಧ ಲಾಡ್ಜ್ ಪಕ್ಕ
Basement : 4000 Sq.ft
Ground Floor : 800 Sq.Ft
First Floor : 4000 Sq.ft
Second Floor : 4000 Sq.ft
P.J Extension, 8th Main, 8th Cross, 2000 Sq.ft 1St Floor
Contact : 94480 28103

**ಸೈಟುಗಳ ಮಾರಾಟಕ್ಕೆ**
ಸರಸ್ವತಿ ನಗರ 30x50, 30x38 ಸಾಯಿಬಾಬಾ 30x40, ಜಯನಗರ, 30x40, 40x50, 20x30 ಸೈಟುಗಳು ಮಾರಾಟಕ್ಕಿವೆ. ಏಜೆಂಟ್, ಶಾಂತಪ್ಪ ಪೂಜಾರಿ ಫೋ. : 99647 29123

**ಮನೆ ಬಾಡಿಗೆಗೆ ಇದೆ**
2 BHK 1 ಮತ್ತು 2ನೇ ಮಹಡಿ ಕಾರ್ ಪಾರ್ಕಿಂಗ್ ಲಭ್ಯವಿದೆ. ಎಂ.ಸಿ.ಸಿ. ಬಿ ಬ್ಲಾಕ್ ಕುವೆಂಪು ನಗರ, ದಾವಣಗೆರೆ. ಫೋ. : 78997 41753

**ಶಕ್ತಿ ಬೋರ್‌ವೆಲ್**
ಮನೆ ಒಳಗೆ ಮತ್ತು ಹೊರಗೆ ಕೊರೆಯುವುದು
300 ರಿಂದ 350 ಅಡಿ, ಬಿಟ್ ಸೈಜ್ 4.5
99640 78484
95906 15776

**Wanted Receptionist**
E-mail correspondence with fluency in English for Telecalling, Wanted Female Candidates with knowledge of PowerPoint Presentation. Contact : 93530-55008

**ಸೈಟುಗಳು ಮಾರಾಟಕ್ಕಿವೆ**
ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 30x40 ಪಶ್ಚಿಮ, ಶಾಮನೂರು ಹತ್ತಿರ ನಂಜುಂಡಪ್ಪ ಲೇಔಟ್‌ನಲ್ಲಿ 30x50 ಪಶ್ಚಿಮ, ಸರ್ಕಾರಿ ನೌಕರರ ಬಡಾವಣೆಯಲ್ಲಿ 30x40 ಅಳತೆಯ ಸೈಟುಗಳು ಮಾರಾಟಕ್ಕಿವೆ. 99866 17483, 78996 81386

**Ground Floor for rent**
Suitable for office/Clinic Available for rent.
Size : 45x55 fts #451, 7th cross, 9th main, P.J Extension, Dvg.
94480 55479 98804 66799

**ಮನೆ ಬಾಡಿಗೆಗೆ ಇದೆ**
ದಾವಣಗೆರೆ ಬಿಐಇಟಿ ಹತ್ತಿರ, ಸ್ವಾಮಿ ವಿವೇಕಾನಂದ ಬಡಾವಣೆ, 3ನೇ ಮೇನ್, 1ನೇ ಕ್ರಾಸ್, ನಂ. 1854/2 ರಲ್ಲಿ 2 BHK ಮನೆ ಬಾಡಿಗೆಗೆ ಇದೆ. ಫೋ. : 97420 90943

**ಸೈಟ್ ಮಾರಾಟಕ್ಕೆ**
15x40 =600 ಅಡಿ. ಅಡಿಗೆ 2650 ಸುಬ್ರಮಣ್ಯ ನಗರ ಹೈಟೆಕ್ ಆಸ್ಪತ್ರೆ ಹತ್ತಿರ, ದಾವಣಗರೆ ವಿಚಾರಿಸಿ. 80505 91277 ಕೆಂಪು ಮಣ್ಣು ಇದೆ.

**ಜಗಳೂರು: ಜಮೀನು ಮಾರಾಟಕ್ಕಿದೆ**
ಜಗಳೂರು ಪಟ್ಟಣದಿಂದ 19 ಕಿ.ಮೀ. & 13ನೇ ರಾಷ್ಟ್ರೀಯ ಹೆದ್ದಾರಿಯಿಂದ 10 ಕಿ.ಮೀ. ಇರುವ ಚಿಕ್ಕಮಲ್ಲನಹೊಳೆ ಗ್ರಾಮದ ಮುಖ್ಯರಸ್ತೆಗೆ 5.38 ಎಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ: 94486 68168

**ನಂದಿನಿ ಹೋಟೆಲ್ ಬೇಕಾಗಿದ್ದಾರೆ**
ನಂದಿನಿ ಹೋಟೆಲ್‌ನಲ್ಲಿ ಅಡುಗೆ ಮಾಡಲು ಅಡುಗೆ ಭಟ್ಟರು ಪುರುಷರು ಬೇಕಾಗಿದ್ದಾರೆ ಮತ್ತು ಚಪಾತಿ, ಹೋಳಿಗೆ ಮಾಡಲು ಮಹಿಳೆಯರು ಬೇಕಾಗಿದ್ದಾರೆ. ಶಕ್ತಿನಗರ, ದಾವಣಗೆರೆ. ಫೋ. : 94835 32186

**ಮನೆ ಮಾರಾಟಕ್ಕಿದೆ**
3 BHK Duplex, S.S. Layout, B Block (ಮಧ್ಯವರ್ತಿಗಳಿಗೆ ಅವಕಾಶವಿಲ್ಲ)
98445 73524
98444 40988

**ಮನೆ ಬಾಡಿಗೆ/ಲೀಸ್‌ಗಿದೆ**
ಸರಸ್ವತಿ ಬಡಾವಣೆ, ಜಯನಗರ, ಶಿವಕುಮಾರಸ್ವಾಮಿ ಬಡಾವಣೆ, ಶಕ್ತಿ ನಗರ, ಆಂಜನೇಯ ಬಡಾವಣೆ, ಸಿದ್ದವೀರಪ್ಪ ಬಡಾವಣೆಯಲ್ಲಿ ಮನೆಗಳು ಬಾಡಿಗೆಗೆ/ಲೀಸ್‌ಗೆ ಇವೆ. ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಮನೆಗಳು ಬಾಡಿಗೆಗಿವೆ. 78997 60749, 99726 75759

**ಬೇಕಾಗಿದ್ದಾರೆ**
ಜ್ಯೂಸ್ ಸ್ಟಾಲ್ ನಲ್ಲಿ ಕೆಲಸ ಮಾಡಲು ಅನುಭವ ಇರುವ ಹುಡುಗರು ಬೇಕಾಗಿದ್ದಾರೆ ಸಂಪರ್ಕಿಸಿ: ಅದಿತಿ ಜ್ಯೂಸ್ ಸ್ಟಾಲ್ ಬಿನ್ನಿ ಕಂಪನಿ ರಸ್ತೆ ದಾವಣಗೆರೆ 95358 50426

**ಮನೆ ಬಾಡಿಗೆಗೆ ಇದೆ**
ಪಿ.ಜೆ ಬಡಾವಣೆ ಚಿಗಟೇರಿ ಹಾಸ್ಪಿಟಲ್ ರಸ್ತೆಯಲ್ಲಿರುವ ಕಾರ್ನರ್ ಮಾರುತಿ ಮೆಡಿಕಲ್ಸ್ ಮೇಲೆ 2 ಬೆಡ್ ರೂಮಿನ ಮನೆ ಬಾಡಿಗೆಗಿದೆ. ಸಂಪರ್ಕಿಸಿ. 98455 88863, 98864 33200

**ಸೈಟು ಮಾರಾಟಕ್ಕಿದೆ**
30x70 ಚಿಕ್ಕನಹಳ್ಳಿ ಹೊಸ ಬಡಾವಣೆ, ಖಾದಿ ಭಂಡಾರದ ಹತ್ತಿರ, ಉತ್ತರ ಮುಖ. 29x30 ನಿಜಲಿಂಗಪ್ಪ ಬಡಾವಣೆ-60 feet ರೋಡ್, ಉತ್ತರ ಪೂರ್ವ ಮೂಲೆ ನಿವೇಶನ, ಮಧ್ಯವರ್ತಿಗಳಿಗೆ ಅವಕಾಶವಿಲ್ಲ. 63601 51212, 80951 55777

**ಸೈಟುಗಳು ಮಾರಾಟಕ್ಕಿವೆ**
30'x40' East Corner Commercial, 30'x40' East MNK ಮಹಾಲಕ್ಷ್ಮಿ ಬಡಾವಣೆ, ಉತ್ತಮ್ ಬಡಾವಣೆ ಪಕ್ಕ, ಆವರಗೆರೆ, ದಾವಣಗೆರೆ. 98452 95326

**House for rent**
1 BHK & 2 BHK
ಜೆ.ಹೆಚ್. ಪಟೇಲ್ ಬಡಾವಣೆ E Block, 3rd Main, 2nd Cross. ನೂತನವಾಗಿ ನಿರ್ಮಿಸಿರುವ ಮನೆ ಬಾಡಿಗೆ ಇದೆ. 94484 43198

**ಸೈಟ್ ಮಾರಾಟಕ್ಕಿದೆ**
30x40 ಅಮರಾವತಿ ಕಾಲೋನಿ, ಹರಿಹರ ಹತ್ತಿರ, ರೈಲ್ವೇ ಗೇಟ್ 6363113227

**ಬೇಕಾಗಿದ್ದಾರೆ**
ಔಷಧಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳವರು ಬೇಕಾಗಿದ್ದಾರೆ. ಮತ್ತು Pharmacist Certificate ಇರುವವರು (Qualified person) ಬೇಕಾಗಿದ್ದಾರೆ. 89046 91084

**ಬಾಡಿಗೆಗೆ ಇದೆ**
ಹನಗವಾಡಿ ಕೈಗಾರಿಕಾ ಪ್ರದೇಶ ಹರಿಹರ. 31x55 ಹೋಂ ಇಂಡಸ್ಟ್ರೀಸ್, 10 HP ಪವರ್ ಬೋರ್‌ವೆಲ್ ನೀರಿನ ಸೌಕರ್ಯವಿದೆ. ಫೋ. : 98445 46777

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ವಾಟರ್ ಪ್ಯೂರಿಫೈಯರ್‌ನಲ್ಲಿ ಆಸಕ್ತಿ ಇರುವ ಉತ್ಸಾಹಿ ಯುವಕರು ಬೇಕಾಗಿದ್ದಾರೆ. SSLC/PUC, ವಸತಿ ಸೌಲಭ್ಯವಿದೆ. ಸಂಬಳ : 15,000. ಮೊ : 98453 44346

**ಸೈಟು ಮಾರಾಟಕ್ಕಿದೆ**
ಲೋಕಿಕೆರೆ ಇಂಡಸ್ಟ್ರೀಯಲ್ ಏರಿಯಾ ಹತ್ತಿರ ಉತ್ತರ ದಿಕ್ಕಿನ 30x44 ಸೈಟು ಮಾರಾಟಕ್ಕಿದೆ. ಸರ್.ಎಂ.ವಿ. ಪಿಯು ಕಾಲೇಜು ಹತ್ತಿರ. ಸಂಪರ್ಕಿಸಿ 9591360143

**ಸೈಟ್ ಮಾರಾಟಕ್ಕಿದೆ**
30X40 ಅಳತೆಯ ಪಶ್ಚಿಮ-ಉತ್ತರ ದಿಕ್ಕಿನ ಚನ್ನಬಸಪ್ಪ ಲೇಔಟ್, SSM ಸ್ಕೂಲ್ ಹತ್ತಿರ, ದಾವಣಗೆರೆ. (ಮಧ್ಯವರ್ತಿಗಳಿಗೆ ಅವಕಾಶವಿಲ್ಲ) ಫೋ. : 91418 09066

**ತಕ್ಷಣ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಸೇಲ್ಸ್ ಬಾಯ್ಸ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. 94816 72542 ರಾಜ್ ಹಂಸ್ ಕಲೆಕ್ಷನ್ಸ್ ಚಾಮರಾಜಪೇಟೆ, ದಾವಣಗೆರೆ.

**TO-LET ROOM**
Office Purpose at 2nd main, P.J. Extension, by the side of Vinayaka medicals, Davangere.
98440 20566
81474 90008

**ಬೇಕಾಗಿದ್ದಾರೆ**
Marketing Executives
Edu : Degree / Master Degree
Exp : Minimum 3 Years.
Send resume us : mailid : Sree.hari2253@gmail.com
(Interview on monday)

**ಮನೆ ಬಾಡಿಗೆ/ಲೀಸ್‌ಗೆ**
ಕುವೆಂಪು ನಗರದಲ್ಲಿ ಲಕ್ಷ್ಮಿ ಫ್ಲೋರ್‌ಮಿಲ್ ಹತ್ತಿರ, ಮೊದಲನೇ ಮಹಡಿಯಲ್ಲಿ ಎಲ್ಲಾ ಸೌಲಭ್ಯವಿರುವ ಸಿಂಗಲ್ ಬೆಡ್‌ರೂಂ ಮನೆ ಬಾಡಿಗೆ/ಲೀಸ್‌ಗೆ ದೊರೆಯುತ್ತದೆ. ಮಧ್ಯವರ್ತಿಗಳಿಗೆ ಅವಕಾಶವಿಲ್ಲ. 99863 31471

**ಬೇಕಾಗಿದ್ದಾರೆ**
ಆಫೀಸ್ ಕೆಲಸಕ್ಕೆ ಅನುಭವವುಳ್ಳ ಅಕೌಂಟೆಂಟ್, ಟೆಲಿಕಾಲರ್ ಮತ್ತು ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ : 62628 60608, 62628 62622

**ಸೈಟ್ ಮಾರಾಟಕ್ಕಿವೆ**
(30x50) ಪೂರ್ವ ದೊಡ್ಡ ಬಾತಿ ಹತ್ತಿರ, ಪಿ.ಬಿ. ರೋಡ್‌ಗೆ ಲಗತ್ತಾಗಿರುವ ಅನ್ನಪೂರ್ಣ ಎಸ್ಟೇಟ್, ಮಹದೇವಪುರ ಆರನೇ ಮೈಲಿಗಲ್ ರಸ್ತೆ, (20x30) ಉತ್ತರ. ಫೋ. : 70196 18397

**ಕೆಲಸಕ್ಕೆ ಬೇಕಾಗಿರುತ್ತಾರೆ**
ವಯೋಮಿತಿ 18.35 ವರ್ಷದ ಎಸ್.ಎಸ್.ಎಲ್.ಸಿ. , ಪಿ. ಯು.ಸಿ. ಐಟಿಐ., 98445 41894, 96119 66599

**ಬಿಲ್ಡಿಂಗ್ ಬಾಡಿಗೆಗಿದೆ**
ಹದಡಿ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಉದಯ ಸೂಪರ್ ಮಾರ್ಟ್ ಎದುರಿಗೆ ಸೆಲ್ಲರ್ 3000 ಅಡಿ, ಗ್ರೌಂಡ್ ಫ್ಲೋರ್ 3800 ಅಡಿ, ಮೊದಲನೇ ಮಹಡಿ 1500 ಅಡಿ ಇರುವ ವಾಣಿಜ್ಯ ಬಿಲ್ಡಿಂಗ್ ಬಾಡಿಗೆಗಿದೆ. ಸಂಪರ್ಕಿಸಿ. 96205 95579

**ಬೇಕಾಗಿದ್ದಾರೆ**
ಎಸ್.ಎಸ್. ಲೇಔಟ್‌ನ ಮನೆಯೊಂದಕ್ಕೆ ಅಡುಗೆಗೆ ಬೇಕಾಗಿದ್ದಾರೆ. ಕುಕ್-ವೆಜ್ & ನಾನ್ ವೆಜ್ ಕ್ಲೀನ್ & ನೀಟ್ ಸಮಯ : 7.00-2.00 ತನಕ ಎಸ್.ಎಸ್. ಲೇಔಟ್, ದಾವಣಗೆರೆ. ಉತ್ತಮ ವೇತನ ನೀಡಲಾಗುವುದು. ಫೋ. : 93414 55880

**ಮಾರ್ಕೆಟಿಂಗ್ & ಸೇಲ್ಸ್ (ಪುರುಷ) ಬೇಕಾಗಿದ್ದಾರೆ**
ಎಸ್.ಎಸ್. ಎಂಟರ್‌ಪ್ರೈಸಸ್, (ಡಿಸ್ಟ್ರಿಬ್ಯೂಷನ್ ಎಲ್‌ಇಡಿ & ಸಬ್‌ಮರ್ಸಿಬಲ್) ಕೆಆರ್. ರೋಡ್, ದಾವಣಗೆರೆ-1. ಯಾವುದೇ ಪದವಿಯೊಂದಿಗೆ ಅನುಭವವಿರುವವರಿಗೆ ಮೊದಲ ಆದ್ಯತೆ. 98447 29173, 70190 51379

**Audition**
ಚಲನಚಿತ್ರ, ಧಾರಾವಾಹಿ ಸರಣಿ ಕಿರುಚಿತ್ರ ಮಾಡಲಿಂಗ್ ಹಿರೋಯಿನ್ಸ್, ಕಲಾವಿದರು, ಸಹ ಕಲಾವಿದರು. Age : 18 to 30 89716 53672, 93807 85453

**ಬೇಕಾಗಿದ್ದಾರೆ**
ದಾವಣಗೆರೆ ಶಕ್ತಿನಗರದಲ್ಲಿರುವ ಆಫೀಸ್ ಕೆಲಸಕ್ಕೆ ಕಂಪ್ಯೂಟರ್ ಹಾಗೂ ಕನ್ನಡ ಭಾಷಾ ಜ್ಞಾನವಿರುವ ಮಹಿಳೆ ಹಾಗೂ ಪುರುಷರು ಬೇಕಾಗಿದ್ದಾರೆ. ಸಂಪರ್ಕಿಸಿ: 97319-44351

**ಜಮೀನು ತೋಟ ಮಾರಾಟಕ್ಕೆ ಇದೆ ಹಾಗೂ ವಿದ್ಯಾನಗರದಲ್ಲಿ ಮನೆಗಳು ಬಾಡಿಗೆಗೆ ಅಥವಾ ಲೀಸ್‌ಗೆ ಇವೆ.**
96322 74557

**2 BHK ಮನೆ ಬಾಡಿಗೆಗೆ ಇದೆ**
1ನೇ ಮಹಡಿ, ಜೆ.ಹೆಚ್. ಪಟೇಲ್ ಬಡಾವಣೆ, ಎ ಬ್ಲಾಕ್, ದಾವಣಗೆರೆ.
94801 32406
99453 97195

**ಬೇಕಾಗಿದ್ದಾರೆ**
ಕಛೇರಿಯಲ್ಲಿ ಕೆಲಸ ಮಾಡಲು ಪಿಯುಸಿ ಪಾಸ್/ಫೇಲಾದ ಪುರುಷರು ಬೇಕಾಗಿದ್ದಾರೆ. ಕಂಪ್ಯೂಟರ್‌ನಲ್ಲಿ ಬೇಸಿಕ್ ನಾಲೆಡ್ಜ್ (MS ಆಫೀಸ್) ಇಂಗ್ಲಿಷ್, ಕನ್ನಡ ಟೈಪಿಂಗ್ ಬಲ್ಲವರು ಹಾಗೂ ನಿವೃತ್ತರೂ ಸಂಪರ್ಕಿಸಬಹುದು. ಹಾಗೂ ಅಟೆಂಡರ್ ಬೇಕಾಗಿದ್ದಾರೆ. ಶ್ರೀ ರೇಣುಕಾದೇವಿ ಆಫೀಸ್ ಜಗದಾಂಬ ಫರ್ನಿಚರ್ ಎದರು , 2ನೇ ಮಹಡಿ, ಹೆಚ್.ಎಂ. ರಸ್ತೆ, ದಾವಣಗೆರೆ-1. ಫೋ. : 94483 38657

**ಬಾಡಿಗೆಗೆ ಇದೆ**
ಜೆ.ಹೆಚ್ ಪಟೇಲ್ ಬಡಾವಣೆ 'ಬಿ ಬ್ಲಾಕ್' 8ನೇ ಮೇನ್ ಒಂದನೇ ಕ್ರಾಸ್ ರಸ್ತೆ (ಪೋದಾರ್ ಇಂಟರ್ ನ್ಯಾಷನಲ್ ಸ್ಕೂಲ್ ಎದುರುಗಡೆ ಇರುವ ಪಾರ್ಕ್ ಪಕ್ಕದ ರಸ್ತೆ) ನೂತನ ಕಟ್ಟಿದ ಮನೆ ಮೊದಲನೇ ಮಹಡಿ ಬಾಡಿಗೆ ಇರುತ್ತದೆ. ವಿಚಾರಿಸಿ. 98442 94446, 80500 29144

**ಬೆಳ್ಳಿ ಫೋಟೋಗಳು ದೊರೆಯುತ್ತವೆ**
ಮದುವೆ, ಗೃಹಪ್ರವೇಶ ಇತ್ಯಾದಿ ಸಮಾರಂಭಗಳಿಗೆ ಬೆಳ್ಳಿ ದೇವರ ಮೂರ್ತಿಗಳ ಫೋಟೋಗಳು ದೊರೆಯುತ್ತವೆ. ಗಣೇಶ, ಬಾಲಾಜಿ, ಲಕ್ಷ್ಮಿ, ಸರಸ್ವತಿ, ಕನ್ನಿಕಾಪರಮೇಶ್ವರಿ, ಸತ್ಯನಾರಾಯಣ ಸ್ವಾಮಿ, ಧರ್ಮಸ್ಥಳ ಮಂಜುನಾಥ ಸ್ವಾಮಿ, ಶಿವ ಪಾರ್ವತಿ, ಮಂತ್ರಾಲಯ ರಾಘವೇಂದ್ರ ಸ್ವಾಮಿ, ಆಂಜನೇಯ ಸ್ವಾಮಿ, ಶಿರಡಿ ಸಾಯಿಬಾಬಾ, ಈಶ್ವರ ಲಿಂಗ, ಮೈಲಾರ ಲಿಂಗೇಶ್ವರ, ವೀರಭದ್ರ ಸ್ವಾಮಿ, ಚಾಮುಂಡೇಶ್ವರಿ, ರೇಣುಕಾ ಯಲ್ಲಮ್ಮ, ಗುರು ಕೊಟ್ಟೂರೇಶ್ವರ ಸ್ವಾಮಿ, ನಾಯಕನಹಟ್ಟಿ ತಿಪ್ಪೇಸ್ವಾಮಿ, ಮರುಳಸಿದ್ದೇಶ್ವರ ಸ್ವಾಮಿ ಸಣ್ಣ ಪ್ಯೂರ್ ಬೆಳ್ಳಿ ಫೋಟೋಗಳು ರೂ. 160 ರಿಂದ 260 ರೂ.ಗಳಿಗೆ ಸಿಗುತ್ತವೆ. ಅಂಗಡಿ ಪ್ರಾರಂಭಿಸಲು ಪೂಜೆ ಮಾಡುವ ವೈಟ್ ಮೆಟಲ್‌ನ ಸರ್ವಾಲಂಕಾರದ (ಲೈಟಿಂಗ್) ಫೋಟೋಗಳು ದೊರೆಯುತ್ತವೆ. ಮದುವೆ ಇತ್ಯಾದಿ ಸಮಾರಂಭಗಳಿಗೆ 1 ಗ್ರಾಂ. ಗೋಲ್ಡ್‌ನಲ್ಲಿ ಡಾಬು, ವಂಕಿ, ಹಾರಗಳು ಸಿಗುತ್ತವೆ ಮತ್ತು ಅನುಕೂಲಕರವಾದ ಗಿಫ್ಟ್‌ಗಳಿವೆ.
ಸ್ಥಳ : ಲಕ್ಷ್ಮೀ ಬಾಲಾಜಿ ಸಿಲ್ವರ್ ಫೋಟೋ ಫ್ರೇಮ್ಸ್ ಮಳಿಗೆ ನಂ. 34, ಶ್ರೀ ಮುರುಘರಾಜೇಂದ್ರ ಕಾಂಪ್ಲೆಕ್ಸ್, ಶಿವಪ್ಪಯ್ಯ ವೃತ್ತದ ಹತ್ತಿರ, ದಾವಣಗೆರೆ. ಮೊ. : 99451 59582

**ಮನೆ ಬಾಡಿಗೆಗಿದೆ**
ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್ 9ನೇ ಕ್ರಾಸ್‌ನಲ್ಲಿ ಡೋರ್ ನಂ. 144 ನಂಬರಿನ ಮನೆಯ ಒಂದನೇ ಮಹಡಿಯಲ್ಲಿ ನೀರಿನ ಸೌಕರ್ಯ ಇರುವ 3 ಬೆಡ್ ರೂಂ ಮನೆ ಬಾಡಿಗೆಗಿದೆ. ಸಂಪರ್ಕಿಸಿ 94480-47506

**IIT Foundation Maths**
From 5th STD
Bruit Abacus and Vedic Maths
Nijalingappa Badavane
M: 97390 66956

**ಹಿಂದೂ ವಧು-ವರರ ಮಾಹಿತಿ ಕೇಂದ್ರ**
ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ. ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2. 94481-59303, 94834 63783

**ಮನೆ ಬಾಡಿಗೆಗೆ ಇದೆ**
1ನೇ ಮಹಡಿ, 1 ಬೆಡ್ ರೂಂ, ಬೋರ್, ಕಾರ್ಪೊರೇಷನ್ ನೀರಿನ ಸೌಲಭ್ಯವಿದೆ. 2 ಹಾಲ್, ವಾರ್ಡ್‌ಡ್ರೋಪ್, 2 ಶೋಕೇಸ್, 2 ಅಟ್ಟ, ವಿದ್ಯಾನಗರ ಪಾರ್ಕ್ ಪಕ್ಕ, 4ನೇ ಮೇನ್, 7ನೇ ಕ್ರಾಸ್, #/2 ಶಶಿಕಿರಣ್ ನಿಲಯ 95917 47333, 97416 78794

**ಸೈಟ್ ತಕ್ಷಣ ಮಾರಾಟಕ್ಕಿದೆ**
SP Office ಎದುರುಗಡೆ ಕರೂರು ರಸ್ತೆಯಲ್ಲಿ ಕೇವಲ 500 meter ಅಂತರದಲ್ಲಿದೆ. 20x30 ಅಳತೆಯ ಉತ್ತರ ದಿಕ್ಕಿನ ಸೈಟ್ ಗ್ರಾಮ ಪಂಚಾಯತಿ ಖಾನೇಷು ಮಾರಿ ಡೋರ್ ನಂ. Khata, extract in E-ಸ್ವತ್ತು, EC, All Documents ರೆಡಿ ಇದೆ. ಸೈಟು ಕೇವಲ 9 ಲಕ್ಷಕ್ಕೆ ಲಭ್ಯವಿದೆ. Contact : 83102 75164

**ಸೈಟುಗಳು ಮಾರಾಟಕ್ಕಿವೆ**
ಸಂಕ್ರಾಂತಿ ಕೊಡುಗೆ- 1099/- ಮಲ್ಲಶೆಟ್ಟಿಹಳ್ಳಿ NH-4 ಗೆ ಹೊಂದಿಕೊಂಡಿರುವ ಲೇಔಟ್‌ನಲ್ಲಿ ಕೆಲವೇ ಸೈಟುಗಳು ಲಭ್ಯ. 90198 88512, 901923 3241

**ಮನೆ ಬಾಡಿಗೆಗಿದೆ**
2 BHK, #3680/ಎ, ಎಂಸಿಸಿ ಬಿ ಬ್ಲಾಕ್, 11ನೇ ಮುಖ್ಯರಸ್ತೆ, 5ನೇ ಕ್ರಾಸ್, ದಾವಣಗೆರೆ.
98456 92504
77606 77444

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ. 4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ. ಅಸ್ತಮಾ, ಕೀಲು ನೋವು ಡಾ|| ಎಸ್.ಎಂ. ಸೇಠಿ. ಫೋ. : 96322 95561 ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ನೀರಿನ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ: ಮೊ. 9538777582 ಕೆಲಸ 100% ಗ್ಯಾರಂಟಿ.

**ಮಿಲನ-ವೀರಶೈವ ಲಿಂಗಾಯತ**
ವಧು-ವರರ ವಿವಾಹ ಸಲಹೆಗಳು (on line) ನಮ್ಮಲ್ಲಿ 21 ರಿಂದ 42 ವರ್ಷದ ವಧು ಮತ್ತು ವರಗಳ ಮಾಹಿತಿಯನ್ನು ಹೊಂದಿದ್ದೇವೆ. 1st & 2nd marriage ಗೆ ಮಾಹಿತಿ ಹೊಂದಿದ್ದೇವೆ. ಫೋ. : 95132 22475

**Required**
Telecalling ( Only For Ladies) & Marketing Work For Gents Teaching Faculty : Physics, Chemistry, Biology, Computer Science Junior Leacture For Science PU College. Location: Davangere. CONTACT. 78999 05792, 87628 67557

**ಮಾರಾಟಕ್ಕೆ**
* JH ಪಟೇಲ್ ಬಡಾವಣೆ (ಉತ್ತರ ದಿಕ್ಕಿನ)ಮನೆ 20×30, * ಶಕ್ತಿನಗರ (ರಾಜೇಂದ್ರ ಬಡಾವಣೆ) ದಕ್ಷಿಣ ದಿಕ್ಕಿನ ಪೂರ್ವ ಬಾಗಿಲು, 3 ಫ್ಲೋರ್ ಇರುವ ಮನೆ 20×30, * ಲಕ್ಷ್ಮಿ ಲೇಔಟ್ (ಜಯನಗರ) ಸೈಟ್ (ಪೂರ್ವ) 25×35, 7899636597, 9916525828

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರದವರಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ : 98442-94446

**TO-LET**
1200 sq feet Cellar floor, Opposite to AVK College. P.J. Exten., Davangere. 94488 86346

**ವಾಹ್ ಚಾಯ್ !! ರಿಚ್ ಚಾಯ್ !!**
SRK TEA
ಶ್ರೀ ರಾಮಕೃಷ್ಣ ಕಾಫಿ ಕಂಪನಿ ಮಂಡಿಪೇಟೆ, ದಾವಣಗೆರೆ. ಮೊಬೈಲ್ : 94487 27084

**TO LET**
3 BHK Ground Floor, 2BHK First floor, 303/4, Rohini Complex, P.J. Extension, 2 main, road, stadium Road, Davangere. Contact : 96111 74878, 89707 89513

**SHARE MARKET**
Small amount Investment Low risk, good profit, Learning & earning, Basic Knowledage, Best Education & Demat A/C
Mr. Sathish
95382 28125

**ಮನೆ ಬಾಡಿಗೆಗೆ ಇವೆ**
ದಾವಣಗೆರೆಯ ತರಳಬಾಳು ಬಡಾವಣೆ ಹಾಗೂ ಶ್ರೀ ಸ್ವಾಮಿ ವಿವೇಕಾನಂದ ಬಡಾವಣೆಗಳಲ್ಲಿ 2 ಬೆಡ್ ರೂಮ್ ಗಳಿರುವ ಮೂರು ಮನೆಗಳು ಬಾಡಿಗೆಗೆ ಇವೆ. (ಸಸ್ಯಹಾರಿಗಳಿಗೆ ಮಾತ್ರ) ಸಂಪರ್ಕಕ್ಕಾಗಿ : 9449320703, 9591003660, 9448812704

**ಸೈಟ್,ಮನೆ & ಹೊಲಕ್ಕೆ ಸಂಪರ್ಕಿಸಿ (ಮಾರಾಟಕ್ಕಿವೆ)**
ಡಾಲರ್ಸ್ ಕಾಲೋನಿಯಲ್ಲಿ 40x50 ದಕ್ಷಿಣ ದಿಕ್ಕು ಇದೆ. ಬಿಂದಾಸ್ ಬಾರ್ ಹಿಂಭಾಗದಲ್ಲಿ 30x61 West Face ಇದೆ. ಶ್ರೀ ಸಾಮಾನ್ಯದಲ್ಲಿ ಉತ್ತರ ಪೂರ್ವ 4 ಸೈಟ್ ಇವೆ. ಸರ್ಕಾರಿ ನೌಕರರ ಬಡಾವಣೆಯಲ್ಲಿ ಸೈಟ್ ಇವೆ. ಮಿಟ್ಲಕಟ್ಟೆಯಲ್ಲಿ 34 ಗುಂಟೆ ಜಮೀನು ಮಾರಾಟಕ್ಕೆ ಇದೆ. ಎಂ.ಸಿ.ಸಿ. 'ಎ' ಬ್ಲಾಕ್‌ನಲ್ಲಿ ಮನೆ ಮಾರಾಟಕ್ಕೆ ಇದೆ. 30x44 South, ಸಂಪರ್ಕಿಸಿ : ಸುರೇಶ್ ಪಿ.ಎಸ್. 84314 00907

**ಮಳಿಗೆ ಬಾಡಿಗೆಗಿದೆ**
ಎಸ್.ಎಸ್. ಲೇಔಟ್, ಬಿ ಬ್ಲಾಕ್, 2ನೇ ಮೇನ್, #1970/20 ರಲ್ಲಿ ನೆಲ ಮಹಡಿಯಲ್ಲಿ ಅಂಗಡಿಗೆ ಯೋಗ್ಯವಾದ ಮಳಿಗೆ ಬಾಡಿಗೆಗೆ ಇದೆ. ಫೋ. : 98443 06988

**3 BHK RENT / LEASE FIRST FLOOR**
2396/12, 10th Cross, 16th Main Road, MCC 'A' Block Davanagere-577 004
8383019890
9899414922



ಸಂಕ್ರಾಂತಿ ಸಂಭ್ರಮಕ್ಕಾಗಿ ಕಬ್ಬಿನ ಜಲ್ಲೆ ಖರೀದಿಗಾಗಿ ಮುಗಿಬಿದ್ದ ಜನತೆ

# ಸಿದ್ದರಾಮಯ್ಯ ಮೀಸಲಾತಿ ಕೊಡಲ್ಲ ಎಂದು ಹೇಳಿದ್ದರು

**ಹೀಗಾಗಿ ಅವರ ವಿರುದ್ಧ ಹೋರಾಟ ನಡೆಸುವುದಿಲ್ಲ - ಜಯಮೃತ್ಯುಂಜಯ ಶ್ರೀ**

ಬೆಂಗಳೂರು, ಜ. 14 – ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಅವರು ಮುಖ್ಯ ಮಂತ್ರಿಗಳಾಗಿದ್ದ ಸಮಯದಲ್ಲಿ ಪಂಚಮ ಸಾಲಿಗಳಿಗೆ 2ಎ ಮೀಸಲಾತಿ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದರು. ಹೀಗಾಗಿ ಅವರ ವಿರುದ್ಧ ಹೋರಾಟ ನಡೆಸುವುದಿಲ್ಲ ಎಂದು ಪಂಚಮಸಾಲಿ ಲಿಂಗಾಯತ ಪೀಠದ ಶ್ರೀ ಬಸವ ಜಯಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ.



ಶನಿವಾರ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಮೀಸಲಾತಿ ಹೋರಾಟ ಪುನರಾರಂಭಿಸಿರುವ ಸ್ವಾಮೀಜಿ ಪತ್ರಕರ್ತ ರೊಂದಿಗೆ ಮಾತನಾಡುತ್ತಾ ಈ ಹೇಳಿಕೆ ನೀಡಿದ್ದಾರೆ.

ಸಿದ್ದರಾಮಯ್ಯ ಅವರ ಸರ್ಕಾರ ಇದ್ದಾಗ ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿ ಕುರಿತು ಅವರ ಜೊತೆ ಮಾತನಾಡಿದ್ದೆವು. ಹಾಲುಮತದವರು ಈಗ 2ಎ ದಲ್ಲಿದ್ದಾರೆ. ಹೀಗಾಗಿ ಪಂಚಮಸಾಲಿ ಸಮುದಾಯದವರಿಗೆ ಈ ಮೀಸಲಾತಿ ಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿದ್ದರು ಎಂದು ಸ್ವಾಮೀಜಿ ತಿಳಿಸಿದ್ದಾರೆ.


ಅವರು ಮೀಸಲಾತಿ ಕೊಡಲಾಗದು ಎಂದು ಸ್ಪಷ್ಟವಾಗಿ ತಿಳಿಸಿದ್ದ ಕಾರಣ ಸುಮ್ಮನಾದೆವು. ಆದರೆ, ಬಿ.ಎಸ್. ಯಡಿಯೂರಪ್ಪನವರು ಮುಖ್ಯಮಂತ್ರಿಯಾದ ಸಂದರ್ಭದಲ್ಲಿ ಮೀಸಲಾತಿ ಕೊಡುವುದಾಗಿ ಹೇಳಿದ್ದರು. ಹೀಗಾಗಿಯೇ ಯಡಿಯೂರಪ್ಪ ಹಾಗೂ ನಂತರ ಮುಖ್ಯಮಂತ್ರಿಯಾದ ಬಸವರಾಜ ಬೊಮ್ಮಾಯಿ ವಿರುದ್ಧ ಹೋರಾಟ ನಡೆಸುತ್ತಿದ್ದೇವೆ ಎಂದು ಸ್ವಾಮೀಜಿ ಸ್ಪಷ್ಟಪಡಿಸಿದ್ದಾರೆ.

ನಾವು ಪಂಚಮಸಾಲಿಗಳು ಬಿಜೆಪಿಯವರಿಗೆ ಮತ ನೀಡಿದ್ದೇವೆ. ನಮ್ಮ ಸಮಾಜದಿಂದಲೇ ಬಿಜೆಪಿಯಲ್ಲಿ ಹೆಚ್ಚಿನ ಶಾಸಕರು ಹಾಗೂ ಸಂಸದರಿದ್ದಾರೆ. ಹೀಗಾಗಿ ನಾವು ಮತ ನೀಡಿರುವುದಕ್ಕೆ ಮೀಸಲಾತಿಯ ಕೂಲಿ ಕೇಳುತ್ತಿದ್ದೇವೆ ಎಂದರು.

2016ರಲ್ಲಿ ಕಾಂತರಾಜ್ ಆಯೋಗದ ವರದಿಯಲ್ಲಿ ಪಂಚಮಸಾಲಿಗಳಿಗೆ 2ಎ ಮೀಸಲಾತಿ ಕೊಡಲಾಗದು ಎಂದು ತಿಳಿಸಿರುವುದು ನನಗೆ ಗೊತ್ತೇ ಇಲ್ಲ. ಆ ವಿಷಯ ಬೊಮ್ಮಾಯಿ ತಿಳಿಸಿಯೇ ಇಲ್ಲ. ಹೀಗಾಗಿ ನಾನು ಆ ವಿಷಯದ ಬಗ್ಗೆ ಮಾತನಾಡಿರಲಿಲ್ಲ.

ಈಗ ವಿನಾಕಾರಣ ಮೀಸಲಾತಿ ಕೊಡದೇ ತಂತ್ರ – ಕುತಂತ್ರ ಮಾಡುತ್ತಿದ್ದಾರೆ ಎಂದೂ ಸ್ವಾಮೀಜಿ ಹೇಳಿದ್ದಾರೆ.

## ಗಡ್ಕರಿಗೆ ಬೆದರಿಕೆ, ಭದ್ರತೆ ಹೆಚ್ಚಳ



ನಾಗಪುರ, ಜ. 14 – ದಾವೂದ್ ಇಬ್ರಾಹಿಂ ಗ್ಯಾಂಗ್‌ಗೆ ಸೇರಿದವನೆಂದು ಹೇಳಿಕೊಂಡ ವ್ಯಕ್ತಿಯೋರ್ವ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರಿಗೆ ಬೆದರಿಕೆ ಕರೆ ಮಾಡಿ 100 ಕೋಟಿ ರೂ.ಗಳ ಬೇಡಿಕೆ ಇಟ್ಟಿದ್ದಾನೆ. ಈ ಹಿನ್ನೆಲೆಯಲ್ಲಿ ಸಚಿವರ ನಿವಾಸಕ್ಕೆ ಭದ್ರತೆ ಹೆಚ್ಚಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕರೆ ಮಾಡಿದ ವ್ಯಕ್ತಿಯನ್ನು ಕರ್ನಾಟಕದಲ್ಲಿ ಗುರುತಿಸಲಾಗಿದೆ. ಈತನನ್ನು ವಶಕ್ಕೆ ಪಡೆದುಕೊಳ್ಳಲು ತಂಡವೊಂದನ್ನು ಕಳಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಗಡ್ಕರಿ ಅವರ ಸಾರ್ವಜನಿಕ ಸಂಪರ್ಕ ಕಚೇರಿಯ ಸ್ಥಿರ ದೂರವಾಣಿಗೆ ಬೆದರಿಕೆಯ ಮೂರು ಕರೆಗಳು ಬಂದಿದ್ದವು. ಕರೆ ಮಾಡಿದ ವ್ಯಕ್ತಿ ತನ್ನ ಮೊಬೈಲ್ ಸಂಖ್ಯೆ ಹಾಗೂ ತಾನಿರುವ ಕರ್ನಾಟಕದ ವಿಳಾಸವನ್ನು ತಿಳಿಸಿ ಇಲ್ಲಿಗೆ ಹಣ ನೀಡುವಂತೆ ಹೇಳಿದ್ದ. ಪೊಲೀಸರು ಕರೆ ಮಾಡಿದ ವ್ಯಕ್ತಿಯನ್ನು ಗುರುತಿಸಿದ್ದಾರೆ. ಈತ ಅಪರಾಧಿಕ ಹಿನ್ನೆಲೆ ಹೊಂದಿದ್ದಾನೆ.

# ಫೆ.17ರಂದು ಚುನಾವಣಾ ಬಜೆಟ್: ಸಿಎಂ

**ಚುನಾವಣೆ ಕಾಲಮಿತಿಯಲ್ಲಿ ಅನುಷ್ಠಾನಗೊಳಿಸುವ ಯೋಜನೆಗಳು ಜಾರಿ**

ಂಬೆಂಗಳೂರು, ಜ.14 - ವಿಧಾನಸಭೆ ಚುನಾವಣೆ ಗಮನದಲ್ಲಿಟ್ಟುಕೊಂಡು ಫೆಬ್ರವರಿ 17 ರಂದು ಚುನಾವಣಾ ಬಜೆಟ್ ಮಂಡಿಸುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದ್ದಾರೆ.

ಏಪ್ರಿಲ್ - ಮೇ ತಿಂಗಳಲ್ಲಿ ರಾಜ್ಯ ವಿಧಾನಸಭೆಗೆ ಚುನಾವಣೆ ನಡೆಯುವ ಹಿನ್ನೆಲೆಯಲ್ಲಿ ಫೆಬ್ರವರಿಯಲ್ಲಿ ಜಂಟಿ ಹಾಗೂ ಬಜೆಟ್ ಅಧಿವೇಶನ ನಡೆಸಲಾಗುವುದು ಎಂದು ಹೇಳಿದರು.

2023-24ನೇ ಸಾಲಿನ ಮುಂಗಡ ಪತ್ರವನ್ನು ಫೆ. 17 ರಂದೇ ಮಂಡಿಸಲಿದ್ದು, ಇದು ಚುನಾವಣಾ ಬಜೆಟ್ ಆಗಿರುತ್ತದೆ ಎಂದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಚುನಾವಣಾ ವರ್ಷವಾಗಿರುವ ಹಿನ್ನೆಲೆಯಲ್ಲಿ ಜನಪರವಾದ ಯೋಜನೆಗಳನ್ನು ಘೋಷಣೆ ಮಾಡಬೇಕಾಗುತ್ತದೆ. ಕಾಲಮಿತಿಯೊಳಗೆ ಅನುಷ್ಠಾನ ಮಾಡಬಹುದಾದ ಘೋಷಣೆಗಳನ್ನು ಮಾಡುತ್ತೇವೆ. ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಆಯವ್ಯಯದ ದಿನಾಂಕ ನಿರ್ಧರಿಸಲಾಗುವುದು ಎಂದರು. ಮುಖ್ಯವಾಗಿ ದುಡಿಯುವ ವರ್ಗಕ್ಕೆ ಅನುಕೂಲವಾಗುವ ಕೆಲಸ ಮಾಡುತ್ತೇವೆ. ಪ್ರತಿಯೊಂದು ಕುಟುಂಬಕ್ಕೆ ಸೂರು ಕಲ್ಪಿಸುವ ಕಾರ್ಯಕ್ಕೆ ಹೆಣ್ಣು ಮಕ್ಕಳ ಹೆಸರಿನಲ್ಲಿ ಯೋಜನೆ ತರುತ್ತೇವೆ. ಸ್ತ್ರೀಶಕ್ತಿ, ಸ್ತ್ರೀ ಸಾಮರ್ಥ್ಯ ಯೋಜನೆಯನ್ನು ಜಾರಿಗೊಳಿಸಲಾಗುವುದು ಎಂದು ಹೇಳಿದರು.

ಕೇಂದ್ರದ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಬೆಂಬಲ ಸಿಗಲಿದೆ. ಬಜೆಟ್‌ನಲ್ಲಿ ಕೆಲವು ವಿಶೇಷ ಕಾರ್ಯಕ್ರಮಗಳನ್ನು ಜಾರಿ ಮಾಡಲಿದ್ದೇವೆ. ಸ್ತ್ರೀ ಸಾಮರ್ಥ್ಯ ಯೋಜನೆ ಕಾರ್ಯರೂಪಕ್ಕೆ ತರುವ ಬದ್ಧತೆ ಹೊಂದಿದ್ದೇವೆ. ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಬೆಂಬಲ ನಿರೀಕ್ಷೆ ಮಾಡಿದ್ದೇವೆ. ಈಗಾಗಲೇ ಕೇಂದ್ರ ವಿತ್ತ ಸಚಿವರ ಜೊತೆ ಸಭೆ ನಡೆಸಲಾಗಿದೆ ಎಂದು ವಿವರಿಸಿದರು.

## ನಗರದಲ್ಲಿಂದು ಕರುಣಾದಿಂದ ಆರೋಗ್ಯ ತಪಾಸಣಾ ಶಿಬಿರ

ಹೋಮಿಯೋಪಥಿ ವೈದ್ಯಕೀಯ ಸಂಘ ಹಾಗೂ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ಇಂದು ಬೆಳಿಗ್ಗೆ 11 ರಿಂದ 1 ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಲಿದೆ. ಡಾ.ಮಾವಿಶೆಟ್ಟರ್, ಡಾ.ಶರತ್‌ರಾಜ್.ಕೆ.ಆರ್, ಡಾ.ಸಿ.ಎನ್.ಕೋಟಿ ಹಾಳ್, ಡಾ.ಎ.ಎನ್.ಸುಂದರೇಶ್ ಡಾ.ಆರತಿ ಸುಂದರೇಶ್, ಡಾ.ಜಿ.ಎಸ್.ಗಿರೀಶ್, ಡಾ.ವಿಶ್ವನಾಥ್ ಹಳ್ಳಿಕೇರಿ, ಡಾ.ಎಸ್.ರಂಗರಾಜನ್ ಅವರು ಶಿಬಿರವನ್ನು ನಡೆಸಿಕೊಡುವರು.

ಡಾ.ಹೆಚ್. ಎನ್. ಮಲ್ಲಿಕಾರ್ಜುನ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಡಾ. ಬಿ.ಎಂ. ವಿಶ್ವನಾಥ್, ಡಾ. ಮಾವಿಶೆಟ್ಟರ್, ಡಾ.ಕೆ.ಪಿ. ಗಣೇಶ್‌ರಾವ್ ಆಗಮಿಸುವರು. ಶ್ರೀಮತಿ ಮಂಜುಳಾ ಬಸವಲಿಂಗಪ್ಪ ಸ್ವಾಗತ ಬಯಸುವರು. ಡಾ.ಎ.ಎನ್.ಸುಂದರೇಶ್ ಪ್ರಸ್ತಾವನೆ ಮಾಡಲಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 6363151534 / 222447.

## ಎಸ್ಕಾಂಗಳ ಸಾಲವೇ ಕಾಂಗ್ರೆಸ್ ಕೊಡುಗೆ

ಬೆಂಗಳೂರು, ಜ. 14 – ಕಾಂಗ್ರೆಸ್ ಅಧಿಕಾರದಲ್ಲಿದ್ದಾಗ ವಿದ್ಯುತ್ ಕಂಪನಿಗಳಾದ ಎಸ್ಕಾಂಗಳನ್ನು ಸಾಲದ ಶೂಲಕ್ಕೆ ನೂಕಿತ್ತು. ಎಸ್ಕಾಂಗಳ ಸಾಲವೇ ಕಾಂಗ್ರೆಸ್ ಕೊಡುಗೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಅವಧಿಯಲ್ಲಿ ಎಸ್ಕಾಂಗಳನ್ನು ಸಾಲಕ್ಕೆ ಸಿಲುಕಿಸಲಾಗಿತ್ತು. ನಮ್ಮ ಸರ್ಕಾರದಲ್ಲಿ ಅವುಗಳಿಗೆ ನೇರವಾಗಿ 8 ಸಾವಿರ ಕೋಟಿ ರೂ. ನೀಡಿದ್ದೇವೆ. 13 ಸಾವಿರ ಕೋಟಿ ರೂ.ಗಳಿಗೆ ಗ್ಯಾರಂಟಿ ಕೊಟ್ಟು ಸಾಲ ಪಡೆಯಲಾಗಿದೆ. ಅಂದರೆ 21 ಸಾವಿರ ಕೋಟಿ ರೂ.ಗಳನ್ನು ಎಸ್ಕಾಂ ಮತ್ತು ಇಂಧನ ಕ್ಷೇತ್ರದಲ್ಲಿ ತೊಡಗಿಸಿದ್ದರಿಂದ ಅವು ಜೀವಂತವಾಗಿವೆ ಎಂದು ತಿಳಿಸಿದರು.

ಇದು ಕಾಂಗ್ರೆಸ್ ಕಾಣಿಕೆ. ಅವರು ಬಿಟ್ಟು ಹೋದ ಬಳುವಳಿ. ಈಗ ಮತ್ತೆ ಚುನಾವಣೆಯಲ್ಲಿ ಸೋಲುತ್ತೇವೆ ಎಂದು ಗೊತ್ತಾಗಿ ಹತಾಶರಾಗಿ 200 ಯುನಿಟ್ ಉಚಿತ ವಿದ್ಯುತ್ ಘೋಷಣೆ ಮಾಡಿದ್ದಾರೆ. ಇದ್ಯಾವುದೂ ಅನುಷ್ಠಾನ ಮಾಡಲು ಸಾಧ್ಯವಿಲ್ಲ ಎಂದು ಅವರಿಗೆ ತಿಳಿದಿದೆ. ದಾರಿ ತಪ್ಪಿಸುವ, ಮೋಸ ಮಾಡುವ ಕೆಲಸವನ್ನು ಕಾಂಗ್ರೆಸ್ ಮಾಡಿದೆ ಎಂದು ಹೇಳಿದರು.

ಅವರ ಘೋಷಣೆಗೆ ಸುಮಾರು 9 ಸಾವಿರ ಕೋಟಿಗಿಂತ ಹೆಚ್ಚು ರೂ.ಗಳ ಅವಶ್ಯಕತೆ ಇದೆ. 9 ಸಾವಿರ ಕೋಟಿ ಇಲ್ಲಿ ನೀಡಿದರೆ, ಬೇರೆ ಯೋಜನೆಗಳಿಗೆ ಕಡಿತ ಮಾಡುತ್ತಾರೆ. ಸಾಮಾಜಿಕ ವಲಯದಲ್ಲಿ ಕಡಿತವಾಗುತ್ತದೆ ಎಂದು ಬೊಮ್ಮಾಯಿ ತಿಳಿಸಿದರು. ಅವರು ಆರಿಸಿ ಬರುವುದಿಲ್ಲ, ಹೀಗಾಗಿ ಜನರಿಗೆ ದಾರಿ ತಪ್ಪಿಸುವ ಕೆಲಸವನ್ನು ಮಾಡುತ್ತಿದ್ದಾರೆ. ನಾವು ಜವಾಬ್ದಾರಿಯುತ ಸರ್ಕಾರವಾಗಿರುವುದರಿಂದ ಜವಾಬ್ದಾರಿಯಿಂದ ಮಾತನಾಡುತ್ತೇವೆ. ನಮಗೂ ಜನರ ಕಷ್ಟ, ಕಾರ್ಪಣ್ಯಗಳು ತಿಳಿದಿವೆ ಎಂದರು.

# ಮಲೇಬೆನ್ನೂರು ಸೇರಿದಂತೆ 50 ಕಡೆಗಳಲ್ಲಿ ತಿರಂಗಾ ರಂಗೋಲಿ ಉತ್ಸವ

ಮಲೇಬೆನ್ನೂರು, ಜ.14- ಮಕರ ಸಂಕ್ರಾಂತಿ ಹಬ್ಬದ ಅಂಗವಾಗಿ ಮಲೇಬೆನ್ನೂರು ಬ್ಲಾಕ್ ಕಾಂಗ್ರೆಸ್ ವತಿಯಿಂದ ಮಲೇಬೆನ್ನೂರು ಸೇರಿದಂತೆ ಹೊಳೆಸಿರಿಗೆರೆ, ಹೊಸ ಪಾಳ್ಯ, ಎಳೆಹೊಳೆ, ಕಮಲಾಪುರ, ಲಕ್ಕಶೆಟ್ಟಿಹಳ್ಳಿ ಮತ್ತು ಕಡ್ಲೆಗೊಂದಿ ಸೇರಿ ಒಟ್ಟು 50 ಕಡೆಗಳಲ್ಲಿ ತಿರಂಗಾ ರಂಗೋಲಿ ಉತ್ಸವವನ್ನು ಸಂಭ್ರಮದಿಂದ ಇಂದು ನಡೆಸಲಾಯಿತು.





ಪಟ್ಟಣದ 19ನೇ ವಾರ್ಡ್‌ನಲ್ಲಿರುವ ಶ್ರೀಮತಿ ಬಸಮ್ಮ ಕೆಂಚಪ್ಪ ಮಡಿವಾಳರ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ 30 ಕ್ಕೂ ಹೆಚ್ಚು ಮಹಿಳೆಯರು, ವಿದ್ಯಾರ್ಥಿನಿಯರು ವಿವಿಧ ಮಾದರಿಯಲ್ಲಿ ತಿರಂಗಾ ರಂಗೋಲಿ ಜೊತೆಗೆ ಬಣ್ಣ ಬಣ್ಣದ ರಂಗೋಲಿ ಬಿಡಿಸಿ ಎಲ್ಲರ ಗಮನ ಸೆಳೆದರು.

ರಂಗೋಲಿ ಉತ್ಸವದಲ್ಲಿ ವಿಜೇತರಾದ ಪ್ರಿಯಾಂಕ, ಚಂದನ ಅವರು ರಾಬಿಯಾ ಬಿಸ್ರಿಯಾ ಅವರಿಗೆ ಶಾಸಕ ಎಸ್. ರಾಮಪ್ಪ ಅವರು ಆಕರ್ಷಕ ಬಹುಮಾನ ನೀಡಿ ಅಭಿನಂದಿಸಿದರು.

ಈ ವೇಳೆ ಮಾತನಾಡಿದ ಶಾಸಕ ರಾಮಪ್ಪ ಅವರು, ಮಕರ ಸಂಕ್ರಾಂತಿ ಹಬ್ಬವು ಎಲ್ಲಾ ಜನರಿಗೆ ತುಂಬಾ ಇಷ್ಟವಾದ ಹಾಗೂ ಪ್ರಕೃತಿಯ ವಿಶೇಷತೆ ಹೊಂದಿರುವ ಹಬ್ಬ ಇದಾಗಿದ್ದು, ಕಾಂಗ್ರೆಸ್ ಪಕ್ಷದ ಸೂಚನೆಯಂತೆ ರಾಜ್ಯದಲ್ಲಿ ತಿರಂಗಾ ರಂಗೋಲಿ ಸ್ಪರ್ಧೆ ಏರ್ಪಡಿಸುವ ಮೂಲಕ ಮಹಿಳೆಯರಲ್ಲಿ ಸಂಭ್ರಮ ಹೆಚ್ಚಿಸುವ ಕೆಲಸ ಮಾಡಿದ್ದೇವೆ ಎಂದರು.

ಯುವ ಮುಖಂಡ ನಂದಿಗಾವಿ ಶ್ರೀನಿವಾಸ್, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಎಸ್.ಬಿ.ಕೆ.ಎಂ. ವಿದ್ಯಾಸಂಸ್ಥೆಯ ಡಾ. ಬಿ. ಚಂದ್ರಶೇಖರ್ ಮಾತನಾಡಿ, ಕಾರ್ಯಕ್ರಮದ ಮೆಚ್ಚುಗೆ ವ್ಯಕ್ತಪಡಿಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ. ಅಬೀದ್ ಅಲಿ ಅಧ್ಯಕ್ಷತೆ ವಹಿಸಿದ್ದರು.

**ವಿಜೇತರಿಗೆ ಶಾಸಕ ಎಸ್. ರಾಮಪ್ಪ ಬಹುಮಾನ ವಿತರಣೆ**

ಉತ್ಸವದ ನೇತೃತ್ವ ವಹಿಸಿದ್ದ 19ನೇ ವಾರ್ಡ್ ಪುರಸಭೆ ಸದಸ್ಯೆ ಶ್ರೀಮತಿ ವಿಜಯಲಕ್ಷ್ಮಿ ಕೆ.ಪಿ. ಗಂಗಾಧರ್ ಅವರು ರಂಗೋಲಿ ಉತ್ಸವದಲ್ಲಿ ಭಾಗಿಯಾದ ಎಲ್ಲರಿಗೂ ವೈಯಕ್ತಿಕವಾಗಿ ಬಹುಮಾನ ನೀಡಿದರು.

ಜಿ.ಪಂ. ಮಾಜಿ ಸದಸ್ಯ ಎಂ. ನಾಗೇಂದ್ರಪ್ಪ, ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷ ನಿಖಿಲ್ ಕೊಂಡಜ್ಜಿ, ಎಸ್‌ಬಿಕೆಎಂ ವಿದ್ಯಾಸಂಸ್ಥೆಯ ಹೆಚ್. ಜಿ. ಚಂದ್ರಶೇಖರ್, ಎಂ. ಮಾರಪ್ಪ, ಶಾಲಾ ಮುಖ್ಯ ಶಿಕ್ಷಕ ದಂಡಿ ತಿಪ್ಪೇಸ್ವಾಮಿ, ಪುರಸಭೆ ಸದಸ್ಯರಾದ ನಯಾಜ್, ಸಾಬೀರ್ ಅಲಿ, ಷಾ ಅಬ್ರಾರ್, ದಾದಾಪೀರ್, ಮಾಜಿ ಸದಸ್ಯ ಎ. ಆರೀಫ್ ಅಲಿ, ಗ್ರಾ.ಪಂ. ಮಾಜಿ ಅಧ್ಯಕ್ಷ ಭೋವಿಕುಮಾರ್, ಜನತಾ ಬಜಾರ್ ನಿರ್ದೇಶಕ ಪಿ.ಹೆಚ್. ಶಿವಕುಮಾರ್, ತಾ. ಓಬಿಸಿ ಕಾಂಗ್ರೆಸ್ ಅಧ್ಯಕ್ಷ ಕೆ.ಪಿ. ಗಂಗಾಧರ್, ಬ್ಲಾಕ್ ಕಾಂಗ್ರೆಸ್ ಮಹಿಳಾ ಅಧ್ಯಕ್ಷೆ ವಿದ್ಯಾ ಗಡದ್, ನೇತ್ರಾ ಬಸವರಾಜ್, ಯಲವಟ್ಟಿ ಕೊಟ್ರೇಶ್‌ನಾಯ್ಕ, ತಿಪ್ಪೇಶ್, ಕಾಂಗ್ರೆಸ್ ಸಾಮಾಜಿಕ ಜಾಲತಾಣದ ಬಸವರಾಜ್ ದೊಡ್ಮನಿ ಸೇರಿದಂತೆ ಇನ್ನೂ ಅನೇಕರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಕಲಾ ಪ್ರದರ್ಶನ, ವಿಚಾರ ಗೋಷ್ಠಿ,

ಸ್ಫೂರ್ತಿ ಸೇವಾ ಸಂಘ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ಇಂದು ಬೆಳಿಗ್ಗೆ 11 ಕ್ಕೆ ರೋಟರಿ ಬಾಲಭವನದಲ್ಲಿ ಜಾನಪದ ಕಲಾ ಪ್ರದರ್ಶನ ಹಾಗೂ ವಿಚಾರ ಗೋಷ್ಠಿ, ಜಾನಪದ ಗೀತೆಗಳ ಗಾಯನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಎಲ್.ಹೆಚ್. ಅರುಣ್‌ಕುಮಾರ್ ಕಾರ್ಯಕ್ರಮವನ್ನು ಉದ್ಘಾಟಿಸುವರು. ಎಂ.ಎಸ್. ನಾಗರಾಜಪ್ಪ ಮೆಳ್ಳೇಕಟ್ಟೆ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳು : ರವಿಚಂದ್ರ, ಡಾ.ಎ. ಶಿವನಗೌಡ್ರು, ಡಾ. ಜಿ. ಸಿದ್ಧಪ್ಪ.

ಚನ್ನಗಿರಿ ತಾಲ್ಲೂಕು ಹವ್ಯಾಸಿ ಗ್ರಾಮೀಣ ವಿವಿಧ ಕಲಾವಿದರ ಒಕ್ಕೂಟದ ಅಧ್ಯಕ್ಷ ಬಿ.ಇ. ತಿಪ್ಪೇಸ್ವಾಮಿ ಅವರು ಯಕ್ಷಗಾನ, ಮೂಡಲಪಾಯ, ಬಯಲಾಟದ ಸ್ಥಿತಿಗತಿಗಳ ಕುರಿತು ಉಪನ್ಯಾಸ ನೀಡಲಿದ್ದಾರೆ ಎಂದು ಸ್ಫೂರ್ತಿ ಸಾಂಸ್ಕೃತಿಕ ಸೇವಾ ಸಂಘದ ಅಧ್ಯಕ್ಷ ಎನ್.ಎಸ್. ರಾಜು ತಿಳಿಸಿದ್ದಾರೆ.

## ಮಲೇಬೆನ್ನೂರಿನಲ್ಲಿ ಪಡಿಪೂಜೆ : ಅಪಾರ ಭಕ್ತರು ಭಾಗಿ



ಮಲೇಬೆನ್ನೂರು, ಜ.14- ಇಲ್ಲಿನ ಗ್ರಾಮ ದೇವತೆ ಶ್ರೀ ಏಕನಾಥೇಶ್ವರ ಅಮ್ಮನವರ ದೇವಸ್ಥಾನದ ಆವರಣದಲ್ಲಿ ಅಖಿಲ ಭಾರತ ಅಯ್ಯಪ್ಪ ಸ್ವಾಮಿ ಸೇವಾ ಸಮಿತಿ ವತಿಯಿಂದ ಶನಿವಾರ ಸಂಜೆ ಅಯ್ಯಪ್ಪ ಸ್ವಾಮಿ ಮಾಲಾಧಾರಿಗಳು ಹಮ್ಮಿಕೊಂಡಿದ್ದ ಪಡಿ ಪೂಜೆಯಲ್ಲಿ ಮಾಜಿ ಶಾಸಕ ಬಿ.ಪಿ. ಹರೀಶ್, ಜಿಲ್ಲಾ ಬಿಜೆಪಿ ಅಧ್ಯಕ್ಷ ಹನಗವಾಡಿ ಡಿ. ವೀರೇಶ್, ಜಿ.ಪಂ. ಮಾಜಿ ಸದಸ್ಯ ಬಿ.ಎಂ. ವಾಗೀಶ್ ಸ್ವಾಮಿ, ರೈಸ್ ಮಿಲ್ ಮಾಲೀಕ ಯಕ್ಕನಹಳ್ಳಿ ಬಸವರಾಜಪ್ಪ ಸೇರಿದಂತೆ ಸಾವಿರಾರು ಭಕ್ತರು ಪಾಲ್ಗೊಂಡಿದ್ದರು.

## ಜೋಶಿಮಠ ಹೇಳಿಕೆ ನೀಡದಂತೆ ಸೂಚನೆ

ಜೋಶಿಮಠ, ಜ. 14 – ಪೂರ್ವಾನುಮತಿ ಪಡೆಯದೇ ಜೋಶಿಮಠದ ಪರಿಸ್ಥಿತಿ ಕುರಿತು ಮಾಧ್ಯಮಗಳಿಗೆ ಯಾವುದೇ ಹೇಳಿಕೆ ನೀಡದಂತೆ ಸರ್ಕಾರಿ ಸಂಸ್ಥೆಗಳಿಗೆ ಸೂಚನೆ ನೀಡಲಾಗಿದೆ. ರಾಷ್ಟ್ರೀಯ ವಿಕೋಪ ನಿರ್ವಹಣಾ ಪ್ರಾಧಿಕಾರ ಹಾಗೂ ಉತ್ತರಾಖಂಡ ಸರ್ಕಾರಗಳು ಈ ಸೂಚನೆ ನೀಡಿವೆ.

ಜೋಶಿಮಠ ಡಿಸೆಂಬರ್ 27ರಿಂದ ಜನವರಿ 8ರ ನಡುವೆ 5.2 ಸೆಂ.ಮೀ. ಕುಸಿದಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆಯಾದ ಇಸ್ರೋ ತಿಳಿಸಿತ್ತು. ನಂತರ ದಲ್ಲಿ ಮಾಹಿತಿ ಬಹಿರಂಗ ಪಡಿಸದಂತೆ ಸೂಚನೆ ನೀಡಲಾಗಿದೆ. ಇಸ್ರೋ ಚಿತ್ರಗಳನ್ನು ವಾಪಸ್ ಪಡೆಯಲಾಗಿದೆ ಎಂದು ಉತ್ತರಾಖಂಡ ಸಚಿವ ಧನ್ ಸಿಂಗ್ ರಾವತ್ ತಿಳಿಸಿದ್ದಾರೆ.

ಚಿತ್ರಗಳ ಆಧಾರದ ಮೇಲೆ ಇಸ್ರೋ ಯಾವುದೇ ಅಧಿಕೃತ ಹೇಳಿಕೆ ನೀಡಿಲ್ಲ ಎಂದೂ ರಾವತ್ ಹೇಳಿದ್ದಾರೆ. ಜೋಶಿಮಠದಲ್ಲಿ ಪರಿಸ್ಥಿತಿ ಸಾಮಾನ್ಯವಾಗುತ್ತಿದೆ. ಯಾರೂ ಕಳವಳಪಡಬೇಕಿಲ್ಲ ಎಂದು ರಾವತ್ ತಿಳಿಸಿದ್ದಾರೆ.

## ಶ್ರೀಶೈಲದಲ್ಲಿ ವೀರಶೈವ ಸಭಾದ ಅಧಿವೇಶನ



ದಾವಣಗೆರೆ, ಜ.14- ಆಂಧ್ರಪ್ರದೇಶದ ಶ್ರೀಶೈಲ ಮಠದಲ್ಲಿ ಶನಿವಾರ ನಡೆದ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಒಂದು ದಿನದ ಅಧಿವೇಶನವನ್ನು ಮಹಾಸಭಾ ರಾಷ್ಟ್ರೀಯ ಅಧ್ಯಕ್ಷ ಶಾಮನೂರು ಶಿವಶಂಕ್ರಪ್ಪ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಪಂಚಪೀಠಾಧೀಶರು, ಮಹಾಸಭಾ ಪದಾಧಿಕಾರಿಗಳು ಸಮಾಜದ ಗಣ್ಯರು ಉಪಸ್ಥಿತರಿದ್ದರು.

## ದೋರನಹಳ್ಳಿ ಹಿರೇಮಠದ ವೀರ ಮಹಾಂತ ಶ್ರೀ ಅಗಲಿಕೆಗೆ ರಂಭಾಪುರಿ ಶ್ರೀಗಳ ಸಂತಾಪ



ಶ್ರೀ ರಂಭಾಪುರಿ ಪೀಠ (ಬಾಳೆಹೊನ್ನೂರು), ಜ. 14- ಶಹಪೂರ ತಾಲ್ಲೂಕಿನ ದೋರನಹಳ್ಳಿ ಹಿರೇಮಠದ ಶ್ರೀ ವೀರ ಮಹಾಂತ ಶಿವಾಚಾರ್ಯ ಸ್ವಾಮಿಗಳು ಹೃದಯಾಘಾತದಿಂದ ತಮ್ಮ 48ನೇ ವರುಷದಲ್ಲಿ ಲಿಂಗೈಕ್ಯರಾಗಿದ್ದು, ಶ್ರೀ ರಂಭಾಪುರಿ ಡಾ.ವೀರ ಸೋಮೇಶ್ವರ ಜಗದ್ಗುರುಗಳು ತಮ್ಮ ಸಂತಾಪ ವ್ಯಕ್ತಪಡಿಸಿದ್ದಾರೆ. ಶ್ರೀಗಳವರ ಅಧಿಕಾರಾವಧಿಯಲ್ಲಿ ಶ್ರೀ ಮಠದ ಅಭಿವೃದ್ಧಿ, ಭಕ್ತರಿಗೆ ಸಂಸ್ಕಾರ ಕೊಡುವಂತಹ ಕಾರ್ಯವನ್ನು ಯಶಸ್ವಿಯಾಗಿ ನೆರವೇರಿಸಿಕೊಂಡು ಬಂದಿದ್ದರು ಎಂದು ಜಗದ್ಗುರುಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

## ಚಿಮ್ಮಲಗಿಮಠದ ನೀಲಕಂಠ ಶ್ರೀಗಳ ಅಗಲಿಕೆಗೆ ರಂಭಾಪುರಿ ಶ್ರೀ ಸಂತಾಪ



ಶ್ರೀ ರಂಭಾಪುರಿ ಪೀಠ, ಜ.14- ವಿಜಯಪುರ ಜಿಲ್ಲೆ ನಿಡಗುಂದಿ ತಾಲ್ಲೂಕಿನ ಚಿಮ್ಮಲಗಿ ಅರಳೆಲೆ ಕಟ್ಟೀಮನಿ ಹಿರೇಮಠದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ತಮ್ಮ 88ನೇ ವಯಸ್ಸಿನಲ್ಲಿ ಲಿಂಗೈಕ್ಯರಾಗಿದ್ದು, ಶ್ರೀ ರಂಭಾಪುರಿ ಡಾ.ವೀರ ಸೋಮೇಶ್ವರ ಜಗದ್ಗುರುಗಳು ಸಂತಾಪ ವ್ಯಕ್ತಪಡಿಸಿದ್ದಾರೆ. ಲಿಂಗೈಕ್ಯರಾದ ಶ್ರೀ ನೀಲಕಂಠ ಶಿವಾಚಾರ್ಯ ಸ್ವಾಮಿಗಳು ಅತ್ಯಂತ ಕಿರಿಯ ವಯಸ್ಸಿನಲ್ಲಿ ಗುರುತ್ವಾಧಿಕಾರ ಸ್ವೀಕರಿಸಿ, ನಾಡಿನ ನಾನಾ ಭಾಗಗಳಲ್ಲಿ ತಪೋನುಷ್ಠಾನ ಕೈಕೊಂಡವರು. ಪ್ರಸ್ತುತ ಶ್ರೀ ರಂಭಾಪುರಿ ಜಗದ್ಗುರುಗಳ ಪ್ರಪ್ರಥಮ ದಸರಾ ನಿಡಗುಂದಿಯಲ್ಲಿ ನೆರವೇರಿಸಿ ಭಕ್ತರ ಕಣ್ಮಣಿಯಾಗಿದ್ದರು ಎಂದು ಶ್ರೀ ರಂಭಾಪುರಿ ಜಗದ್ಗುರುಗಳು ಶ್ಲಾಘಿಸಿದ್ದಾರೆ.


**ಸಂಕ್ರಾಂತಿ ಶುಭಾಶಯಗಳು**



ನಮ್ಮೆಲ್ಲಾ ಆತ್ಮೀಯ ಸ್ನೇಹಿತರಿಗೂ, ಬಂಧುಗಳಿಗೂ ಹಾಗೂ ನಗರದ ಸರ್ವ ನಾಗರಿಕರಿಗೂ "ಸಂಕ್ರಾಂತಿ" ಹಬ್ಬದ ಹಾರ್ದಿಕ ಶುಭಾಶಯಗಳು.

**ಪವಾಡಪ್ಪ ತಿಪ್ಪೇಸ್ವಾಮಿ** ದಸ್ತಾವೇಜು ಬರಹಗಾರರು,
ಸಬ್ ರಿಜಿಸ್ಟ್ರಾರ್ ಕಛೇರಿ ಆವರಣ, ಪಿ.ಬಿ. ರಸ್ತೆ, ದಾವಣಗೆರೆ. ಮೊ.: 98443 31765


# ಇಂದಿನಿಂದ ಸಿದ್ಧಗಂಗಾ ವಿದ್ಯಾಸಂಸ್ಥೆ ವಾರ್ಷಿಕೋತ್ಸವದ ಸಂಭ್ರಮ

ದಾವಣಗೆರೆ, ಜ. 14- ನಗರದ ಸಿದ್ಧಗಂಗಾ ವಿದ್ಯಾಸಂಸ್ಥೆಯ 53ನೇ ವಾರ್ಷಿಕೋತ್ಸವ ಸಂಭ್ರಮವನ್ನು ನಾಳೆ ದಿನಾಂಕ 15ರಿಂದ 19ವರೆಗೆ ಐದು ದಿನಗಳ ಕಾಲ ಹಮ್ಮಿಕೊಳ್ಳಲಾಗಿದೆ.

15ರಂದು ಬೆಳಗ್ಗೆ 10ಕ್ಕೆ ಶಾಮನೂರು ಶಿವಶಂಕರಪ್ಪ ಕಲ್ಯಾಣ ಮಂದಿರದಲ್ಲಿ ಸಿದ್ಧಗಂಗಾ ಪ್ರತಿಭಾ ಪುರಸ್ಕಾರ ಸಮಾರಂಭ ಹಮ್ಮಿಕೊಂಡಿದ್ದು, ಶೇ.90ಕ್ಕೂ ಹೆಚ್ಚು ಅಂಕ ಗಳಿಸಿರುವ ಎಸ್‌ಎಸ್‌ಎಲ್‌ಸಿ ಮತ್ತು ಸಿಬಿಎಸ್‌ಇ 10ನೇ ತರಗತಿಯ ಹಾಗೂ ದ್ವಿತೀಯ ಪಿಯುಸಿ ವಿಭಾಗದ ಒಟ್ಟು 636 ಮಕ್ಕಳಿಗೆ ಸಿದ್ಧಗಂಗಾ ಪ್ರಶಸ್ತಿ ನೀಡಿ ಪುರಸ್ಕರಿಸಲಾಗುವುದು ಎಂದು ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಜಸ್ಟಿನ್ ಡಿಸೌಜ ಸುದ್ದಿಗೋಷ್ಠಿಯಲ್ಲಿ ತಿಳಿಸಿದ್ದಾರೆ.

ಈ ಕಾರ್ಯಕ್ರಮವನ್ನು ನಿವೃತ್ತ ಲೋಕಾಯುಕ್ತ ಎನ್. ಸಂತೋಷ್ ಹೆಗ್ಡೆ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ಜೆ.ಸಿ. ನಿರಂಜನ್ ಆಗಮಿಸಲಿದ್ದು, ಎಲ್.ವಿ. ಸುಬ್ರಹ್ಮಣ್ಯ, ಗಣೇಶ್ ಭಟ್, ಆರ್.ಎಸ್. ಗಣೇಶ್ ಪ್ರಸಾದ್, ವಾಣಿಶ್ರೀ ಉಪಸ್ಥಿತರಿರುವರು. ತಾವು ಅಧ್ಯಕ್ಷತೆ ವಹಿಸುವುದಾಗಿ ಹೇಳಿದರು.





ಜನವರಿ 16, 17, 18, 19ರ ನಾಲ್ಕು ದಿನಗಳ ವಾರ್ಷಿಕ ಸಂಭ್ರಮ ಕಾರ್ಯಕ್ರಮವು ಸಿದ್ಧಗಂಗಾ ವಿದ್ಯಾಸಂಸ್ಥೆಯ ಆವರಣದಲ್ಲಿ ನಡೆಯಲಿದೆ. ಶಿಕ್ಷಣ ಶಿಲ್ಪಿ ಎಂ.ಎಸ್. ಶಿವಣ್ಣನವರ ಗೌರವಾರ್ಥ ಕಳೆದ ಎಂಟು ವರ್ಷಗಳಿಂದ ರಾಜ್ಯ ಮಟ್ಟದ ಲಿಖಿತ ಕ್ವಿಜ್ ನಡೆಸಲಾಗುತ್ತಿದೆ. 2022ರ ಕ್ವಿಜ್‌ನಲ್ಲಿ ಪ್ರಥಮ ಬಹುಮಾನ 25 ಸಾವಿರ, ದ್ವಿತೀಯ ಬಹುಮಾನ 15 ಸಾವಿರ ಮತ್ತು ತೃತೀಯ ಬಹುಮಾನ 10 ಸಾವಿರ ಮತ್ತು 14 ಮಕ್ಕಳು ತಲಾ 1 ಸಾವಿರ ಸಮಾಧಾನಕರ ಬಹುಮಾನ ಪಡೆಯಲಿದ್ದಾರೆ. ಇದರೊಂದಿಗೆ 45 ದತ್ತಿ ಪ್ರಶಸ್ತಿಗಳು ಪ್ರದಾನ ಮಾಡಲಾಗುವುದು.

ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಬಿ.ಡಿ. ಕುಂಬಾರ್ ಉದ್ಘಾಟಿಸುವರು. ಶಿವಮೊಗ್ಗ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕಿ ಪ್ರಶಸ್ತಿ ಪಡೆದ ವೀಣಾ ಪಿ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ಇದೇ ದಿನಾಂಕ 17ರ ಮಂಗಳವಾರ ಸಿದ್ಧಗಂಗಾ ಪ್ರಶಸ್ತಿ ಮತ್ತು ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭದ ಉದ್ಘಾಟನೆಯನ್ನು ಬೆಸ್ಕಾಂನ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ ಆಗಮಿಸಲಿದ್ದಾರೆ. ಕೆಪಿಟಿಸಿಎಲ್ ಎಕ್ಸಿಕ್ಯುಟಿವ್ ಇಂಜಿನಿಯರ್ ಶಾರದಾ ಅತಿಥಿಗಳಾಗಿರುತ್ತಾರೆ.

ದಿನಾಂಕ 18ರ ಬುಧವಾರದ ಕಾರ್ಯಕ್ರಮದ ಉದ್ಘಾಟನೆಯನ್ನು ಬಾಪೂಜಿ ವಿದ್ಯಾಸಂಸ್ಥೆಯ ನಿರ್ದೇಶಕರಾದ ಡಾ. ಪ್ರಭಾ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸುವರು. ನಾಡಿನ ಸಾಹಿತಿ ಬಿ.ಆರ್. ಲಕ್ಷ್ಮಣ ರಾವ್ ಮುಖ್ಯ ಅತಿಥಿಗಳಾಗಿದ್ದಾರೆ.

ದಿನಾಂಕ 19ರ ಕಾರ್ಯಕ್ರಮದ ಉದ್ಘಾಟನೆಯನ್ನು ಶಿವಮೊಗ್ಗದ ಕುವೆಂಪು ವಿಶ್ವವಿದ್ಯಾಲಯದ ಕುಲಪತಿ ಡಾ. ಬಿ.ಪಿ. ವೀರಭದ್ರಪ್ಪ ಉದ್ಘಾಟಿಸುವರು. ಎಸ್.ಎಸ್. ವೈದ್ಯಕೀಯ ಕಾಲೇಜಿನ ಅಸಿಸ್ಟೆಂಟ್ ಪ್ರೊ. ಡಾ. ವಿನಯ್ ಎಸ್. ಅಪ್ಪಣ್ಣನವರ್ ಮುಖ್ಯ ಅತಿಥಿಗಳಾಗಿರುತ್ತಾರೆ. ಈ ಐದು ದಿನಗಳಲ್ಲಿ ಮಕ್ಕಳು ವೈವಿಧ್ಯಮಯವಾದ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಪ್ರತಿದಿನ ಸಂಜೆ 5 ಗಂಟೆಯಿಂದ ಸುಗಮ ಸಂಗೀತದಿಂದ ಪ್ರಾರಂಭವಾಗಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಸ್ಥೆಯ ನಿರ್ದೇಶಕ ಡಾ. ಡಿ.ಎಸ್. ಜಯಂತ್, ಪದವಿ ಪೂರ್ವ ಕಾಲೇಜು ಪ್ರಾಚಾರ್ಯ ಜೆ.ಸಿ. ನಿರಂಜನ್, ಸಿದ್ಧಗಂಗಾ ಶಾಲೆ ಮುಖ್ಯಶಿಕ್ಷಕಿ ರೇಖಾ ರಾಣಿ, ಸಿದ್ಧಗಂಗಾ ಸಿಬಿಎಸ್‌ಇ ಶಾಲೆಯ ಪ್ರಾಚಾರ್ಯರಾದ ಗಾಯತ್ರಿ ಚಿಮ್ಮಡ್, ಹಿರಿಯ ವಿದ್ಯಾರ್ಥಿಗಳಾದ ರಾಮ್ ಮನೋಹರ್, ಹರ್ಷ, ಸಾಮ್ರಾಟ್ ಇದ್ದರು.




## ಪದವಿ : ಹಳೆಯ ಪರೀಕ್ಷಾರ್ಥಿಗಳಿಗೆ ಪರೀಕ್ಷೆ ಬರೆಯಲು ಅವಕಾಶ

ದಾವಣಗೆರೆ, ಜ.14- ಕುವೆಂಪು ವಿಶ್ವವಿದ್ಯಾಲಯ ವ್ಯಾಪ್ತಿಯ ಸಂಯೋಜಿತ ಕಾಲೇಜುಗಳಲ್ಲಿ ಸ್ನಾತಕ ಪದವಿಗಳಿಗೆ 2003-04 ರಲ್ಲಿ ಹಾಗೂ ಆ ನಂತರ ಪ್ರವೇಶ ಪಡೆದ ಸೆಮಿಸ್ಟರ್ ಸ್ಕೀಂನಲ್ಲಿ ಅಧ್ಯಯನ ಮಾಡಿ. ಕೋರ್ಸ್ ಪೂರ್ಣಗೊಳಿಸಲು ನಿಗದಿಪಡಿಸಲಾಗಿದ್ದ ಅವಧಿ (Double the duration) ಮುಗಿದರೂ ಸಹ ಈವರೆಗೂ ಪದವಿ ಪೂರ್ಣ ಗೊಳಿಸಲಾಗದೆ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಪರೀಕ್ಷೆ ಬರೆಯಲು ಕೊನೆಯ ಅವಕಾಶವನ್ನು ನೀಡಲಾಗಿದೆ.

ಸದರಿ ಅವಧಿಯಲ್ಲಿ ಕೋರ್ಸ್‌ಗಳನ್ನು ಪೂರ್ಣಗೊಳಿಸ ಲಾಗದ ಇಂತಹ ವಿದ್ಯಾರ್ಥಿಗಳಿಗೆ ಏಪ್ರಿಲ್/ಮೇ-2023ರ ಮಾಹೆಯಲ್ಲಿ ಪರೀಕ್ಷೆಯನ್ನು ಆಯೋಜಿಸಲಾಗಿದೆ ಪರೀಕ್ಷಾ ಶುಲ್ಕ ಹಾಗೂ ವೇಳಾಪಟ್ಟಿಯನ್ನು ಶೀಘ್ರವೇ ಪ್ರಕಟಿಸಲಾಗುವುದು ಎಂದು ಪರೀಕ್ಷಾಂಗ ಕುಲಸಚಿವರು ತಿಳಿಸಿದ್ದಾರೆ.

## ಶಾಸಕ ನಾಗೇಶ್, ವೈ.ಎಸ್.ವಿ. ದತ್ತ ಕಾಂಗ್ರೆಸ್‌ಗೆ

ಬೆಂಗಳೂರು, ಜ. 14 – ಪಕ್ಷೇತರ ಶಾಸಕ ಹೆಚ್. ನಾಗೇಶ್ ಹಾಗೂ ಜೆಡಿಎಸ್ ಮಾಜಿ ಶಾಸಕ ವೈ.ಎಸ್.ವಿ. ದತ್ತ ಅವರು, ಶನಿವಾರ ಕಾಂಗ್ರೆಸ್ ಸೇರಿದ್ದಾರೆ.

ಮಾಜಿ ಸಚಿವ ನಾಗೇಶ್ ಅವರು ಇತ್ತೀಚಿನವರೆಗೂ ಬಿಜೆಪಿ ಬೆಂಬಲಿಸುತ್ತಿದ್ದರು. ದತ್ತ ಅವರು ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ನಿಕಟವರ್ತಿ ಯಾಗಿದ್ದರು. ಉಭಯರು ಇಲ್ಲಿನ ಕೆ.ಪಿ.ಸಿ.ಸಿ. ಕಚೇರಿಯಲ್ಲಿ ತಮ್ಮ ಬೆಂಬಲಿಗರೊಂದಿಗೆ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.

## ನ್ಯಾಷನಲ್ ಒಲಂಪಿಯಾಡ್‌ನಲ್ಲಿ ಸೌಪರ್ಣ, ಸಾರಿಕಾಗೆ ಚಿನ್ನ




ದಾವಣಗೆರೆ, ಜ. 14- ಸೈನ್ಸ್ ಒಲಂಪಿಯಾಡ್ ಫೌಂಡೇಷನ್ ವತಿಯಿಂದ ಏರ್ಪಡಿಸಿದ್ದ ನ್ಯಾಷನಲ್ ಒಲಂಪಿಯಾಡ್ 2022-23 ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ನಗರದ ಶಿವ ಎಜುಕೇಷನಲ್ ಅಸೋಸಿಯೇಷನ್ನಿನ ಸೊಫ್ರೋಸೈನ್ ಕಾನ್ಸೆಪ್ಟ್ ಶಾಲೆಯ 3ನೇ ತರಗತಿಯ ಜೆ. ಸೌಪರ್ಣ, 8ನೇ ತರಗತಿಯ ಸಾರಿಕಾ ಚಿನ್ನದ ಪದಕ ಗಳಿಸಿದ್ದಾರೆ.


# 12ನೇ ವರ್ಷದ ಪುಣ್ಯಸ್ಮರಣೆ



**ದಿ|| ವೈ.ಜಿ. ಪರಮೇಶ್ವರಪ್ಪ** ಬಿ.ಇ.(ಸಿವಿಲ್) Rtd. AEE


ಜನನ: 12.10.1946 ಮರಣ: 16.01.2011

"ನಮ್ಮ ಬದುಕಿಗೆ ಕ್ರಿಯಾಶೀಲತೆಯನ್ನು ತುಂಬಿ, ನಿಸರ್ಗದ ಮಡಿಲಲ್ಲಿ ನಮ್ಮೆಲ್ಲರನ್ನು ಬಿಟ್ಟು, ಸ್ವರ್ಗ ಸೇರಿದ ನಿಮ್ಮ ಆತ್ಮ ಮತ್ತೊಮ್ಮೆ ಭೂಮಿತಾಯಿಯ ಮೇಲೆ ಪ್ರತಿಬಿಂಬಿಸಲಿ"

ಸಾರ್ಥಕ ಬದುಕಿನ ಪಯಣದಲ್ಲಿ ನಿಮ್ಮ ಶ್ರಮ ಸಮುದ್ರದ ಅಲೆಗಳಂತೆ ಸದಾ ಹಸನ್ಮುಖಿಯಾಗಿ ರಾರಾಜಿಸಲಿ, ನಮ್ಮೆಲ್ಲರ ಬಾಳಿಗೆ ನಿಮ್ಮ ಆದರ್ಶ ಮತ್ತು ಆಶೀರ್ವಾದ ಶಾಶ್ವತವಾಗಿ ನಮ್ಮ ಮೇಲಿರಲಿ.

ಪತ್ನಿ: ಶ್ರೀಮತಿ ನಾಗರತ್ನಮ್ಮ (ಬಸಮ್ಮ)
ಮಕ್ಕಳು : ಶ್ರೀ ಪ್ರಶಾಂತ್ ಪಿ. ಹಲಸಬಾಳು, ಶ್ರೀ ಪ್ರಕಾಶ್ ಪಿ.ಹಲಸಬಾಳು, ಶ್ರೀಮತಿ ಪಲ್ಲವಿ ವಸಂತ ಕುಮಾರ್, ಶ್ರೀಮತಿ ದೀಪಿಕಾ ಶಿವಕಾಂತ್ ಬಿ.ಇ.
ಸೊಸೆಯಂದಿರು : ಶ್ರೀಮತಿ ಸ್ಮಿತಾ ಪ್ರಶಾಂತ್ ಹಲಸಬಾಳು, ಶ್ರೀಮತಿ ಶಿಲ್ಪಾ ಪ್ರಕಾಶ್ ಹಲಸಬಾಳು.
ಅಳಿಯಂದಿರು : ಶ್ರೀ ಕೆ.ಎಸ್.ವಸಂತ ಕುಮಾರ್, ಬಿ.ಇ. ದಾವಣಗೆರೆ. ಶ್ರೀ ಶಿವಕಾಂತ್ ಬಿ.ಇ.ಎಂ.ಎಸ್. (ಯು.ಕೆ.)
ಮೊಮ್ಮಕ್ಕಳು : ಮಾ|| ಪ್ರಜ್ವಲ್ ಪ್ರಶಾಂತ್ ಪಿ.ಹೆಚ್., ಮಾ|| ಶ್ರೇಯಸ್ ಪ್ರಕಾಶ್ ಪಿ.ಹೆಚ್., ಕು|| ಲಾವಣ್ಯ ಪ್ರಶಾಂತ್ ಪಿ.ಹೆಚ್., ಕು|| ನಿತ್ಯಶ್ರೀ ವಸಂತ ಕುಮಾರ್, ಮಾ|| ಮಿಥುನ್ ವಸಂತ ಕುಮಾರ್, ಮಾ|| ಅಜಯ್ ಶಿವಕಾಂತ್ ಹಾಗೂ ಬಂಧು-ಮಿತ್ರರು.

# ಜನ್ಮದಿನದ ಶುಭಾಶಯಗಳು




ಶ್ರೀ ಕ್ಷೇತ್ರಪಾಲ್ ಸಂಸ್ಥೆಯ ಸ್ಥಾಪಕರಾದ
**ಶ್ರೀ ನವೀನ್ ಜೈನ್**
ಅವರಿಗೆ 40ನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳು

ಶುಭ ಕೋರುವವರು :
**ಶ್ರೀ ಕ್ಷೇತ್ರಪಾಲ್ ಗ್ರೂಪ್ಸ್**

# ದ್ವಿತೀಯ ವರ್ಷದ ಪುಣ್ಯಸ್ಮರಣೆ



ದಾವಣಗೆರೆ #1969/58, 1ನೇ ಮೇನ್, "ಕ್ಷೀರ", ಎಸ್.ಎಸ್. ಬಡಾವಣೆ, "ಬಿ" ಬ್ಲಾಕ್ ವಾಸಿಯಾದ

**ದಿ|| ಕ್ಷೀರ ಪೊರಾಳ್**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು,
ಸದಾ ನಿನ್ನ ಸ್ಮರಣೆಯಲ್ಲಿರುವ ನಿನ್ನ ತಂದೆ-ತಾಯಿಯಾದ...
ಶ್ರೀಮತಿ ಪೂರ್ಣಿಮಾ ಎಂ.ಎಸ್. ಮತ್ತು ಡಾ|| ಸುರೇಶ್ ಬಾಬು ಪಿ.ಆರ್.
ತಾತ : ಮಂಚಿ ಸತ್ಯನಾರಾಯಣ ಮತ್ತು ಮಾವಂದಿರಾದ : ಎಂ.ಎಸ್. ಸುರೇಶ್, ಶ್ರೀಮತಿ ಸಂಧ್ಯಾ ಹಾಗೂ ಎಂ.ಎಸ್. ನಾಗರಾಜ್, ಶ್ರೀಮತಿ ಶೋಭ ಹಾಗೂ ಪೊರಾಳ್ ವಂಶಸ್ಥರು

# ದ್ವಿತೀಯ ವರ್ಷದ ಪುಣ್ಯಸ್ಮರಣೆ



ಜನನ : 25.10.1973, ಮರಣ 15.01.2021

**ಶ್ರೀಮತಿ ರಾಜೇಶ್ವರಿ ಬಂಧಮ್ಮನವರ್**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು
ಸದಾ ನಿಮ್ಮ ಸ್ಮರಣೆಯಲ್ಲಿರುವ....
ಪತಿ : ಶಿವಕುಮಾರ್ ಬಂಧಮ್ಮನವರ್
ಮಕ್ಕಳಾದ : ಚಿ|| ಭರತ್ ಎಸ್.ಬಿ. ಹಾಗೂ ಚಿ|| ವರುಣ ಎಸ್.ಬಿ.
ತಂದೆ-ತಾಯಿಯರಾದ : ಶ್ರೀಮತಿ ಸೌಭಾಗ್ಯ ಶ್ರೀ ಬಸವರಾಜಪ್ಪ ಅಂದನೂರ್ ಹಾಗೂ ಗುರುರಾಜ್ ಎ.ಬಿ.
ಮಾವ-ಅತ್ತೆಯರಾದ : ಶ್ರೀಮತಿ ಶೋಭಾ, ಶ್ರೀ ಕೆ.ಎಂ. ಬಂಧಮ್ಮನವರ್, ವಕೀಲರು, ಮಕ್ಕಳು ಹಾಗೂ ಮೊಮ್ಮಕ್ಕಳು, ರಾಣೇಬೆನ್ನೂರು.
ಶ್ರೀಮತಿ ಡಾ|| ವಿಜಯಲಕ್ಷ್ಮಿ, ಶ್ರೀ ಡಾ|| ಸುರೇಂದ್ರನ್ ಹಾಗೂ ಶ್ರೀಮತಿ ಡಾ|| ಸಂಗೀತ, ಶ್ರೀಮತಿ ನೀಲಗುಂದ ಜಯಮ್ಮ
ನೀಲಗುಂದ ಸಿದ್ರಾಮಣ್ಣ ಕಾಂಪ್ಲೆಕ್ಸ್, ಅಶೋಕ ರೋಡ್, ದಾವಣಗೆರೆ.
ಬಂಧಮ್ಮನವರ್ ವಂಶಸ್ಥರು ಹಾಗೂ ಅಂದನೂರ್ ಬಂಧುಗಳು ಹಾಗೂ ಮಿತ್ರರು

# ದ್ವಿತೀಯ ವರ್ಷದ ಪುಣ್ಯಸ್ಮರಣೆ



**ಮತ್ತೆ ಹುಟ್ಟಿ ಬಾ ಮಂಜು**

ಜನನ : 24.04.1973, ಮರಣ 15.01.2021

**ಶ್ರೀಮತಿ ಮಂಜುಳ ನಟೇಶ್**

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ಸದಾ ನಿಮ್ಮ ನೆನಪಿನಲ್ಲೇ ದಿನ ಮುಂದೂಡುತ್ತಿರುವ
ಪತಿ : ನಟೇಶ್
ಮಕ್ಕಳಾದ : ಸುಜನ್. B.E. (ಸಿವಿಲ್ ಕಂಟ್ರ್ಯಾಕ್ಟರ್), ಸುಮನ್
ಅತ್ತೆ : ಶ್ರೀಮತಿ ವಿಶಾಲ
ತಂದೆ-ತಾಯಿಯವರಾದ : ಶ್ರೀಮತಿ ಸುವರ್ಣ, ಶ್ರೀ ಬಸವರಾಜಪ್ಪ
ತಂಗಿ: ಹೇಮ ವಿನೋದ್, ಭಾವ: ವಿನೋದ್, ಮಗಳು : ಶ್ರೇಷ್ಠ
ಗುಡೇಕೋಟಿ ವಂಶಸ್ಥರು
**ಜಗದೀಶ್ ಏಜನ್ಸೀಸ್**
ಲೂಬ್ರಿಕೆಂಟ್ ಡೀಲರ್ಸ್, ಪಿ.ಬಿ. ರಸ್ತೆ, ದಾವಣಗೆರೆ.

# ದ್ವಿತೀಯ ವರ್ಷದ ಪುಣ್ಯಸ್ಮರಣೆ



**ಲಿಂಗೈಕ್ಯ ಶ್ರೀಮತಿ ಪ್ರೀತಿ ರವಿಕುಮಾರ್**

ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಆರೈಕೆ ಆಸ್ಪತ್ರೆ, ಹದಡಿ ರಸ್ತೆ, ದಾವಣಗೆರೆ.

ನೀವು ನಮ್ಮನ್ನಗಲಿ ಎರಡು ವರ್ಷಗಳಾದವು.... ಸದಾ ನಿಮ್ಮ ನೆನಪಿನಲ್ಲಿರುವ...

ಶ್ರೀಮತಿ ಮೇಘನಾ ಮತ್ತು ಪವಿತ್ರ ಎಸ್.ಕೆ. ಹಾಗೂ ಕು|| ಗೌರಿ, ಚಿ|| ಸಮನ್ಯೂ
ಅಧ್ಯಕ್ಷರು : ರೈತರ ಫಸಲುಗಳ ಪರಿವರ್ತನ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ ನಿ.,
ಅಧ್ಯಕ್ಷರು : ಶ್ರೀ ಕಲ್ಲೇಶ್ವರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,
ಶ್ರೀಮತಿ ಶ್ವೇತಾ ಮತ್ತು ಪ್ರದೀಪ್ ಎಸ್.ಕೆ.
**ಶ್ರೀ ಕಲ್ಲೇಶ್ವರ ಎಂಟರ್‌ಪ್ರೈಸಸ್**
**ಶ್ರೀ ಕಲ್ಲೇಶ್ವರ ಡೆವಲರ್ ಮತ್ತು ಬಿಲ್ಡರ್ಸ್**
ಶಾಮನೂರು ವಂಶಸ್ಥರು ಹಾಗೂ ಬಂಧು-ಮಿತ್ರರು.

|| ಶ್ರೀ ಗುಂಟನೂರು ದ್ಯಾಮಲಾಂಬಿಕಾ ಪ್ರಸನ್ನ ||

# ಕೈಲಾಸ ಶಿವಗಣಾರಾಧನೆ


ಶಿವ

ಶಿವ


ಚಿತ್ರದುರ್ಗ ಜಿಲ್ಲೆ ಸಿರಿಗೆರೆ ವಾಸಿ, ದಿ|| ಶ್ರೀಮತಿ ಗಂಗಮ್ಮ ಮತ್ತು ದಿ|| ಶ್ರೀ ಎಸ್.ಬಿ. ಮಹದೇವಪ್ಪನವರ ಸೊಸೆ
**ಶ್ರೀಮತಿ ಕೆ. ಸುಶೀಲ ಮತ್ತು ಮಕ್ಕಳು,** ಕಿರುವಾಡಿ ಲೇ ಔಟ್, ಕೆ.ಬಿ. ಬಡಾವಣೆ, ದಾವಣಗೆರೆ
ಇವರು ಮಾಡುವ ವಿಜ್ಞಾಪನೆಗಳು.



ದಿನಾಂಕ 04-01-2023ರ ಬುಧವಾರ ಬೆಳಗಿನ ಜಾವ 1-14 ಕ್ಕೆ
ನನ್ನ ಪೂಜ್ಯ ಪತಿಯವರು
ಹಾಗೂ ಕುಟುಂಬದ ಹಿರಿಯ ಚೇತನ ಮತ್ತು
ನಮ್ಮೆಲ್ಲರ ಮಾರ್ಗದರ್ಶಿಗಳಾಗಿದ್ದ

**ಶ್ರೀ ಎಸ್.ಎಂ. ರಾಜಶೇಖರಪ್ಪ**

ನಿವೃತ್ತ ಡೆಪ್ಯೂಟಿ ಸೆಕ್ರೆಟರಿ, ನೀರಾವರಿ ಇಲಾಖೆ
ಇವರು ಶಿವಾಧೀನರಾದ ಪ್ರಯುಕ್ತ, ಶ್ರೀಯುತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ
ಶ್ರೀ ತರಳಬಾಳು ಜಗದ್ಗುರು ಪರಮಪೂಜ್ಯ ಶ್ರೀ 1108
**ಶ್ರೀ ಶ್ರೀ ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ
ಇವರ ದಿವ್ಯ ಸಾನ್ನಿಧ್ಯದಲ್ಲಿ

ದಿನಾಂಕ 17-01-2023 ನೇ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ತರಳಬಾಳು ಸಭಾ ಭವನ, ಹದಡಿ ರಸ್ತೆ, ದಾವಣಗೆರೆ
ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ, ಲಿಂಗೈಕ್ಯರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು,

- ಶ್ರೀಮತಿ ಕೆ. ಸುಶೀಲ ರಾಜಶೇಖರಪ್ಪ
- ಡಾ|| ಶಶಿರೇಖಾ ಮತ್ತು ಡಾ|| ಶ್ರೀಹರ್ಷ
- ಶ್ರೀಮತಿ ತೇಜಸ್ವಿನಿ ಮತ್ತು ಶ್ರೀ ರಾಜು
- ಶ್ರೀಮತಿ ಪೂರ್ಣಿಮಾ ಮತ್ತು ಶ್ರೀ ಹರೀಶ್
- ಶ್ರೀಮತಿ ಶೋಭಾ ಮತ್ತು ಡಾ|| ಬಸವರಾಜ್

ಮೊಮ್ಮಕ್ಕಳು, ಸಹೋದರಿಯರು ಹಾಗೂ ಬಂಧು-ಮಿತ್ರರು. ಮೊ. : 98452 63057

*ವಿ.ಸೂ. : ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.*


JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte